# ದಿನಾಂಕ: 18.10.2015 ರಂದು ದಾವಣಗೆರೆ ನಗರದಲ್ಲಿ ಕರೆಯಲಾದ ಕರ್ನಾಟಕ ಮುನ್ಸಿಪಲ್ ಅಧಿಕಾರಿ ನೌಕರರ ಮಹಾಸಭೆಯ ಕರಡು ವಿಷಯ ಪಟ್ಟಿ (ಅಜೆಂಡಾ).

**1.ಸ್ಥಳೀಯ ಸರ್ಕಾರಗಳೆಂದು ಮರು ನಾಮಕರಣ:–**

ಸ್ಥಳೀಯ ಆಡಳಿತವನ್ನು ಸ್ಥಳೀಯ ಸಂಸ್ಥೆಗಳು ಎಂದು ಕರೆಯಲಾಗುತ್ತದೆ ಬಲಿಷ್ಠ ಭಾರತ ನಿರ್ಮಾಣಕ್ಕಾಗಿ ಇನ್ನು ಮುಂದೆ ಸ್ಥಳೀಯ ಸಂಸ್ಥೆಗಳನ್ನು 1947 ಪೂರ್ವದಲ್ಲಿ ಇದ್ದಂತೆ "ಸ್ಥಳೀಯ ಸರ್ಕಾರಗಳೆಂದು" ಕರೆಯಬೇಕು ಎಂದು ಸಂಘವು ಒತ್ತಾಯಿಸುತ್ತದೆ.

**2.ಪೌರಕಾರ್ಮಿಕರ ಯೋಗಕ್ಷೇಮ:**

ಬಹುಪಾಲು ಪೌರಕಾರ್ಮಿಕರು 60 ವರ್ಷ ತಲುಪುವ ಮೊದಲೇ ತೀವ್ರತರವಾದ ಕಾಯಿಲೆಗಳಿಗೆ ತುತ್ತಾಗಿ ನಿಧನಹೊಂದುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಅವರು ತುಂಬಾ ಅನಾರೋಗ್ಯಕರ ವಾತಾವರಣದಲ್ಲಿ ಕಾರ್ಯನಿರ್ವಹಿಸಬೇಕಾಗುತ್ತದೆ ಅಲ್ಲದೇ ಬಹುಪಾಲು ಜನರು ಮದ್ಯಪಾನಕ್ಕೆ ಶರಣಾಗಿರುವುದು ವಾಸ್ತವಿಕ ಅಂಶವಾಗಿದೆ.ಈ ಸಮಸ್ಯೆ ನಿವಾರಣೆಗಾಗಿ

1. ಪ್ರತಿ ದಿನ ಅವರು ತಮ್ಮ ಸಮವಸ್ತ್ರಗಳನ್ನು ಸ್ವಚ್ಛ ಗೊಳಿಸಲು ಸರ್ಕಾರದ ವೆಚ್ಚದಲ್ಲಿ ವ್ಯವಸ್ಥೆ ಮಾಡಬೇಕು. ಈ ಅಂಗವಾಗಿ ಅವರು ದಿನದ ಕಾರ್ಯ ಮುಗಿದ ಮೇಲೆ ವಾಶಿಂಗ್ ಮಶೀನ್‌ನಲ್ಲಿ ತಮ್ಮ ತಮ್ಮ ಸಮವಸ್ತ್ರಗಳನ್ನು ಸ್ವಚ್ಚಗೊಳಿಸಲು ಮತ್ತು ದಿನವು ಇಸ್ತ್ರಿ ಮಾಡಿಕೊಳ್ಳಲು (ಆಸ್ಪತ್ರೆಯ ದಾದಿಗಳಂತೆ) ಸೂಕ್ತ ವ್ಯವಸ್ಥೆ ಮಾಡಬೇಕು. ಕೆಲಸದ ನಂತರ ಕಡ್ಡಾಯವಾಗಿ ಸ್ನಾನಕ್ಕೆ ಅವಕಾಶ ನೀಡಬೇಕು.

   1.ಎ. ಅವರಿಗೆ ನೀಡಲಾದ ದಟ್ಟ ಬಣ್ಣದ (Dark Colour) ಬಟ್ಟೆಯ ಬದಲು ತೀಳಿ ಬಣ್ಣದ ಬಟ್ಟೆಗಳನ್ನು ನೀಡಬೇಕು.
2. ವಾರಕ್ಕೆ ಒಂದುಸಲ ಅವರಿಗೆ ಉಚಿತ ಟಬ್ ಬಾತ್ ಬಿಸಿ, ಅಥವಾ ತಣ್ಣೀರಿನ ಸ್ನಾನ ಮಾಡಲು ಅವಕಾಶ ಒದಗಿಸಬೇಕು.
3. ಅಥವಾ ಸ್ಥಳೀಯ ಸಂಸ್ಥೆಗಳ ಈಜುಕೊಳದಲ್ಲಿ ವಾರಕ್ಕೆ ಒಂದು ಬಾರಿ ಅವರಿಗಾಗಿ ಉಚಿತವಾಗಿ ಅವಕಾಶ ನೀಡಬೇಕು.
4. ಮಹಿಳಾ ಪೌರಾಕಾರ್ಮಿಕರಿಗೆ ಸೀರೆ ನೀಡುವ ಬದಲು ಪ್ಯಾಂಟು ಶರ್ಟುಗಳನ್ನು ನೀಡಬೇಕು ಸೀರೆಗಳನ್ನು ಸ್ವಚ್ಚಗೊಳಿಸುವುದು, ಪ್ಯಾಂಟ್ ಶರ್ಟ್‌ಗೆ ಹೊಲಿಸಿದಲ್ಲಿ ಕಷ್ಟಕರ.
5. ಪೌರಕಾರ್ಮಿಕರಿಗೆ ಒದಗಿಸುವ ಬೂಟುಗಳು ಉಷ್ಣ ಹವಾಮಾನಕ್ಕೆ ಹೊಂದಿಕೆ ಆಗಲಾರದು ಅದಕ್ಕಾಗಿ ವಿಶೇಷ ಬೂಟುಗಳನ್ನು ಒದಗಿಸಬೇಕು.
6. ತಲೆಗೆ ಧರಿಸುವ ಹೆಲ್ಮೆಟ್ ಅಥವಾ ಕ್ಯಾಪುಗಳು ಉಷ್ಣ ಹವಾಮಾನಕ್ಕೆ ಯೋಗ್ಯವಾಗಿರುವುದಿಲ್ಲ ಅದರ ಬದಲು ಅವರಿಗೆ ಪೇಟಾ ಸುತ್ತಿಸುವುದು ಸೂಕ್ತವೇ ಎಂಬ ಬಗ್ಗೆ ಅಧ್ಯಯನ ಮಾಡಿ ನಿರ್ದೇಶಿಸಬೇಕು. (Air Mask)?

7. ಪೌರಕಾರ್ಮಿಕರು ತಮ್ಮ ಮಕ್ಕಳಿಗಾಗಿ 10ನೇ ತರಗತಿವರೆಗೆ ನೀಡುವ ಶಾಲಾ ಶುಲ್ಕವನ್ನು ಸ್ಥಳೀಯ ಸರ್ಕಾರವು ಹೆಚ್ಚುವರಿಯಾಗಿ ನೀಡಬೇಕು.

3. **ಹೊರಗುತ್ತಿಗೆ ನೌಕರರ ಶೋಷಣೆ ತಡೆಗಟ್ಟುವುದು**

ಹೊರಗುತ್ತಿಗೆ ನೌಕರರನ್ನು ಖಾಯಂಗೊಳಿಸಬೇಕು ಎಂಬ ಬೇಡಿಕೆ ಇದೆ. ಇದೇ ಸಮಯಕ್ಕೆ ಡಿ ವೃಂದ ನೌಕರರನ್ನು ಖಾಯಂಗೊಳಿಸಿದಾಗ ಕಾರ್ಯ ದಕ್ಷತೆ ಕುಂಠಿತಗೊಂಡಿರುತ್ತದೆ ಅದಕ್ಕಾಗಿ ಹೊರಗುತ್ತಿಗೆ ಪದ್ಧತಿ ಜಾರಿಗೆ ತರಲಾಗಿದೆ ಎಂಬ ವಾದವೂ ಇದೆ. ಈ ಎರಡರ ಮಧ್ಯ ಕಾರ್ಮಿಕರನ್ನು ಶೋಷಣೆ ಮಾಡಲಾಗುತ್ತದೆ ಎಂಬ ಇನ್ನೊಂದು ವಾದವು ಇದೆ. ಪ್ರತಿ ವಾದಗಳಲ್ಲಿ ಭಾಗಶ: ಸತ್ಯಾಂಶವು ಇರುತ್ತದೆ. ಯಾವುದೇ ಪದ್ಧತಿ ಸಾರಾಸಗಟವಾಗಿ ಸರಿ ಅಥವಾ ತಪ್ಪು ಎಂದು ಹೇಳಲು ಬರುವುದಿಲ್ಲ.

**ಪೌರಕಾರ್ಮಿಕರ ಸ್ವಯಂ ಸಹಕಾರಿ ಸಂಘ**

ಆಧುನಿಕ ನಾಗರೀಕತೆಯಲ್ಲಿ ಪೌರಕಾರ್ಮಿಕರು ಅತ್ಯಂತ ಪ್ರಮುಖ ಸ್ಥಾನವನ್ನು ಹೊಂದಿರುತ್ತಾರೆ. ಅದೇ ಸಮಯಕ್ಕೆ ಅವರು ಅತ್ಯಂತ ನಿರ್ಲಕ್ಷಕ್ಕೆ ಒಳಗಾಗಿರುತ್ತಾರೆ. ಪೌರಕಾರ್ಮಿಕ ವೃತ್ತಿಯು ಸುಲಭ ವೃತ್ತಿ ಎಂದರೂ ಅದು ತನ್ನದೇ ಆದ ದೌರ್ಬಲ್ಯವನ್ನು ಹೊಂದಿರುತ್ತದೆ. ಈ ದೌರ್ಬಲ್ಯವನ್ನು ಪರಿಹರಿಸಿದಾಗಲೇ ನಾಗರೀಕತೆಯು ನಿರಂತರವಾಗಿ ಮುಂದುವರೆಯಲು ಸಾಧ್ಯವಿರುತ್ತದೆ.

ಪೌರಕಾರ್ಮಿಕರು ದುರ್ಬಲರಾಗಿದ್ದರು ಸಹ ಅವರು ಅಪರೋಕ್ಷವಾಗಿ ಕಿರುಕುಳ ನೀಡುತ್ತಾರೆ ಎಂಬ ಕಾರಣಕ್ಕಾಗಿ ಅವರ ಕ್ರಮಬದ್ಧ ಸೇವೆಯನ್ನು ಹೊರಗುತ್ತಿಗೆ ಸೇವೇಯಾಗಿ ಬದಲಾಯಿಸಲಾಯಿತು. ಆಡಳಿತ ಸೌಲಭ್ಯಕ್ಕಾಗಿ ಹೀಗೆ ಬದಲಾವಣೆ ಮಾಡಿದಾಗ ಗುತ್ತಿಗೆದಾರರ ದಬ್ಬಾಳಿಕೆಗೆ ಒಳಗಾಗಿ ಇಂದು ಅವರ ಸ್ಥಿತಿಗತಿ ತುಂಬಾ ಕೆಳಮಟ್ಟದಲ್ಲಿ ಇರುತ್ತದೆ. ಇಂದಿನ ಸ್ಥಿತಿಯಲ್ಲಿ ಅವರನ್ನು ಪೂರ್ಣ ಪ್ರಮಾಣದ ನೌಕರರೆಂದು ಪರಿಗಣಿಸದಿರಲು ಬೇಕಾಗುವ ನಾನಾ ಬಗೆಯ ನೀತಿ, ಕಟ್ಟುಪಾಡುಗಳನ್ನು ಬೆಳಸಿಕೊಂಡು ಬಂದಿರುವ ಹಿನ್ನೆಲೆಯಲ್ಲಿ ಅವರು ಕ್ರಮಬದ್ಧ ನೌಕರರು ಆಗಲು ಸಾಧ್ಯವಿಲ್ಲ ವೆಂದು ಹೆಳಲಾಗಿತ್ತಿದೆ. ಅದೇ ಸಮಯಕ್ಕೆ ಅವರು ಸ್ವಯಂ ಆಗಿ ಬಲಶಾಲಿಗಳಾಗಲು ಸರ್ಕಾರವು ಅವಶ್ಯಕ ಬೆಂಬಲ ನೀಡುವುದು ಸಹ ಅವಶ್ಯಕವಿರುತ್ತದೆ.

**ಈ ಹಿನ್ನೆಲೆಯಲ್ಲಿ**

1. ಸಧ್ಯಕ್ಕೆ ಪೌರಕಾರ್ಮಿಕರಾಗಿ ಸೇವೆ ಸಲ್ಲಿಸುತ್ತಿರುವ ಖಾಯಂ/ಗುತ್ತಿಗೆ ನೌಕರರನ್ನು ಒಳಗೊಂಡಂತೆ ನಲ್ಮ್ ಯೋಜನೆ ಉಪ ಅಂಗವಾಗಿ ನೆರೆಹೊರೆ ಸಮಿತಿಯನ್ನು ರಚಿಸಲು ಪ್ರತಿ ಸ್ಥಳೀಯ ಸಂಸ್ಥೆ ಕ್ರಮ ವಹಿಸಬೇಕು.
2. ಈ ನೆರೆಹೊರೆ ಸಮಿತಿಯನ್ನು ನಗರ ಮಟ್ಟದಲ್ಲಿ ಕನಿಷ್ಠ 500 ಗರಿಷ್ಠ 1000 ಜನ ಪೌರಕಾರ್ಮಿಕರಿಗಾಗಿ ಸ್ವಯಂ ಸಹಕಾರಿ ಸಂಘಗಳನ್ನು ರಚಿಸಬೇಕು. ಆಯಾ ನಗರ ಪ್ರದೇಶಕ್ಕೆ ಸಂಬಂಧಿಸಿದಂತೆ ಒಂದು ಅಥವಾ ಅದಕ್ಕಿಂತಲೂ ಹೆಚ್ಚು ಸಂಘಗಳನ್ನು ಸಂಘಟಿಸಬೇಕು.
3. ಈ ಸಂಘದ ಸದಸ್ಯರು ಕಾರ್ಯನಿರತ ಪೌರಕಾರ್ಮಿಕರು (ಖಾಯಂ/ಗುತ್ತಿಗೆ) ಅಥವಾ ವಯೋ ನಿವೃತ್ತ ಪೌರಕಾರ್ಮಿಕರಾಗಿರಬೇಕು.
4. (ಅ) ಸದರಿ ಸದಸ್ಯರು ತಮ್ಮ ಅಧಿಕೃತ ಆದಾಯದ ಶೇ.1% ಮೊತ್ತವನ್ನು ಸದಸ್ಯತ್ವ ಶುಲ್ಕವಾಗಿ ಪ್ರತಿ ತಿಂಗಳು ನೀಡಬೇಕು.

   (ಆ) ಗುತ್ತಿಗೆ ಕಾರ್ಮಿಕರು ಶೇ.0.5% ಮೊತ್ತವನ್ನು ಸದಸ್ಯತ್ವ ಶುಲ್ಕವಾಗಿ ಪ್ರತಿ ತಿಂಗಳು ನೀಡಬೇಕು.
5. ಈ ಸಂಘವನ್ನು ಸಂಘಟಿಸಲು ಪ್ರತಿ ಸ್ಥಳೀಯ ಸಂಸ್ಥೆ ತನ್ನಲ್ಲಿ ಲಭ್ಯವಿರುವ ಸಮುದಾಯ ಸಂಘಟನಾಧಿಕಾರಿ/ಸಮುದಾಯ ಸಂಘಟಕರು ಅವರ ಸೇವೆಯನ್ನು ಉಚಿತವಾಗಿ ಒದಗಿಸಬೇಕು.
6. ಪೌರಕಾರ್ಮಿಕರ ಸೇವೆಯನ್ನು ಹೊರ ಗುತ್ತಿಗೆ ಮೂಲಕ ಪಡೆಯುವಾಗ ಪ್ರತಿ ಸ್ಥಳೀಯ ಸಂಸ್ಥೆಯಲ್ಲಿ ಇರುವ ಈ ಸಂಘಗಳ ಮೂಲಕವೇ ಹೊ ಗುತ್ತಿಗೆ ಪಡೆಯಬೇಕು.
7. ಸರ್ಕಾರವು ಹೊರ ಗುತ್ತಿಗೆ ಮೊತ್ತವನ್ನು ಸಂಘಕ್ಕೆ ಪಾವತಿಸುತ್ತದೆ. ಸಂಘವು 15% ಆಡಳಿತ ವೆಚ್ಚವನ್ನು ಜನತಾ ಬಜಾರ ಮಾದರಿಯಲ್ಲಿ ಪಡೆದು ಸದರಿ ಗುತ್ತಿಗೆ ಮೊತ್ತವನ್ನು ಸಂಬಂಧಿಸಿದ ತನ್ನ ಸದಸ್ಯರಿಗೆ ವಿತರಿಸಬೇಕು.

8. ಪ್ರಾರಂಭದಲ್ಲಿ (3) ಮೂರು ವರುಷಗಳ ಅವಧಿಗೆ ಸದರಿ ಸಂಘದ ಆಡಳಿತ ವೆಚ್ಚವನ್ನು ಶೇ.24.10 ನಿಧಿಯಿಂದ ಆಯಾ ಸ್ಥಳೀಯ ಸಂಸ್ಥೆಗಳು ಭರಿಸಬೇಕು.
9. ನಗರ ಸ್ವಚ್ಛತೆಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಸರ್ಕಾರಕ್ಕೆ ಸೂಕ್ತ ಸಲಹೆ/ಸೂಚನೆ (City Sanitation Plan) ನೀಡಲು ಇದು ಅಧಿಕೃತ ಸಂಸ್ಥೆಯಾಗಿರಬೇಕು.
10. ಹೀಗೆ ರಚಿತವಾದ ಪೌರಕಾರ್ಮಿಕರ ಸ್ವಯಂ ಸಂಘಗಳ ಕಾರ್ಯಕ್ಷೇತ್ರಕ್ಕೆ ಮಿತಿ ಇರಲಾರದು. ಅವು ರಾಜ್ಯದ ಯಾವುದೇ ಸ್ಥಳೀಯ ಸಂಸ್ಥೆಯ ಟೆಂಡರ್‌ದಲ್ಲಿ ಸ್ಪರ್ಧೆ ನೀಡಬಹುದು.

## 3.ಎ. <u>**ಕಸ ನಿರ್ವಹಣಾ ನೀತಿ:**</u>

<u>**ಪ್ರಥಮ ಹಂತ:**</u>

ನಗರ ಪ್ರದೇಶದಲ್ಲಿ ಕಸ ನಿರ್ವಹಣೆ ವಾಸ್ತವಿಕವಾಗಿ ಅತೀಸರಳ ಮತ್ತು ಸುಲಭವಾದ ವಿಷಯವಾಗಿದೆ. ಆದರೆ ಇಂದು ಅದು ಅತ್ಯಂತ ಕಷ್ಟಕರ ಕೆಲಸವಾಗಿರುತ್ತದೆ. ಕಸ ನಿರ್ವಹಣೆಯನ್ನು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮಾಡಲು ಸಾಧ್ಯವಿಲ್ಲ. ಆದರೇ ನಗರ ಮಾಲಿಕರ ಸಮಿತಿ ಅಂದರೆ ವಾರ್ಡ್ ಕಮೀಟಿಗಳು ಮಾತ್ರ ಈ ಸಮಸ್ಯೆಯನ್ನು ಸುಲಭವಾಗಿ ನಿವಾರಿಸಬಹುದಾಗಿದೆ.

ಭಾರತದ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ರವರು ಈ ದೇಶ ನನ್ನದು, ಈ ರಸ್ತೆ ನನ್ನದು ಎಂದು ತಿಳಿದು ರಸ್ತೆ ಸ್ವಚ್ಛ ಮಾಡುವ ಧೈರ್ಯ, ಸಹಾಸ ಮಾಡಿದರು ಇಂದು ನಾವು ಎಲ್ಲರನ್ನೂ ಅದಕ್ಕಾಗಿ ಪ್ರಧಾನ ಮಂತ್ರಿಗಳನ್ನಾಗಿ ಮಾಡಬೇಕಾಗಿದೆ, ಇಲ್ಲವೇ ಆ ಮನೋಭಾವನೆ ಜನರಲ್ಲಿ ಬೆಳಸಬೇಕಾಗಿದೆ.

ಈ ಮನೆ ನನ್ನದು ಎಂಬ ಭಾವನೆ ನನ್ನಲ್ಲಿ ಬಂದಾಗ ನಾನು ಪ್ರೀತಿಯಿಂದ ಮನೆ ಸ್ವಚ್ಛವಾಗಿಡುತ್ತೇನೆ.ಈ ಊರು ನನ್ನದು ಎಂದಾಗ ನಾನು ಸಂತೋಷದಿಂದ ಊರನ್ನು ಸ್ವಚ್ಛವಾಗಿಡುತ್ತೇನೆ. ಕಠೋರ ಸತ್ಯವೆಂದರೆ ಬಹುಪಾಲು ಜನರಿಗೆ, ಈ ಊರು ಯಾರದೋ, ಈ ಸರ್ಕಾರ ಯಾರದೋ ಆಗಿದೆ. ಈ ಮೂಲಭೂತ ಬದಲಾವಣೆಯನ್ನು ತರಲು ಶಿಕ್ಷಣವು ಮಹತ್ತರ ಪಾತ್ರ ವಹಿಸಬೇಕಾಗಿದೆ. ಅಂತರ್ರಾಷ್ಟ್ರೀಯ ಮಟ್ಟದ ಪ್ರತಿಷ್ಠಿತ ಶಾಲೆಗಳಲ್ಲಿ ಒಂದಾದ ಮೈಸೂರಿನ ಶ್ರೀ ರಾಮಕೃಷ್ಣ ವಸತಿ ಶಾಲೆಯಲ್ಲಿ 6ನೇ ತರಗತಿಯಿಂದ 12ನೇ ತರಗತಿ ವರೆಗೆ ಶಾಲಾ ಆವರಣ ಸ್ವಚ್ಛಗೊಳಿಸಲು, ಶೌಚ್ಚಾಲಯ ಸ್ವಚ್ಛಗೊಳಿಸಲು ತರಬೇತಿ ನೀಡುತ್ತಾರೆ. ಇದರ ಮುಂದುವರೆದ ಭಾಗವಾಗಿ ಎನ.ಎಸ್.ಎಸ್ ತತ್ವ ಸಿದ್ಧಾಂತಗಳನ್ನು ಸೇರ್ಪಡೆ ಮಾಡಿ 8ನೇ ತರಗತಿಯಿಂದ 12ನೇ ಕ್ಲಾಸಿನವರೆಗಿನ ಎಲ್ಲಾ ಶಾಲಾ ವಿದ್ಯಾರ್ಥಿಗಳು ತಮ್ಮ ಶಾಲೆಯ ಆವರಣ ವಲ್ಲದೇ ಶಾಲೆಯ ಪಕ್ಕದ ಒಂದು ಸಾರ್ವಜನಿಕ ರಸ್ತೆಯನ್ನು ಪ್ರತಿ ತಿಂಗಳಲ್ಲಿ ಒಂದು ಸಲ ಮಾತ್ರ 2 ತಾಸು ಸ್ವಚ್ಛ ಗೊಳಿಸುವ ಕಾರ್ಯಕ್ರಮ ಹಮ್ಮಿ ಕೊಳ್ಳಬೇಕು ಎಂದು ಕರ್ನಾಟಕ ವಿಧಾನ ಸಭೆಯ ಅರ್ಜಿಸಮಿತಿ ದಿನಾಂಕ: 17.07.2015 ರಂದು ಶಿಫಾರಸ್ಸು ಮಾಡಿದಾಗ ಕರ್ನಾಟಕ ಪ್ರಬುದ್ಧ ಪತ್ರಿಕೆಗಳು ಅದನ್ನು ಬೆಂಬಲಿಸಲಿಲ್ಲ ಬದಲಾಗಿ "ವಿದ್ಯಾರ್ಥಿಗಳಿಗೆ ಸ್ವಚ್ಛತೆಯ ಕಾಟ" ಎಂಬ ತಲೆ ಬರಹದಡಿಯಲ್ಲಿ ಅರ್ಜಿಸಮಿತಿ ಶಿಫಾರಸ್ಸನ್ನು ಟೀಕಿಸಿದವು. ಪತ್ರಿಕೆಗಳ ಈ ನಿಲುವು ಬಹುಪಾಲು ಸಾರ್ವಜನಿಕರು ರಾಷ್ಟ್ರದ ಬಗ್ಗೆ ಹೊಂದಿದ ಅಭಿಮಾನ ಪ್ರೀತಿಯನ್ನು ಪರೋಕ್ಷವಾಗಿ ವ್ಯಕ್ತಪಡಿಸಿರುವುದು ಇಲ್ಲಿ ಸಾಬೀತಾಗಿದೆ. ಈ ಲೋಪವನ್ನು ಸರಿಪಡಿಸಲು ಸಂಘವು ಒತ್ತಾಯಿಸುತ್ತದೆ.

## <u>**ದ್ವಿತಿಯ ಹಂತ:**</u>

ಶೂನ್ಯ ಕಸ ವಿಲೇವಾರಿ ಪದ್ಧತಿ.

ಮೈಸೂರಿನ ಕೆಲ ಆಯ್ದ ಪ್ರದೇಶದಲ್ಲಿ ಈ ಪದ್ಧತಿ ಬಹಳ ವರ್ಷಗಳಿಂದ ರೂಢಿಯಲ್ಲಿ ತರಲಾಗಿದೆ. ಇಲ್ಲಿ ಕಸವನ್ನು ಮೂಲದಲ್ಲಿಯೇ ಹಸಿ ಮತ್ತು ಒಣ ಎಂದು ವಿಂಗಡಿಸಲಾಗುತ್ತದೆ. ಒಣ ಕಸವನ್ನು ಪುನಃ 25–26 ವಿಭಾಗಗಳಾಗಿ ವಿಂಗಡಿಸಿ ಪ್ರತಿ ಒಣ ಕಸವನ್ನು ಕೈಗಾರಿಕೆಗಳಿಗೆ ಮಾರಾಟ ಮಾಡಲಾಗುತ್ತದೆ. ಹಸಿ ಕಸವನ್ನು ಕಾಂಪೋಷ್ಟ್ ಗೊಬ್ಬರವನ್ನಾಗಿ ಮಾಡಲಾಗುತ್ತದೆ. ಈ ಕಾಂಪೋಷ್ಟ ಗೊಬ್ಬರವನ್ನು 60 ದಿನಗಳ ನಂತರ ಮಾರಾಟ

ಮಾಡಲಾಗುತ್ತದೆ. ಇಲ್ಲಿ ಕಸ ಸಂಗ್ರಹಿಸುವ ಪ್ರಶ್ನೆಯೇ ಇರುವುದಿಲ್ಲ. ಇದನ್ನು ಎಲ್ಲಾ ಕಡೆಯು ಅನುಷ್ಠಾನಗೊಳಿಸ ಬಹುದಾಗಿದೆ. ಮತ್ತು ಅನುಷ್ಠಾನಗೊಳಿಸಲೇ ಬೇಕಾಗಿದೆ.

## ಮೂರನೇ ಹಂತ:

ಒಟ್ಟು ಜನ ಸಂಖ್ಯೆಯಲ್ಲಿ 5% ಜನ ಅತೀ ಬುದ್ಧಿವಂತರು ಇರುವಂತೆ 5% ಜನ ಪ್ರತಿ ಹಂತದಲ್ಲಿ ಪ್ರತಿ ರೋಧ ವ್ಯಕ್ತ ಪಡಿಸುವವರು ಎಲ್ಲಾ ಹಂತದಲ್ಲಿ ಇರುತ್ತಾರೆ. ಇವರಿಗೆ ಸ್ಥಳದಲ್ಲಿ ದಂಡ ವಿಧಿಸುವ ಮೂಲಕ ಮತ್ತು ಇತರ ಶಿಕ್ಷೆ ನೀಡುವ ಮೂಲಕ ಇವರನ್ನು ನಿಯಂತ್ರಣಕ್ಕೆ ತರಬೇಕಾಗುತ್ತದೆ. ಈ ಕಾರಣ ವಿದೇಶದಲ್ಲಿ ಮುನ್ಸಿಪಾಲಿಟಿಗಳು ಪೋಲೀಸ್ ಅಧಿಕಾರ ಹೊಂದಿದಂತೆ ನಮ್ಮ ರಾಜ್ಯದಲ್ಲಿಯೂ ಮುನ್ಸಿಪಾಲಿಟಿ ಸಿಬ್ಬಂದಿಗಳಿಗೆ ಸೂಕ್ತ ಪೋಲೀಸ್ ಅಧಿಕಾರ ನೀಡಲೇಬೇಕು. ದಿನಾಂಕ: 17.07.2015 ರಂದು ಅರ್ಜಿ ಸಮಿತಿ ಮುನ್ಸಿಪಾಲಿಟಿಗಳಿಗೆ ಪೋಲೀಸ್ ಅಧಿಕಾರ ನೀಡಲು ಸ್ಪಷ್ಟವಾಗಿ ಶಿಫಾರಸ್ಸು ಮಾಡಿದ್ದು ಸದರಿ ಶಿಫಾರಸ್ಸು ಕೂಡಲೇ ಅನುಷ್ಠಾನಗೊಳ್ಳಲಿ ಎಂದು ಸಂಘವು ಆಗ್ರಹ ಪೂರ್ವಕವಾಗಿ ಒತ್ತಾಯಿಸುತ್ತದೆ.

4. **ಅರ್ಜಿ ಸಮಿತಿ ಶಿಫಾರಸ್ಸು ಅನುಷ್ಠಾನ;**

ದಿನಾಂಕ 17.07.2015ರಂದು ಕರ್ನಾಟಕ ರಾಜ್ಯ ವಿಧಾನ ಸಭೆ ಅರ್ಜಿ ಸಮಿತಿಯು ಸ್ಥಳೀಯ ಆಡಳಿತ ಬಲಪಡಿಸಲು ಡಾ|| ಪಾಂಡುರಂಗ ಪಾಟೀಲರು ನೀಡಿರುವ ಆರು ಸೂಚನೆಗಳನ್ನು ಸಮಗ್ರವಾಗಿ ಪರಿಶೀಲಿಸಿ ವಿಶ್ಲೇಶಿಸಿ ಅವುಗಳನ್ನು ಕೂಡಲೇ ಅನುಷ್ಠಾನಗೊಳಿಸಲು ಸಮಿತಿ ಶಿಫಾರಸ್ಸು ಮಾಡಿರುತ್ತದೆ ಅರ್ಜಿ ಸಮಿತಿ ಶಿಫಾರಸ್ಸುಗಳನ್ನು ಕೂಡಲೇ ಅನುಷ್ಠಾನಗೊಳಿಸಲು ಸಂಘವು ಕೋರುತ್ತದೆ/ಒತ್ತಾಯಿಸುತ್ತದೆ.

1. ಅ. ಅರಣ್ಯ ಇಲಾಖೆ ಮಾದರಿಯಲ್ಲಿ ಮುನ್ಸಿಪಾಲಿಟಿಗಳಿಗೆ ಪೋಲೀಸ್ ಅಧಿಕಾರ ನೀಡಬೇಕು.

ಆ. ಮುಖ್ಯಾದಿಕಾರಿ/ಪೌರಾಯುಕ್ತರು, ಇತರ, ಗ್ರೂಪ್ 'ಎ' ವೃಂದದ ಮುನ್ಸಿಪಲ್ ಅಧಿಕಾರಿಗಳಿಗೆ ಸಿಆರ್.ಪಿಸಿ 133 ಅಡಿಯಲ್ಲಿ ಅಧಿಕಾರ ನೀಡಬೇಕು.

ಇ. ಪ್ರತ್ಯೇಕ ಮುನ್ಸಿಪಲ್ ಮಾಜಿಸ್ಟ್ರೇಟ್ ಹುದ್ದೆ ಸೃಷ್ಠಿ ಮಾಡಿ ಮುನ್ಸಿಪಲ್ ವಿವಾದಗಳು ತೀವ್ರ ಇತ್ಯಾರ್ಥವಾಗಲು ವ್ಯವಸ್ಥೆಯಾಗಬೇಕು.

2. ಅ.ಸ್ಥಳಿಯ ಸರ್ಕಾರಗಳಿಗೆ ಎಸ್.ಎಫ್.ಸಿ ಅನುದಾನಗಳನ್ನು ನೀಡದೇ ರಾಜ್ಯ ಸರ್ಕಾರದ ಎಲ್ಲಾ ತೆರಿಗೆ ಮೂಲಗಳಲ್ಲಿಯೇ 10% ಆದಾಯ ಹಂಚಿಕೆ ಮಾಡಬೇಕು.

ಆ. ದಂಡ, ಶುಲ್ಕ ಹಾಗೂ ವಿವಿಧ ಹಂತದಲ್ಲಿ ವೆಚ್ಚ ಮಾಡುವ ಆರ್ಥಿಕ ಅಧಿಕಾರಗಳನ್ನು ನಿರಂತರವಾದ ಪರಿಷ್ಕರಣೆಗಾಗಿ ರಾಜ್ಯ ಮಟ್ಟದಲ್ಲಿ ಕಾಯಂ ಸಮಿತಿ ರಚನೆ ಮಾಡಬೇಕು. ಕರ್ನಾಟಕ ಕಾನೂನು ಆಯೋಗವು ಸಹ ಕೆಲವು ವರ್ಷಗಳ ಹಿಂದೆ ಶಿಫಾರಸ್ಸು ಮಾಡಿರುತ್ತದೆ ಇಂದಿಗೂ ಅನುಷ್ಠಾನಗೊಂಡಿರುವುದಿಲ್ಲ.

3. ಸಾರ್ವಜನಿಕರಲ್ಲಿ ಸಂವೇದನಾಶೀಲ ಸ್ವಚ್ಛತಾ ಮನೋಭಾವಕ್ಕೆ ಸಂಬಂಧಿಸಿದಂತೆ ಸಕಾರಾತ್ಮಕ ಬದಲಾವಣೆಗಾಗಿ ಎನ್.ಎಸ್.ಎಸ್ ತತ್ವ ಸಿದ್ಧಾಂತಗಳನ್ನು 13ನೇ ತರಗತಿ ಬದಲು 8 ತರಗತಿಯಿಂದಲೇ ಅನುಷ್ಠಾನಗೊಳಿಸಬೇಕು. ಮೈಸೂರಿನ ಶ್ರೀರಾಕೃಷ್ಣ ವಸತಿ ಶಾಲೆಯಲ್ಲಿ ಇರುವಂತೆ ರಾಜ್ಯದ ಎಲ್ಲಾ ಶಾಲೆಗಳಲ್ಲಿ ಅನುಷ್ಠಾನಗೊಳಿಸಬೇಕು.

4. ಸಾರ್ವಜನಿಕರಲ್ಲಿ ವೈಜ್ಞಾನಿಕ ಮನೋಭಾವನೆ ಬೆಳವಣಿಗೆಗಾಗಿ ಆಯಾ ಸ್ಥಳೀಯ ಸರ್ಕಾರಗಳಲ್ಲಿ ಹಿಂದಿನ ವರ್ಷದ ವಾಸ್ತವಿಕ ವೆಚ್ಚಗಳ 0.5% ಮೊತ್ತವನ್ನು ಪ್ರತಿ ವರ್ಷ ಪ್ರಸ್ತುತ ಸಾಲಿಗಾಗಿ ಕಾಯ್ದಿರಿಸುವುದು.

5. ಸ್ಥಳೀಯ ಸರ್ಕಾರಗಳಿಗೆ ಸಾಮಾಜಿಕ ಜವಾಬ್ದಾರಿ.

1. ಸ್ಥಳೀಯ ಸರ್ಕಾರದ ವ್ಯಾಪ್ತಿಯಲ್ಲಿ ಯಾರೂ ಉಪವಾಸದಿಂದ ಸಾಯಬಾರದು.

2. ಸ್ಥಳೀಯ ಸರ್ಕಾರದ ವ್ಯಾಪ್ತಿಯಲ್ಲಿ ಯಾರೂ ಆತ್ಮಹತ್ಯೆ ಮಾಡಿಕೊಳ್ಳಬಾರದು.

ಈ ಜವಾಬ್ದಾರಿ ನಿರ್ವಹಿಸಲು ಸ್ಥಳೀಯ ಸರ್ಕಾರಗಳು ಸಮರ್ಥವಾಗಿರಬೇಕು. ಇದಕ್ಕೆ ಪೂರಕವಾಗಿ

(ಅ.) ಎಲ್ಲಾ ಸಾಮಾಜಿಕ ಸೌಲಭ್ಯಗಳ ನಿಯಂತ್ರಣ /ಅನುಷ್ಠಾನ ಸ್ಥಳೀಯ ಸರ್ಕಾರಗಳ ಅಧಿಕಾರ ವ್ಯಾಪ್ತಿಗೆ ನೀಡಬೇಕು.ಉದಾಹರಣೆಗೆ, ಭಿಕ್ಷುಕರ ಪರಿಹಾರ ಕೇಂದ್ರ, ವೃದ್ಧಾಶ್ರಮಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸೇವಾ ಕಾರ್ಯಕ್ರಮ, ಯುವ ಜನ ಸೇವಾ ಇಲಾಖೆ, ಉದ್ಯೋಗ ತರಬೇತಿ ಕಾರ್ಯ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಇತ್ಯಾದಿ.

(ಆ.) ನಗರಪ್ರದೇಶಗಳಲ್ಲಿ 10ನೇಯ ತರಗತಿ ವರೆಗಿನ ಶಿಕ್ಷಣ ಆಡಳಿತ

(ಇ.) ನಗರ ಪ್ರದೇಶದ ಎಲ್ಲಾ ಪ್ರಾಥಮಿಕ ಆಸ್ಪತ್ರೆಗಳು.

6. (ಅ.)ಸ್ಥಳೀಯ ಸರ್ಕಾರಗಳಲ್ಲಿ ಜಾರಿಯಲ್ಲಿ ಇರುವ ಅವಿಶ್ವಾಸ ನಿರ್ಣಯ ರದ್ದು ಪಡಿಸಿ ಮಹಾಅಭಿಯೋಗ ವ್ಯವಸ್ಥೆ ಜಾರಿಗೆ ತರಬೇಕು.

(ಆ.) ನಗರಸ್ಥಳೀಯ ಸಂಸ್ಥೆ ಸದಸ್ಯರು ಗೌರವಯುತವಾಗಿ ಜೀವನ ನಿರ್ವಹಣೆಗಾಗಿ ಸರ್ಕಾರದ ನೌಕರರಿಗೆ ಸಮನಾದ ವೇತನ ಭತ್ಯೆ ಸಹಿತ ಎಲ್ಲಾ ಸೌಲಭ್ಯಗಳನ್ನು ನೀಡುವುದು.

ಹೆಚ್ಚಿನ ವಿವರಗಳಿಗೆ ಕರ್ನಾಟಕ ರಾಜ್ಯ ವಿಧಾನ ಸಭೆ ಅರ್ಜಿ ಸಮಿತಿಯ 19ನೇಯ ವರದಿಯನ್ನು WWW.kmoea.in/home ದಲ್ಲಿ ನೋಡಿರಿ.

**5.ಬಡ್ತಿಯಲ್ಲಿ ಎಲ್ಲರಿಗೂ ಅವಕಾಶ:**

ನಗರಾಡಳಿತದಲ್ಲಿ ಕೆಲವು ಸಮುದಾಯಗಳನ್ನು ಹೊರತು ಪಡಿಸಿ ಯಾರೂ ಪೌರಕಾರ್ಮಿಕರಾಗಲು ಸ್ವಯಂ ಸ್ಪೂರ್ತಿಯಿಂದ ಸಾಮಾನ್ಯವಾಗಿ ಮುಂದೆ ಬರುವುದಿಲ್ಲ. ಅದೇ ಸಮಯದಲ್ಲಿ ನಗರಾಡಳಿತದ ಎಲ್ಲಾ ಸಿಬ್ಬಂದಿಗಳು ಮುಖ್ಯಾಧಿಕಾರಿ ಹಾಗೂ ಪೌರಾಯುಕ್ತರ ಹುದ್ದೆ ಅಲಂಕರಿಸಲು ಸಾಮಾನ್ಯವಾಗಿ ಇಚ್ಛಿಸುತ್ತಾರೆ. ಇನ್ನು ಕೆಲವು ಹುದ್ದೆಗಳಲ್ಲಿ ಬಡ್ತಿ ಸಿಗುವುದೇ ಇಲ್ಲವೆಂದು ಕೊರಗುತ್ತಾರೆ. ಬೇರೆ ಇಲಾಖೆ ಅಧಿಕಾರಿ/ಸಿಬ್ಬಂದಿಗಳು ಸಹಾ ಪೌರಾಡಳಿ/ನಗರಾಡಳಿತದಲ್ಲಿ ಮುಖ್ಯಾಧಿಕಾರಿ/ಪೌರಾಯುಕ್ತ ಹುದ್ದೆ ಪಡೆಯಲು ಇಚ್ಛಿಸುತ್ತಾರೆ. ಎಲ್ಲರಿಗೂ ಅವಕಾಶ ನೀಡುವ ಅಂಗವಾಗಿ, ಇಂದು ಪೌರಕಾರ್ಮಿಕರು ಸಹ ಮುಖ್ಯಾಧಿಕಾರಿ/ ಪೌರಾಯುಕ್ತರಾಗಲು ಅವಕಾಶ ನೀಡುವುದು ಅವಶ್ಯಕವಾಗಿದೆ ಅದೇ ಪ್ರಕಾರ ಪ್ರತಿ ವೃಂದದಲ್ಲಿ ಕನಿಷ್ಠ 2–3 ಬಡ್ತಿಗಳು ದೊರೆಯುವಂತೆ ನೋಡಿಕೊಳ್ಳಬೇಕಾಗಿದೆ.ಈ ಅಂಗವಾಗಿ ಕೆಪಿಎಸ್‌ಸಿಯು ಮುಖ್ಯಾಧಿಕಾರಿಗಳ ಹುದ್ದೆಗಾಗಿ ನಡೆಸುವ ಪರೀಕ್ಷೆಯಲ್ಲಿ 50% ಹುದ್ದೆಗಳನ್ನು ಮುನ್ಸಿಪಲ್‌ನಲ್ಲಿ ಐದು ವರ್ಷ ಸೇವೆ ಸಲ್ಲಿಸಿದ ಎಲ್ಲ ವೃಂದದ ನೌಕರರಿಗೆ ಮೀಸಲಿಡಬೇಕು. ಉದಾಹರಣೆಗೆ ಒಬ್ಬ ಪೌರಕಾರ್ಮಿಕರು ಮುನಿಸಿಪಲ್ ಸೇವೆಗೆ ಸೇರಿದ ತರುವಾಯ ಅವನು ಪದವಿ ಪರೀಕ್ಷೆ ಪಾಸು ಮಾಡಿಕೊಂಡಿದ್ದರೆ, ಮತ್ತು ಅವನ ವಯಸ್ಸು 45 ಕ್ಕಿಂತಲು ಕಡಿಮೆ ಇದ್ದಲ್ಲಿ ಅವನು ಕೆಪಿಎಸ್‌ಸಿ ಪರೀಕ್ಷೆಯ 50% ಮೀಸಲಾತಿಯಲ್ಲಿ ಸ್ಪರ್ಧಿಸಬಹುದು. ಒಂದು ಪಕ್ಷ ಆಯ್ಕೆಆದಲ್ಲಿ ಮುಖ್ಯಾಧಿಕಾರಿಯಾಗಿ ಮುಂದಿನ 10–15 ವರ್ಷ ಕಾರ್ಯ ನಿರ್ವಹಿಸಬಹುದು. ಈ ಸೌಲಭ್ಯ ಎಲ್ಲಾ ವೃಂದದ ಸಿಬ್ಬಂದಿಗಳಿಗೆ ವಿಸ್ತರಿಸಬೇಕು Accountants,SDC,FDC,Environment Engineer, RI,SI,FGRI,CO,CAO, AO ಇತ್ಯಾದಿ, ಅವರಿಗೂ ವಿಸ್ತರಿಸಬೇಕು. (ಐದು ವರ್ಷ ಕ್ರಮಬದ್ದ ಸೇವೆ, ಕ್ರಮಬದ್ಧ ಪಧವಿ ಹೊಂದಿರಬೇಕು 45 ವರ್ಷದೊಳಗೆ ಇರುವ ಮುನಿಸಿಪಲ್ ಸಿಬ್ಬಂದಿಗೆ ಕೆಪಿಎಸ್‌ಸಿ **CO-I, CO-II,MC-II** ಹುದ್ದೆ ನೇಮಕಾತಿಯಲ್ಲಿ 50% ಮೀಸಲಾತಿನೀಡಬೇಕು).

**6.ಫೇಲಾದ ಅಭ್ಯರ್ಥಿಗಳಿಗೆ ಮೀಸಲಾತಿ:**

ಇತ್ತೀಚಿನ ದಿನಗಳಲ್ಲಿ ಪೌರಕಾರ್ಮಿಕರು ಎಸ್.ಎಸ್.ಎಲ್.ಸಿ ಪಾಸಾಗಿರಬೇಕೆಂದು ಡಿಪಿಎಆರ್ ನಿಯಮ ಮಾಡಿರುತ್ತದೆ ಸರ್ಕಾರವು ಎಲ್ಲ ಹುದ್ದೆಗಳನ್ನು ಪಾಸದವರಿಗೆ ನೀಡಿದರೆ, ಎಸ್.ಎಸ್.ಎಲ್.ಸಿ ಫೇಲ್ ಆದವರ ಕಲ್ಯಾಣಕ್ಕಾಗಿ ಸರ್ಕಾರ ಏನು ಮಾಡಲು ಸಾಧ್ಯವಿಲ್ಲವೆ? ನಿರಕ್ಷರಿಗೆ ಗೌರವಯುತವಾಗಿ ಬದುಕಲು ನಾಗರಿಕ ಸಮಾಜದಲ್ಲಿ ಅವಕಾಶವಿಲ್ಲವೆ? ಈ ಗಂಭೀರ ಸಾಮಾಜಿಕ ಅಸಮಾನತೆಯ ಸಮಸ್ಯೆ ನಿವಾರಣೆಗಾಗಿ ಸರ್ಕಾರವು ಪೌರಕಾರ್ಮಿಕರ ಹಾಗೂ ಎಲ್ಲಾ ಗ್ರೂಪ್–ಡಿ ಹುದ್ದೆಗಳನ್ನು ಎಸ್.ಎಸ್.ಎಲ್.ಸಿ ಫೇಲಾದವರಿಗೆ ಮತ್ತು ಏಳನೆ ಕ್ಲಾಸ್ ಫೇಲಾದವರಿಗೆ 85% ಮೀಸಲಾತಿ ನೀಡಲು ಸಂಘವು ಒತ್ತಾಯಿಸುತ್ತದೆ ಮತ್ತು ಎಸ್.ಎಸ್.ಎಲ್.ಸಿಯಲ್ಲಿ 50%ಕ್ಕಿಂತಲು ಕಡಿಮೆ ಅಂಕ ಪಡೆದವರಿಗೆ ಪೌರಕಾರ್ಮಿಕರ / ಗ್ರೂಪ್–ಡಿದಲ್ಲಿ 15% ಮೀಸಲಾತಿ ನೀಡಲು ಒತ್ತಾಯಿಸುತ್ತದೆ ಎಸ್.ಎಸ್.ಎಲ್.ಸಿಯಲ್ಲಿ 50%ಕ್ಕಿಂತ ಹೆಚ್ಚು ಅಂಕ ಪಡೆದವರು ಪೌರಕಾರ್ಮಿರ ಹುದ್ದೆಗೆ ಮತ್ತು ಗ್ರೂಪ್ ಡಿ ಹುದ್ದೆಗೆ ಅನರ್ಹ ಎಂದು ಘೋಷಿಸಿ ಫೇಲಾದವರ ರಕ್ಷಣೆಯನ್ನು ಸರ್ಕಾರ ಮಾಡಬೇಕೆಂದು ಕೊರುತ್ತೇವೆ. (ವಿವರಗಳಿಗೆ ಅನುಭಂದ–I ನೋಡಿರಿ).

7. **ಪರಿಶಿಷ್ಟ ಜಾತಿ, ಪರಿಶಿಷ್ಠ ಪಂಗಡ ಕಲ್ಯಾಣ ಕಾರ್ಯಕ್ರಮ ಅನುಷ್ಠಾನ ವಿಧಾನ:**

1) ಅನುಸೂಚಿತ ಜಾತಿ / ಅನುಸೂಚಿತ ಪಂಗಡದ ಕಲ್ಯಾಣ ಯೋಜನೆ 1977 ರ ಪೂರ್ವದಿಂದಲೂ ಪ್ರಾರಂಭವಾಗಿದ್ದು, ಇಂದಿಗೆ 37 ವರ್ಷಗಳು ಗತಿಸಿರುತ್ತದೆ. ಈ ಯೋಜನೆಗಾಗಿ ಇಂದಿನವರೆಗೆ ಸರ್ಕಾರವು ಈ ಯೋಜನೆಯ ಕಾರ್ಯಭಾರದ (ತಿಂಡಿಇ ಟಿಂಚಿಜ ಣಣಜಥಿ) ಬಗ್ಗೆ ಅಧ್ಯಯನವನ್ನು ಮಾಡಿರುವುದಿಲ್ಲ. ಕಾರ್ಯಭಾರಕ್ಕೆ ತಕ್ಕಂತೆ ಸಿಬ್ಬಂದಿಗಳನ್ನು ಸೃಷ್ಟಿಸಿರುವುದಿಲ್ಲ ಮತ್ತು ಒದಗಿಸಿರುವುದಿಲ್ಲ ಎಂಬುದು ಸ್ಪಷ್ಟವಾಗಿರುತ್ತದೆ. ಈ ಯೋಜನೆ ಯಶಸ್ವಿಯಾಗಬೇಕಾದಲ್ಲಿ ರಾಜ್ಯ ಸರ್ಕಾರವು ಈ ಯೋಜನೆಯ ಕಾರ್ಯಭಾರವನ್ನು ಆಯಾ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಕಾರ್ಯದ ಭಾರದ ಅಧ್ಯಯನ ಮಾಡಲು ಕ್ರಮ ಜರುಗಿಸುವುದು ಅತೀ ಅವಶ್ಯವಾಗಿರುತ್ತದೆ.

2) ಹೀಗೆ ಕ್ರಮ ಜರುಗಿಸಿ ಅಧ್ಯಯನ ವರದಿಯನ್ನು ಪಡೆಯುವ ಪೂರ್ವದಲ್ಲಿ ತಾತ್ಕಾಲಿಕವಾಗಿ ಪ್ರತಿ 2,000 ಫಲಾನುಭವಿಗಳಿಗೆ ಅಥವಾ 400 ಕುಟುಂಬಗಳಿಗೆ ಒಬ್ಬರಂತೆ ಒಬ್ಬ ಪ್ರತ್ಯೇಕ ಸಿಬ್ಬಂದಿಯನ್ನು ಶೇ.24.10% ಕಾರ್ಯಗಳಿಗೆ ನೇಮಕಾತಿ ಮಾಡುವುದು.

ಹೀಗೆ ಗುತ್ತಿಗೆ ಆಧಾರದಲ್ಲಿ ನೇಮಕಗೊಂಡ ಸಿಬ್ಬಂದಿಯ ವೇತನ ಭತ್ಯೆಗಳನ್ನು ಶೇ.24.10% ನಿಧಿಯಿಂದಲೇ ಪಾವತಿಸಲು ವ್ಯವಸ್ಥೆ ಮಾಡುವುದು.

1) ಹೀಗೆ ನೇಮಕಗೊಂಡ ಸಿಬ್ಬಂದಿಯು ಮತದಾರರ ಯಾದಿಯನ್ನು ಪರಿಶೀಲಿಸಿ ಮತದಾರರ ಯಾದಿಯಲ್ಲಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಮತದಾರರನ್ನು ಗುರುತಿಸಬೇಕು. ಹೀಗೆ ಗುರುತಿಸಿ ಪ್ರಥಮ ಯಾದಿಯನ್ನು ಸಿದ್ಧಪಡಿಸಬೇಕು.
2) ಪ್ರಥಮ ಯಾದಿಯಲ್ಲಿ ಯಾರ ವಾರ್ಷಿಕ ಆಧಾಯವು ರೂ.2.00 ಲಕ್ಷಕ್ಕಿಂತ ಅಧಿಕವಾಗಿದೆ ಎಂಬುದನ್ನು ಗುರುತಿಸಿ, ಅವರನ್ನು ಕೈಬಿಟ್ಟು 2ನೇ ಯಾದಿಯನ್ನು ಸಿದ್ಧಪಡಿಸಬೇಕು.
3) 2ನೇ ಯಾದಿ ಸಿದ್ಧವಾದ ತರುವಾಯ ಪ್ರತಿ ಕುಟುಂಬದ ವಿವರಗಳು ಶೈಕ್ಷಣಿಕ ಮತ್ತು ಸಾಮಾಜಿಕ, ದೈಹಿಕ (ಆರೋಗ್ಯ) ಇತ್ಯಾದಿ ಮಾಹಿತಿಯೊಂದಿಗೆ 3ನೇ ಯಾದಿಯನ್ನು ಸಿದ್ಧಪಡಿಸಬೇಕು.

3) ಈ 3ನೇ ಯಾದಿಯಲ್ಲಿರುವ ಕುಟುಂಬದ ಆದಾಯ, ಜಾತಿ ಪ್ರಮಾಣ ಪತ್ರ ಮತ್ತು ಅವರ ಸಾಮಾಜಿಕ, ಶೈಕ್ಷಣಿಕ, ವಸತಿ, ಆರೋಗ್ಯ ಇತ್ಯಾದಿ ವಿಷಯಗಳು ಕೂಡಲೇ ಲಭ್ಯವಾಗುವುದರಿಂದ ಶೇ.24.10% ರಲ್ಲಿ ಯಾವುದೇ

ವೈಯಕ್ತಿಕ ಯೋಜನೆಗಳಿಗಾಗಿ ಮೇಲಿಂದ ಮೇಲೆ ಅರ್ಜಿಗಳನ್ನು ಆಹ್ವಾನಿಸುವ, ವರ್ಗೀಕರಿಸುವುದು, ದಾಖಲೆಗಳನ್ನು ಪರಿಶೀಲಿಸುವುದು ಅಭ್ಯರ್ಥಿಗಳನ್ನು ಪದೇ ಪದೇ ಆಯ್ಕೆ ಮಾಡುವ ಬದಲು 3ನೇ ಯಾದಿಯಲ್ಲಿರುವ ಅರ್ಹ ಫಲಾನುಭವಿಗಳನ್ನು ಗುರುತಿಸಿ ಅವರಿಂದ ಯಾವುದೇ ಅರ್ಜಿ ಪಡೆಯದೆ ಅವರಿಗಾಗಿ ಮಾರ್ಗದರ್ಶಿ ಸೂತ್ರದ ಪ್ರಕಾರ ಯೋಜನೆಗಳನ್ನು ಸಿದ್ಧಪಡಿಸಬೇಕು. ಸಾಧ್ಯವಿದ್ದಲ್ಲಿ ಅವರ ಪ್ರಯೋಜನಕ್ಕಾಗಿ ಅವರ ಅಭಿಪ್ರಾಯದೊಂದಿಗೆ ಸ್ಥಳೀಯ ಯೋಜನೆಗಳನ್ನು ಸಿದ್ಧಪಡಿಸಬೇಕು. ಇದರಿಂದ ಸಮಯದ ಉಳಿತಾಯವಾಗುವುದಲ್ಲದೆ ಅತೀ ಶೀಘ್ರವಾಗಿ ಯೋಜನೆ ಅನುಷ್ಠಾನಗೊಳ್ಳುತ್ತದೆ.

4) ಈ ಯೋಜನೆ ಸದೃಢಗೊಳ್ಳಲು ನಿಗದಿ ಮಾಡಿದ ಒಟ್ಟು ಸಿಬ್ಬಂದಿಯ 10% ಸಿಬ್ಬಂದಿಗಳನ್ನು ರಜೆ ಮೀಸಲಾತಿ ಸಿಬ್ಬಂದಿ ಎಂದು ಹೆಚ್ಚುವರಿಯಾಗಿ ಹೊಂದಿರಬೇಕು.

5) ಈ ಸಿಬ್ಬಂದಿಗೆ ನಿಗಧಿಪಡಿಸುವ ವೇತನದಲ್ಲಿ ಪ್ರತಿ ತಿಂಗಳು ಕನಿಷ್ಠ ವೇತನ 60% ನೀಡಬೇಕು. ವರ್ಷದ ಕೊನೆಗೆ ಈ ಸಿಬ್ಬಂದಿಯು 90% ಸಾಧನೆ ಮಾಡಿದಲ್ಲಿ ಮಾತ್ರ ಬಾಕಿ 40% ವೇತನ ಪಾವತಿಸಬೇಕು.

6) ಹೀಗೆ ಯೋಜನೆ ಅನುಷ್ಟಾನದ ತರುವಾಯ ಈ ಯೋಜನೆಯಿಂದ ಎಷ್ಟು ಜನ ಆರ್ಥಿಕ ಪ್ರಗತಿಯಾಯಿತು ಮತ್ತು 3 ವರುಷದ ಅವಧಿಯಲ್ಲಿ ಎಷ್ಟು ಜನರು ಆದಾಯ ವೃದ್ಧಿಸಿಕೊಂಡು ಫಲಾನುಭವಿಗಳ ಯಾದಿಯಿಂದ ಕೈಬಿಡಲಾಯಿತು ಎಂಬುದನ್ನು ಪ್ರತಿ ವರುಷ ವರದಿ ಪಡೆಯಬೇಕು.

7) ಇದೇ ಮಾದರಿಯಲ್ಲಿ ನಗರ ಪ್ರದೇಶಕ್ಕೆ ಹೊರಗಿನಿಂದ ಬಂದು ಕಾಲಕಾಲಕ್ಕೆ ಫಲಾನುಭವಿಗಳನ್ನು 3ನೇ ಯಾದಿಯಲ್ಲಿ ಸೇರಿಸಲು ಅವಕಾಶ ಕೊಡಬೇಕು.

   ಹೀಗೆ ನಿರ್ಧಿಷ್ಟ ಆಡಳಿತ ವ್ಯವಸ್ಥೆ ಒದಗಿಸಿ, ಶೇ.24.10% ಯೋಜನೆಯ ಅನುಷ್ಠಾನವನ್ನು ಮೌಲ್ಯಮಾಪನ ಮಾಡಲು ಸರ್ಕಾರ ಆದೇಶಿಸಲು ಕೋರಿದೆ.

8) ರಾಜ್ಯದ ಕೆಲವು ನಗರಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆ ಕೇವಲ 5–6% ಇದೆ. ಕೆಲವು ನಗರಗಳಲ್ಲಿ 55–60–65% ಇರುವುದು ವ್ಯಕ್ತವಾಗಿದೆ. ಹೀಗಾಗಿ ರಾಜ್ಯದ ಒಟ್ಟು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆಯನ್ನು ಆಧರಿಸಿ ಆಯಾ ಸ್ಥಳೀಯ ಸಂಸ್ಥೆಗಳು ತಮ್ಮ ಆಯವ್ಯಯದ 5% ರಿಂದ 65% ವರೆಗೆ ಯೋಜನೆ ರೂಪಿಸಲು ಅವಕಾಶ ನೀಡಬೇಕು. ಇದರಿಂದ ರಾಜ್ಯದ ಎಲ್ಲಾ ಪರಿಶಿಷ್ಠ ಜಾತಿ/ ಪರಿಶಿಷ್ಟ ಪಂಗಡಗಳಿಗೆ ಸಮಾನ ಅವಕಾಶ ನೀಡಲು ಸಾಧ್ಯವಾಗುತ್ತದೆ. ಅಥವಾ

   ರಾಜ್ಯದ ಒಟ್ಟು SCP/TSP ಅನುದಾನವನ್ನು ಆಯಾ ಸ್ಥಳೀಯ ಸರ್ಕಾರಗಳಿಗೆ ಆಯಾ ಸ್ಥಳೀಯ ಸಂಸ್ಥೆಗಳ ಒಟ್ಟು ಜನಸಂಖ್ಯೆ ಆಧಾರದಲ್ಲಿ ಬಿಡುಗಡೆ ಮಾಡದೇ ಈ ಮೇಲೆ ತಿಳಿಸಲಾದ 3ನೇ ಯಾದಿಯ ಆಧಾರದಲ್ಲಿ ಅನುಪಾತ ನಿಗದಿ ಮಾಡಿ ಬಿಡುಗಡೆಗೊಳಿಸಬೇಕು.

8. <u>ಲಿಂಗತ್ವ ಅಲ್ಪಸಂಖ್ಯಾತರ ರಾಜ್ಯ ನೀತಿ:–</u>

ಉತ್ತರ ಕರ್ನಾಟಕ ಕನ್ನಡ ಭಾಗದಲ್ಲಿ ರೇಣುಕಾ ಯಲ್ಲಮ್ಮ ದೇವಿ ಪ್ರಭಾವದ ಪ್ರದೇಶದಲ್ಲಿ ಲಿಂಗತ್ವ ಅಲ್ಪ ಸಂಖ್ಯಾತರನ್ನು ದೇವಿಯ ಧೂತರೆಂದು ಭಾವಿಸಲಾಗಿದೆ. ಅವರಿಗೆ ಸಮಾಜದಲ್ಲಿ ಉನ್ನತ ಸ್ಥಾನಮಾನವನ್ನು ನೀಡಲಾಗಿದೆ.

ಸದ್ಯದ ಸರ್ಕಾರದ ಕರಡು ನೀತಿಯು ಅದಕ್ಕೆ ಸಮಾನವಾದ ಸ್ಥಾನಮಾನವನ್ನು ನೀಡಲು ವಿಫಲವಾಗಿದೆ. ಪ್ರಸಕ್ತ ಕರಡು ನೀತಿಯಲ್ಲಿ ಅನೇಕ ಸಲಹೆ ಸೂಚನೆಗಳನ್ನು ನೀಡುತ್ತಾ ಅವರ ಅವಶ್ಯಕತೆ ಮತ್ತು ಅವರ ಆಸಕ್ತಿಗಳಿಗೆ ಅನುಗುಣವಾಗಿ ಅವರಿಗೆ ಉದ್ಯೋಗ, ತರಬೇತಿ ಸೌಲಭ್ಯಗಳನ್ನು ನೀಡಬೇಕೆಂದು ತಿಳಿಸಲಾಗಿದೆ. ಆದರೆ, ಸ್ವಭಾವತ: ಅವರು ಯಾವ ವಿಷಯದಲ್ಲಿ ಆಸಕ್ತಿ ಹೊಂದಿದ್ದಾರೆಂದು ಅಧ್ಯಯನ ಮಾಡಿ ಅದರನ್ವಯ ತರಬೇತಿ/ಸೌಲಭ್ಯಗಳನ್ನು ಒದಗಿಸುವುದು ಸೂಕ್ತವಾಗಿರುತ್ತದೆ.

ಈ ದೃಷ್ಠಿಯಲ್ಲಿ ಅವರಿಗೆ ವಿವಿಧ ತರಬೇತಿಗಳನ್ನು ನೀಡಲು ಆಭರಣ, ಟೈಲರಿಂಗ್ ಇತ್ಯಾದಿ ಮಾಮೂಲಿ ತರಬೇತಿಗಳನ್ನು ನೀಡಲು ಸಲಹೆ ನೀಡಲಾಗಿದೆ. ಆದರೆ ಅವರು ಸ್ವಭಾವತಃ ಎಲ್ಲರೂ ಮಾಡುವ ಕೆಲಸದಲ್ಲಿ ಆಸಕ್ತಿ ಹೊಂದಿರುವುದಿಲ್ಲ ಬದಲಾಗಿ ಸಂಗೀತ, ನೃತ್ಯದಲ್ಲಿ ಆಸಕ್ತಿ ಹೊಂದಿರುತ್ತಾರೆ. ದೇವರ ನಾಮಾವಳಿ, ಧಾರ್ಮಿಕ ತತ್ವಗಳನ್ನು, ಸಂಗೀತದ ಮೂಲಕ ಜನರಿಗೆ ಪ್ರಚಾರ ಮಾಡುವವುದರಲ್ಲಿ ಆಸಕ್ತಿ ಹೊಂದಿರುತ್ತಾರೆ ಕಾರಣ ಅವರನ್ನು ಸಂಗೀತ, ನಾಟಕ, ನೃತ್ಯದಲ್ಲಿ ತೊಡಗಿಸಿಕೊಳ್ಳುವುದು ಅತ್ಯಂತ ಸೂಕ್ತವಾಗಿದೆ. ಉದಾಹರಣೆಗೆ ಸರ್ಕಾರದ ನೀತಿಗಳ ಬಗ್ಗೆ, ನೀರನ್ನು ಮಿತವಾಗಿ ಬಳಸುವ ಬಗ್ಗೆ, ಬಾಲ ವಿವಾಹ, ಸ್ವಚ್ಛತೆ ನೀತಿ, ಸಂಚಾರಿ ನಿಯಮ ಪಾಲಿಸುವ ಬಗ್ಗೆ, ಕಂದಾಯ ಪಾವತಿಸುವ ಬಗ್ಗೆ, ತಂಬಾಕು ನಿಷೇದ ಹೀಗೆ ಸರ್ಕಾರದ ವಿವಿಧ ಇಲಾಖೆಗಳ ನೀತಿಗಳನ್ನು ಪ್ರಚಾರ ಮಾಡುವ ಕಾರ್ಯಗಳನ್ನು ಅವರಿಗಾಗಿ ಮೀಸಲಿಡುವುದು ಅತ್ಯಂತ ಸೂಕ್ತವಾಗಿದೆ. ಇವರೆಲ್ಲರು ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ, ಪ್ರತಿ ದಿನವು ಸರ್ಕಾರದ ನೀತಿಗಳನ್ನು ಬೇರೆ ಬೇರೆ ಭಾಗಗಳಲ್ಲಿ ಪ್ರಚಾರ ಮಾಡಲು, ವಾರಕ್ಕೆ 2 ದಿನ ಬೀದಿ ನಾಟಕ ಮತ್ತು ನೃತ್ಯದ ಮೂಲಕ ಸರ್ಕಾರದ ನೀತಿಗಳನ್ನು ಪ್ರಚಾರಪಡಿಸಲು ಸೂಚಿಸಬಹುದಾಗಿದೆ. ಒಂದು ಸ್ಥಳದಲ್ಲಿ 10–15 ಜನ ಇವರು ಇದ್ದಲ್ಲಿ ಅವರಿಗಾಗಿ ಸರಕಾರಿ ವಸತಿ ವ್ಯವಸ್ಥೆ ಮಾಡಿ ಅವರ ಇಚ್ಛೆಗೆ ತಕ್ಕಂತೆ ಅವರಿಗೆ ಬದುಕಲು ಅವಕಾಶ ನೀಡಬಹುದಾಗಿದೆ. ಇವರು ತಮ್ಮದೇ ಆದ ಸ್ವಸಹಾಯ ಗುಂಪುಗಳ ರಚನೆ ಮಾಡಿಕೊಳ್ಳಲು ಸಹಕಾರಿ ಸಂಘಗಳನ್ನು ಸ್ಥಾಪಿಸಿಕೊಳ್ಳಲು ಸಹಾಯ ಸಹಕಾರ ನೀಡಬಹುದಾಗಿದೆ. ಈ ಅಂಶಗಳನ್ನು ಉದ್ದೇಶಿತ ನೀತಿಯಲ್ಲಿ ಅಳವಡಿಸಿಕೊಳ್ಳಬಹುದಾಗಿದೆ. ಇವರ ಕಲ್ಯಾಣ ಯೋಜನೆ ಅನುಷ್ಠಾನವು ನಗರ ಪ್ರದೇಶದಲ್ಲಿ ಸ್ಥಳೀಯ ಸರ್ಕಾರಗಳ ವ್ಯಾಪ್ತಿಗೆ ನೀಡಬೇಕಾಗಿರುತ್ತದೆ ಹೊರತು ಗ್ರಾಮೀಣ ಅಭಿವೃದ್ಧಿ ಇಲಾಖೆ ವ್ಯಾಪ್ತಿಗೆ ಅಲ್ಲವೆಂದು ಸಂಘವು ಅಭಿಪ್ರಾಯಪಡುತ್ತದೆ.

9. **ಪರಿಶುದ್ಧ ಆಡಳಿತಕ್ಕೆ ಪಂಚ ಸೂತ್ರಗಳು:**

**ಮೊದಲನೇ ಸೂತ್ರ:**

**ಜನಪ್ರತಿನಿಧಿಗಳ ಮತ್ತು ಕಾರ್ಯಕರ್ತರ ವ್ಯಕ್ತಿತ್ವ ರಕ್ಷಣೆ.**

1) ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಾಮಾಣಿಕತೆಯೆಂದರೆ ಕಷ್ಟ ನಷ್ಟಗಳನ್ನು ಅನುಭವಿಸುವುದು ಆಗಿತ್ತು. ಆಗ ಶ್ರೀ ಸಾಮಾನ್ಯರು ಆಡಳಿತದ ಚುಕ್ಕಾಣಿ ಹಿಡಿಯಲು ಇಷ್ಟಪಡುತ್ತಿರಲಿಲ್ಲ. ಅಂದಿನ ಜನ ಪ್ರತಿನಿಧಿಗಳು. (1) ಮನೆತನದಿಂದ ಹಣವಂತರಾಗಿರುತ್ತಿದ್ದರು, (2) ಕಷ್ಟ ನಷ್ಟಗಳನ್ನು ತಡೆದುಕೊಳ್ಳುವಂತ: ಮನೋಧೈರ್ಯವನ್ನು ಹೊಂದಿದ್ದರು.
2) ಇಂದು ಅಧಿಕಾರದ ಚುಕ್ಕಾಣಿ ಹಿಡಿಯುವ ಜನ ಪ್ರತಿನಿಧಿ ಎದುರಿಸುತ್ತಿರುವ ಸಮಸ್ಯೆ ಬೇರೆ ಆಗಿದೆ. ಅವನಿಗೆ ಅಪರಿಮಿತ ಅಧಿಕಾರವೇನೋ ನೀಡಲಾಗಿದೆ. ಜನರಿಗೆ ನ್ಯಾಯ ದೊರಕುತ್ತಿದೆಯೋ ಇಲ್ಲವೋ ಎಂಬುದನ್ನು ನಿರ್ಣಯಿಸುವ ಅಧಿಕಾರ ನೀಡಲಾಗಿದೆ. ಆದರೆ ಅವನ ಮೇಲೆ ಪರೋಕ್ಷವಾಗಿ ಅತೀಯಾದ ಅನ್ಯಾಯ ಮಾಡಲಾಗುತ್ತಿದೆ. ಅನ್ಯಾಯಕ್ಕೆ ಒಳಗಾದ ವ್ಯಕ್ತಿಯಿಂದ (ಜನ ಪ್ರತಿನಿಧಿಯಿಂದ) ಜನ ಸಾಮಾನ್ಯರು ನ್ಯಾಯವನ್ನು ಬಯಸುತ್ತಿದ್ದಾರೆ. ಇದು ಜನ ಸಾಮಾನ್ಯರು ಮಾಡುವ ಪ್ರಮಾದವಾಗಿದೆ. ಇಲ್ಲಿ ಇನ್ನೂ ವಿಚಿತ್ರ ಅಂಶವೆಂದರೆ ಈ ಅನ್ಯಾಯಕ್ಕೆ ಒಳಗಾದ ಜನ ಪ್ರತಿನಿಧಿಗಳಿಗೆ ತಾವು ಹೇಗೆ ಅನ್ಯಾಯಕ್ಕೆ ಒಳಗಾಗಿದ್ದೇವೆ ಎಂಬ ಬಗ್ಗೆ ತಿಳುವಳಿಕೆ ಇಲ್ಲ, ಪರಿಹಾರಕ್ಕಾಗಿ ಚಿಂತಿಸಿಲ್ಲ ಬದಲಾಗಿ ದೀಪವು ತಾನು ಉರಿದು ಜನರ ಸೇವೆಯನ್ನು ಮಾಡುವಂತೆ ತಾವು ಸೇವೆ ಮಾಡುತ್ತಿದೇವೆ ಎಂದು ಬಡಾಯಿ ಕೊಚ್ಚಿಕೊಳ್ಳತ್ತ ಲೋಕಕ್ಕೆ ಅಹಿತವನ್ನು ಮಾಡುತ್ತಿದ್ದಾರೆ.
3) ಇಂದಿನ ಸ್ಥಿತಿಯಲ್ಲಿಯೂ ಪ್ರಾಮಾಣೀಕ ವ್ಯಕ್ತಿಗಳು ಬೆರಳೆಣಿಕೆಯಲ್ಲಿ ಸಿಗುವ ಸಂಭವ ಇರುತ್ತದೆ. ಅವರ ಸ್ಥಿತಿ–ಗತಿಯ ಬಗ್ಗೆ ಅಧ್ಯಯನ ಮಾಡಿದರೆ ಅನ್ಯಾಯದ ಮೂಲದ ಅರಿವು ಆಗಬಹುದಾಗಿದೆ.
4) ಒಬ್ಬ ಪ್ರಾಮಾಣಿಕ ವ್ಯಕ್ತಿ ಒಂದು ಸಂಸ್ಥೆಗೆ (ಸ್ಥಳೀಯ ಸಂಸ್ಥೆಗೆ ಗ್ರಾಮ ಪಂಚಾಯ್ತಿ, ನಗರಸಭೆ, ಪುರಸಭೆ/ಮಹಾನಗರಪಾಲಿಕೆಗೆ) ಯಾವುದೋ ಘಟನೆಯಿಂದ ಆಕಸ್ಮಿಕವಾಗಿ ಚುನಾಯಿತನಾಗುತ್ತಾನೆ ಅಥವಾ

ಚುನಾಯಿತನಾಗಲು ಸಮಾಜ ಸೇವೆಯಲ್ಲಿ ತೊಡಗುತ್ತಾನೆ, ಅಥವಾ ರಾಜಿಕೀಯ ಪಕ್ಷದ ಕಾರ್ಯಕರ್ತನಾಗುತ್ತಾನೆ. ಅವನು ನಿಜವಾಗಿಯೂ ಜನರ ಹಿತವನ್ನು ಬಯಸುತ್ತಾನೆ. ಅದಕ್ಕಾಗಿ ಅವನು ದಿನವೂ ಕಛೇರಿಗೆ ಬರಬೇಕಾಗುತ್ತದೆ. ಜನ ಪ್ರತಿನಿಧಿ ಅಥವಾ ಕಾರ್ಯಕರ್ತ ಎಂಬ ಪಟ್ಟಿ ಪಡೆದುಕೊಂಡ ಮೇಲೆ ಕಾರ್ಯಕರ್ತನು ಜನರ ತೊಂದರೆಗಾಗಿ ನಿತ್ಯವು ಸರಕಾರಿ ಅಧಿಕಾರಿ–ಸಿಬ್ಬಂದಿಗಳೊಂದಿಗೆ ಚರ್ಚಿಸಬೇಕಾಗುತ್ತದೆ. ಕಾರ್ಯಗಳು ಕೈಗೊಡುವಂತೆ ತನ್ನನ್ನು ತಾನು ತೊಡಗಿಸಿಗೊಳ್ಳಬೇಕಾಗುತ್ತದೆ. ಹೀಗೆ ತೊಡಗಿಸಿಕೊಳ್ಳುವುದರಿಂದ ಅವನು ತನ್ನ ಜೀವನ ನಿರ್ವಹಣೆಗಾಗಿ ದುಡಿದು ಹಣ ಗಳಿಸುವ ಸಮಯವನ್ನು ಕಛೇರಿಯಲ್ಲಿಯೇ ಕಳೆಯಬೇಕಾಗುತ್ತದೆ.

ದಿನವೂ ಪ್ರತಿನಿಧಿ ಕಛೇರಿಗೆ ಬರುತ್ತಿದ್ದರೆ ಅವನು/ಅವಳು **"ಊರಿಗೆ ಉಪಕಾರಿ ಮನೆಗೆ ಮಾರಿ"** ಆಗುತ್ತಾನೆ/ಳೆ ಯಾಕೇಂದರೆ ನಿತ್ಯವೂ ಅವನು ಬೇರೆ ಬೇರೆ ವ್ಯಕ್ತಿಗಳ ಸಲುವಾಗಿ ಕಛೇರಿಗೆ ಬರುತ್ತಾನೆ. ಅವರ ಸಮಸ್ಯೆ ಪರಿಹಾರವಾಗಿ ಬಿಡಲಿ ನಿತ್ಯವೂ ಅವನು ಕಛೇರಿಗೆ ಬರಲು ಮತ್ತು ಹೋಗಲು ತಗಲುವ ವೆಚ್ಚನ್ನು (ಬಸ್, ಊಟದ, ರಿಕ್ಷಾ ಇತ್ಯಾದಿ) ಶ್ರೀ ಸಾಮಾನ್ಯರು ನೀಡುವುದಿಲ್ಲ ಮತ್ತು ಜನಪ್ರತಿನಿಧಿಯೂ ಸಹ ಅದನ್ನು ಕೊಡುವಂತೆ ಕೇಳುವುದಿಲ್ಲ ಕೇಳಿದರೆ ತನ್ನ ಗೌರವಕ್ಕೆ ಕುಂದು ಎಂದು ಬಗೆಯುತ್ತಾನೆ, ನಿಜವಾಗಿ ಅವನು ಪ್ರಜ್ಞೆಯುಳ್ಳವನಾಗಿದ್ದರೆ. ವಕೀಲರಂತೆ ಅಂದಿನ ವೆಚ್ಚವನ್ನು ಅವನಿಂದ ಕೇಳಿ ಪಡೆಯಬೇಕಾಗಿತ್ತು ಆದರೆ ಹಾಗೆ ಮಾಡುವುದಿಲ್ಲ. ಇದು ಅವನ ಮೊದಲನೇ ಪ್ರಮಾದ. ಹೀಗೆ ತಪ್ಪು ಮಾಡಿದರೂ ಕೂಡ ಪ್ರಮಾಣಿಕವಾಗಿ ಸೇವೆಯನ್ನು ಮಾಡಬೇಕು ಎಂದು ಅವನು ಇಚ್ಚಿಸುವುದರಿಂದ 6–8 ತಿಂಗಳಲ್ಲಿ ತಾನು ಕೂಡಿಟ್ಟ ವಸ್ತುಗಳನ್ನು. ತನ್ನ ಊಟದ ವೆಚ್ಚಕ್ಕಾಗಿ ಮಾರಾಟ ಮಾಡಬೇಕಾಗುತ್ತದೆ. ಇಲ್ಲವೆ ಹಣ ವೆಚ್ಚ ಮಾಡಬೇಕಾಗುತ್ತದೆ. ಇದೆ ಪ್ರವೃತ್ತಿ ಮುಂದುವರಿದಂತೆ, ಅವನ ಪೂರ್ವಜರು ಸ್ಥಿರಾತಿಗಳನ್ನು ಗಳಿಸಿ ಇಟ್ಟದ್ದರೆ ವರುಷಕ್ಕೆ ಒಂದೊಂದು ಹೊಲವನ್ನು ಮನೆಯನ್ನು ಮಾರುತ್ತ ಹೋಗಬೇಕಾಗುತ್ತದೆ. (ಇಲ್ಲಿ ಜನಪ್ರತಿನಿಧಿ ವಾಸ್ತವಿಕವಾಗಿ ಪಿತೃ ಸ್ಥಾನದಲ್ಲಿ ಇರುತ್ತಾನೆ ತನ್ನನ್ನು ತಾನು ಕಷ್ಟಕ್ಕೆ ಗುರಿ ಮಾಡಿಕೊಂಡು ಜನರ ಸುಖಕ್ಕೆ ಹಾತೊರೆಯತ್ತಾನೆ. ನೈಸರ್ಗಿಕವಾಗಿ ಇವನಿಂದ ಲಾಭ ಪಡೆದವರು ತಮ್ಮ ಲಾಭದಲ್ಲಿ ಕೆಲ ಆಂಶವನ್ನು ಅವನಿಗೆ ನೀಡಬೇಕು ಅಂದರೆ ಅವರು ಪುತ್ರ ಸ್ಥಾನದಲ್ಲಿ ಇರಬೇಕು. ಆದರೆ ಭಾರತದ ಸಮಾಜದಲ್ಲಿ ಆ ನೈತಿಕತೆ ಇನ್ನು ಬೆಳೆದಿಲ್ಲ) ಹೀಗೆ ಅವನು ತನ್ನ ಸ್ವತ್ತುಗಳನ್ನೆಲ್ಲಾ ಮಾರಾಟ ಮಾಡಿದ ಮೇಲೆ ಅವನಲ್ಲಿ ಜನ ಸೇವೆಯೊಂದನ್ನು ಹೊರತು ಪಡಿಸಿ ಏನೂ ಉಳಿದಿರುವುದಿಲ್ಲ. ಆಗ ಅವನಿಗೆ ಜ್ಞಾನ ಬಂದರೆ ಮತ್ತು ಪುನಃ ತನ್ನ ಜೀವನ ನಿರ್ವಹಣೆಗಾಗಿ ದುಡಿಯಲು ಪ್ರಾರಂಭಿಸಬೇಕು. ಈ ಹಂತದಲ್ಲಿ ಅವನು ಗಂಡಾಂತರಕಾರಿಯಾದ ಹಂತ ತಲುಪಿರುತ್ತಾನೆ. ಇಲ್ಲಿಯವರೆಗೂ ಸಮಾಜದಲ್ಲಿ ಗೌರವಾನ್ವಿತ ಸ್ಥಾನ ಹೊಂದಿದ ವ್ಯಕ್ತಿ ಹೊಟ್ಟೆಬಟ್ಟೆಗಾಗಿ ದುಡಿಯಲು ಸಿದ್ದನಾಗಿದ್ದಾನೆ. ಆದರೆ ಯಾರೂ ಅವನಿಗೆ ಸೂಕ್ತ ಉದ್ಯೋಗ ನೀಡುವುದಿಲ್ಲ ಯಾಕೇಂದರೆ ಈ ಗೌರವಾನ್ವಿತ ವ್ಯಕ್ತಿಯನ್ನು ದುಡಿಸಿಕೊಂಡರೆ ತಮ್ಮ ಗೌರವಕ್ಕೆ ಕುಂದು ಬರುವುದೆಂದು ಭಾವಿಸುತ್ತಾರೆ. ಅದೇ ಸಮಯಕ್ಕೆ ಆ ಗೌರವಾನ್ವಿತ ವ್ಯಕ್ತಿಯೂ ತನ್ನ ಗೌರವಾನ್ವಿತವಾದ ದುಡಿಮೆಯ ಹಿಂದಿನ ಸ್ಥಾನಕ್ಕೆ ಹೋಗಲು ಮಾನಸಿಕವಾಗಿ ಸಿದ್ದನಾಗಿರುವುದಿಲ್ಲ. ಈ ಹಂತದಲ್ಲಿ ಸಮಾಜವು ಆ ಪ್ರಾಮಾಣಿಕ ಪ್ರತಿನಿಧಿಗೆ ಉಪಜೀವನಕ್ಕಾಗಿ ದಾನ ನೀಡಬೇಕು. ಅವನು ಅದನ್ನು ಭಿಕ್ಷೆ ಎಂದು ಪಡೆದು ಆತ್ಮ ಸಂತೋಷ ಹೊಂದಬೇಕು.

5) ನಮ್ಮ ಸಂಸ್ಕೃತಿಯಲ್ಲಿ ಭಿಕ್ಷೆ ಬೇಡುವುದು ಒಂದು ಪವಿತ್ರ ಕಾರ್ಯವಾಗಿದೆ. ಆದರೆ ಅದು ಇಂದಿನ ಸಮಾಜದಲ್ಲಿ ಸಾಧ್ಯವಿಲ್ಲ ಕಾರಣ ಭಿಕ್ಷಾಟನೆ ಒಂದು ಪಿಡುಗು ಎಂದು ನಾವು ಭಾವಿಸಿದ್ದೇವೆ.

6) ಇದು ಸಂದಿಗ್ದ ಹಂತ, (ಕ್ರಿಟಿಕಲ್ ಸ್ಟೇಜ್) ಈ ಹಂತದಲ್ಲಿ ಪ್ರಾಮಾಣಿಕ ವ್ಯಕ್ತಿ ಜನ ಸೇವೆಯಲ್ಲಿ ಮುಂದುವರೆಯಲು ಸ್ವಂತ ಆರ್ಥಿಕ ಶಕ್ತಿಯನ್ನು ಹೊಂದಿಲ್ಲ ಅಥವಾ ಹಿಂದೆ ಸರಿಯುವ ಮಾನಸಿಕ ಧೈರ್ಯವನ್ನು ಹೊಂದಿಲ್ಲ. ಈಗ ಅವನ ಮುಂದೆ ಇರುವುದು ಒಂದೇ ಮಾರ್ಗ ಅಧಿಕಾರಶಾಹಿಗಳೊಂದಿಗೆ ಶಾಮಿಲಾಗುವುದು ಇಲ್ಲವೆ ಅಧಿಕಾರಶಾಹಿಯು ತಪ್ಪು ಮಾಡುವಂತೆ ಪ್ರಚೋದನೆ ನೀಡುವುದು. ಈ ದ್ರೋಹದಿಂದಲೇ ತನ್ನ ಉಪಜೀವನ ಸಾಗಿಸಬೇಕಾಗುತ್ತದೆ.

7) ಇಲ್ಲಿ ವಿಚಾರ ಮಾಡಬೇಕಾದ ಅತೀ ಮುಖ್ಯ ಅಂಶವೆಂದರೆ ಒಬ್ಬ ಉತ್ತಮ ವ್ಯಕ್ತಿ ದ್ರೋಹಿ ಆಗುವುದನ್ನು ಸಮಾಜ ತಪ್ಪಿಸಿದ್ದರೆ ಸಮಾಜದ ವ್ಯವಸ್ಥೆ ಭ್ರಷ್ಟ ಆಗುವುದನ್ನು ತಪ್ಪಿಸಲು ಸಾಧ್ಯವಿರಲಿಲ್ಲವೇ? ಹೀಗೆ ನಮ್ಮ ಸಮಾಜದಲ್ಲಿ ಪ್ರತಿದಿನವೂ ಪ್ರತಿಕ್ಷಣವೂ ಸಜ್ಜನರನ್ನು ದುಷ್ಟ ಜನರನ್ನಾಗಿ ಪರಿವರ್ತಿಸುವ ವ್ಯವಸ್ಥೆಯನ್ನು ನಮಗೆ ಅರಿವಿಲ್ಲದೆ ನಾವೇ ಮಾಡಿದ್ದೇವೆ ಮತ್ತು ಅದರ ದುಷ್ಟ ಪರಿಣಾಮಗಳನ್ನು ದಿನವೂ ಅನುಭವಿಸುತ್ತಾ ಇದ್ದೇವೆ ಮತ್ತು **ಇನ್ನೊಬ್ಬರನ್ನು ದುಷ್ಟನೆಂದು ದಿನವೂ ಆರೋಪಿಸುತ್ತೇವೆ. ಸ್ವಭಾವತಃ ನಾವೇ ದುಷ್ಟರಾಗಿದ್ದರೂ ಅದು ನಮಗೆ ತಿಳಿಯಲಾರದ ಮಾಯೆಗೆ ಒಳಗಾಗಿದ್ದೇವೆ.**

8) ಹಾಗಾದರೆ ಈ ದುಷ್ಟ ಸೃಷ್ಟಿಯನ್ನು ನಿಲ್ಲಿಸುವುದು ಹೇಗೆ?
ಈ ಹಂತದಲ್ಲಿ ಸಮಾಜ ಕಾರ್ಯಕರ್ತರು ಮತ್ತು ಸಮಾಜ ಸೇವಕರೇ ಸಮಾಜಕ್ಕೆ ಕಂಟಕರಾಗುವುದು ಹೇಗೆ ಎಂಬುದು ಸ್ಪಷ್ಟವಾಗಿ ತಿಳಿದ ಅಂಶವಾಗಿದೆ. ಈಗ ಈ ಸಮಾಜ ಕಾರ್ಯಕರ್ತರನ್ನು ಸುಧಾರಿಸಿದರೆ ಮಾತ್ರ ಸಮಾಜ ಸುಧಾರಿಸುತ್ತದೆ. ಮತ್ತು ಅವರನ್ನು ಸುಧಾರಿಸುವುದು ಅತೀ ಅವಶ್ಯಕವಾಗಿದೆ. ಈ ಕಾರ್ಯಕರ್ತರನ್ನು ಸುಧಾರಿಸುವುದು ಹೇಗೆ?.

9) 1) ಯಾವುದೇ ವ್ಯಕ್ತಿ ಕಛೇರಿ ಕೆಲಸಕ್ಕೆ ಬರುವಾಗ ತನ್ನೊಂದಿಗೆ ತನ್ನ ಪ್ರಕರಣದ ಬಗ್ಗೆ ಮಾತನಾಡಲು ಬೇರೊಬ್ಬ ವ್ಯಕ್ತಿಯನ್ನು ಕರೆದುಕೊಂಡು ಬರಬಾರದು. ಹಾಗೆ ಬರುವುದಾದಲ್ಲಿ ಅಧಿಕೃತ ವಕೀಲರನ್ನೆ ಕರೆದುಕೊಂಡು ಬರಬೇಕು. ಇದು ಇಂದಿನ ಸ್ಥಿತಿಯಲ್ಲಿ ಸಾಧ್ಯವಾಗಲಾರದು ಅಷ್ಟು ಜನ ವಕೀಲರು ಎಂದಿಗೂ ಸಿಗಲಾರರು.

10) ಹಾಗಾದರೆ ನ್ಯಾಯಯುತವಾಗಿ ಕಾರ್ಯಕರ್ತರು ಬದುಕಲು ಅವಕಾಶ ಒದಗಿಸಬೇಕಾಗುತ್ತದೆ.

1) ಸ್ವಯಂ ಕಾರ್ಯಕರ್ತ: ಸ್ವಯಂಕಾರ್ಯಕರ್ತನಾಗಬೇಕಾದರೆ ಅವನು ಆರ್ಥಿಕವಾಗಿ ಸದೃಡನಾಗಿರಬೇಕು ಕನಿಷ್ಟಪಕ್ಷ ಆದಾಯ ತೆರಿಗೆಯನ್ನು ಪಾವತಿಸುವವನಾಗಿರಬೇಕು.

2) ಖಾಸಗಿ ಕಾರ್ಯಕರ್ತ: ಆದಾಯ ತೆರಿಗೆ ಪಾವತಿಸುವ ಒಬ್ಬ ವ್ಯಕ್ತಿ ಅಥವಾ ನೊಂದಾಯಿತ ಸಂಘ ಸಂಸ್ಥೆಗಳಿಂದ ಗುಡಿಗುಂಡಾರಗಳಿಗೆ ದಾನ ಮಾಡುವ ಹಣದಲ್ಲಿ ಕೆಲವರನ್ನು ಅವರು ಕಾರ್ಯಕರ್ತರೆಂದು ನೇಮಕಾತಿ ಮಾಡಬೇಕು, ಹೀಗೆ ಕಾರ್ಯಕರ್ತನೆಂದು ನೇಮಕಾತಿ ನೀಡುವ ಸಂಘ ಸಂಸ್ಥೆ ಅಥವಾ ವ್ಯಕ್ತಿಗಳು ಈ ಕಾರ್ಯಕರ್ತನ ಜೀವನ ನಿರ್ವಹಣೆ ವೆಚ್ಚ ನೀಡಲು ಸಮರ್ಥರಾಗಿರಬೇಕು. ಜೀವನ ವೆಚ್ಚ ನೀಡಲು ಸಾಮರ್ಥ್ಯ ಇಲ್ಲದಿದ್ದಾಗ ತಮ್ಮ ನೇಮಕಾತಿ ಹಿಂತೆಗೆದುಕೊಳ್ಳಬೇಕು.

3) ರಾಜಕೀಯ ಪಕ್ಷಗಳ ಕಾರ್ಯಕರ್ತರು: ಪ್ರಚಲಿತ ಇರುವ ರಾಜಕೀಯ ಪಕ್ಷಗಳು ತಮ್ಮ ಕಾರ್ಯಕರ್ತರನ್ನು ನೇಮಿಸಬೇಕು ಅವರು ಗೌರವಯುತವಾಗಿ ಪ್ರಾಮಾಣಿಕವಾಗಿ ಜನರ ಸೇವೆ ಸಲ್ಲಿಸಲು ಅವಶ್ಯವಾಗಿ ಬೇಕಾಗಬಹುದಾದ ಹಣವನ್ನು ನೀಡಬೇಕು ಸಾಧ್ಯವಿಲ್ಲದಿದ್ದಲ್ಲಿ ಕಾರ್ಯಕರ್ತರನ್ನು ನೇಮಿಸಬಾರದು.ಹೀಗೆ ನೇಮಕಗೊಂಡ ಕಾರ್ಯಕರ್ತನು ಎಲ್ಲರಿಗೂ ಕಾಣುವಂತೆ ತನ್ನ ಪಕ್ಷವನ್ನು ಗುರುತಿಸುವ ಬ್ಯಾಚ್ ಧರಿಸಿರಬೇಕು ಗುರುತಿನ ಚೀಟಿ ಹೊಂದಿರಬೇಕು.

11) ಅಧಿಕೃತ ಕಾರ್ಯಕರ್ತರು: ಗ್ರಾಮ ಪಂಚಾಯ್ತಿಯಿಂದ ಲೋಕಸಭೆವರೆಗೆ ಜನರಿಂದ ಚುನಾಯಿತರಾಗುವ ಎಲ್ಲ ಸದಸ್ಯರನ್ನು ಅಧಿಕೃತ ಕಾರ್ಯಕರ್ತರೆಂದು ಪರಿಗಣಿಸಬೇಕು. ಇಂದು ಈ ಜನಪ್ರತಿನಿಧಿಗಳಿಗೆ ಮಾಸಿಕ ಗೌರವಧನ ನೀಡಲಾಗುತ್ತದೆ. ಅದು ಅವರ ಒಂದು ದಿನದ ವೆಚ್ಚಕ್ಕೆ ಸಾಲಲಾರದು.
ಇದೇ ಭ್ರಷ್ಟಾಚಾರದ ಮೂಲವಾಗಿದೆ ಇದರ ನಿವಾರಣೆಯಾಗಲೇ ಬೇಕು. ಅದಕ್ಕಾಗಿ

(1) ಅವರು ಗೌರವಯುತವಾಗಿ ಬಾಳಲು ಒಂದು ಮನೆ ಕಡ್ಡಾಯವಾಗಿ ನೀಡಬೇಕು.
(ಚುನಾಯಿತ ಅವಧಿಯವರೆಗೆ ಮಾತ್ರ)

(2) ಸರಕಾರಿ ಅಧಿಕಾರಿಗಳಿಗೆ ನೀಡುವ ಎಲ್ಲ ಸೌಲಭ್ಯಗಳನ್ನು ಮತ್ತು ಮಾಸಿಕ ವೇತನಗಳನ್ನು ನೀಡಬೇಕು ಅವರಿಗೆ ಇಚ್ಛೆ ಇರಲಿ ಬಿಡಲಿ ಅದನ್ನು ಅವರು ಪಡೆಯಲೇಬೇಕು ಅವರಿಗೆ ಈ ವೇತನ ಹೆಚ್ಚು ಎಂದು ಕಂಡು ಬಂದಲ್ಲಿ ಆ ಹಣವನ್ನು ಪುನಃ ಸರಕಾರಕ್ಕೆ ದಾನವಾಗಿ ನೀಡಬಹುದು.

(3) ಸಂಸತ್ ಸದಸ್ಯರು, ವಿಧಾನ ಸಭೆ, ಪರಿಷತ್, ಪಂಚಾಯತ್, ಸ್ಥಳೀಯ ಸರಕಾರಗಳು ಪಂಚಾಯ್ತಿಗಳು ಸದಸ್ಯರಿಗೆ ವೇತನ ಶ್ರೇಣಿಗಳನ್ನು ನಿಗಧಿಪಡಿಸಬೇಕು. ಕಾಲ ಕಾಲಕ್ಕೆ ತುಟ್ಟಿ ಭತ್ಯೆ ನೀಡಬೇಕು.

12) ಕೊನೆಯ ಪ್ರಶ್ನೆ:– ಈ ಎಲ್ಲ ಸೌಲಭ್ಯಗಳನ್ನು ಪಡೆದ ನಂತರವೂ ಒಬ್ಬ ಕಾರ್ಯಕರ್ತನು ಬ್ರಷ್ಟನಾಗಲು ಸಾಧ್ಯವಿಲ್ಲವೇ?

13) ಉತ್ತರ: ಸ್ವಭಾವತಃ ಬ್ರಷ್ಟನಾದವನನ್ನು ಜಗತ್ತಿನ ದೊರೆಯನ್ನಾಗಿ ಮಾಡಿದರೂ ಅವನು ತನ್ನ ಬ್ರಷ್ಟ ಆಚರಣೆಯನ್ನು ಬಿಡುವುದಿಲ್ಲ. ನಮ್ಮ ಮೂಲ ಉದ್ದೇಶ ಒಬ್ಬ ಸಜ್ಜನನು ಪರೋಪಕಾರ ಮಾಡುತ್ತಾ ಮಾಡುತ್ತಾ ಕಾಲಕ್ರಮೇಣ ಬ್ರಷ್ಟರ ಗುಂಪಿಗೆ ಸೇರಬಾರದು, ಎಂಬುದೇ ನಮ್ಮ ಕಳಕಳಿ. ಈ ಸಮಾಜ ಸೇವೆಯಲ್ಲಿ ಸಜ್ಜನರು ಹೆಚ್ಚಾಗಿ ಬಂದು ಸಮಾಜ ಕಾರ್ಯ ನಿರ್ವಹಿಸಲು ಅನುಕೂಲವಾಗುವಂತಃ ವಾತಾವರಣ ನಿರ್ಮಾಣಮಾಡಬೇಕಾಗಿರುವುದು ಇಂದಿನ ಅವಶ್ಯಕತೆಯಾಗಿದೆ. ಇಷ್ಟೆಲ್ಲಾ ಸೌಲಭ್ಯ ಪಡೆದ ನಂತರವೂ ಅವನು ಬ್ರಷ್ಟನಾದರೆ ಅವನು ಕಾರ್ಯಕರ್ತನಾಗಲು ಯಾರು ಕಾರಣಿಭೂತರಾಗಿರುತ್ತಾರೆಯೋ ಅವರೆ ಅವನಿಗೆ ತಕ್ಕ ಉತ್ತರ ನೀಡಲು ಈ ಕೆಳಗಿನ ಪ್ರಕಾರ ಸಮರ್ಥರಾಗಿರುತ್ತಾರೆ.

| | |
|---|---|
| ಸ್ವಯಂ ಕಾರ್ಯಕರ್ತ | ಸ್ವಯಂ ನಿಯಂತ್ರಣ |
| ಖಾಸಗಿ ಕಾರ್ಯಕರ್ತ | ನೇಮಕಾತಿ ಮಾಡಿದವರು |
| ರಾಜಕೀಯ ಪಕ್ಷಗಳ ಕಾರ್ಯಕರ್ತ | ರಾಜಕೀಯ ಪಕ್ಷಗಳು |
| ಅಧಿಕೃತ ಕಾರ್ಯಕರ್ತರು | ಚುನಾವಣೆಗಳು. |

**ಎರಡನೆ ಸೂತ್ರ :**

**ಆಡಳಿತದಲ್ಲಿ ಸ್ಥಿರತೆ**

ಒಂದು ಗಿಡವು ಬೆಳೆದು ಮರವಾಗಬೇಕಾದರೆ ಅದು ಫಲಪುಷ್ಪ ನೀಡಬೇಕಾದರೆ ಅದಕ್ಕೆ ಪೋಷಣೆ, ರಕ್ಷಣೆಗಳನ್ನು ಒದಗಿಸಬೇಕು. ಮೊದಲ ಸೂತ್ರದಲ್ಲಿ ಪೋಷಣೆ ಒದಗಿಸುವುದರ ಬಗ್ಗೆ ತಿಳಿಸಲಾಯಿತು. ಈಗ ರಕ್ಷಣೆ ಬಗ್ಗೆ ವಿಚಾರಿಸೋಣ.

ಸರಕಾರಿ ಕಛೇರಿಯಲ್ಲಿ ಅತೀ ಕಡಿಮೆ ದರ್ಜೆಯ ಸಿಪಾಯಿ ತಪ್ಪು ಮಾಡಿದರೆ ಅವನಿಗೆ ಶಿಕ್ಷೆ ವಿಧಿಸಬೇಕಾದರೆ ಅದಕ್ಕೆ ವಿಧಿವಿಧಾನಗಳನ್ನು ನಿಗಧಿ ಪಡಿಸಲಾಗಿದೆ. ಅರೋಪಿತನ ವಿರುದ್ಧ ಅರೋಪಪಟ್ಟಿ ಮಾಡಬೇಕು. ಅರೋಪಕ್ಕೆ ವಿವರಣೆ ಕೇಳಬೇಕು. ತೃಪ್ತಿಕರವಿಲ್ಲದ್ದಿದ್ದಾಗ ಅರೋಪ ಮಾಡಿದವರನ್ನು ಹೊರತು ಪಡಿಸಿ ಮೂರನೆ ವ್ಯಕ್ತಿಯಿಂದ ವಿಚಾರಣೆ ನಡೆಸಬೇಕು. ವಿಚಾರಣಾ ಆಧಿಕಾರಿಯ ವರದಿಯನ್ನು ನೇಮಕಾತಿ ಅಧಿಕಾರಿ ಪರಿಶೀಲಿಸಬೇಕು. ನೇಮಕಾತಿ ಅಧಿಕಾರಿ ಶಿಕ್ಷೆ ವಿಧಿಸುವ ಬಗ್ಗೆ ತೀರ್ಮಾನ ಕೈಗೊಳ್ಳಬೇಕು. ಈ ಸುತ್ತು ಬಳಸಿ ನಿಯಮ ಪಾಲಿಸಿದ ತರುವಾಯವೇ ಅವನಿಗೆ ಶಿಕ್ಷೆ ವಿಧಿಸಬೇಕು.

ಈ ನಿಯಮಗಳ ಮೂಲ ಉದ್ದೇಶವೇನೆಂದರೆ ಸರಕಾರಿ ನೌಕರನು ಯಾರೊಬ್ಬರ ಮಿಥ್ಯಾ ಆರೋಪಕ್ಕೆ ಒಳಗಾಗಿ ಆರೋಪದ ಭಯದಲ್ಲಿ ಒತ್ತಡಕೆ ಒಳಗಾಗಿ ಅವನು ಬೇರೊಬ್ಬರಿಗೆ ಅನ್ಯಾಯ ಮಾಡದಿರಲಿ ಎಂಬುದೇ ಆಗಿದೆ. ಒಬ್ಬ ಸಿಪಾಯಿಗೆ ಇಷ್ಟೊಂದು ರಕ್ಷಣೆ ನೀಡುವ ನಮ್ಮ ಆಡಳಿತ, ಆಡಳಿತ ಮುಖ್ಯಸ್ಥರಾದ ಪ್ರಧಾನ ಮಂತ್ರಿಗಳಿಗೆ, ಮುಖ್ಯಮಂತ್ರಿಗಳಿಗೆ ಯಾವುದೇ ರಕ್ಷಣೆ ನೀಡದೇ ಇರುವುದು ಖೇದಕರ ಆಂಶವಾಗಿದೆ,

ಒಂದು ರಾಷ್ಟ್ರವು ಸಮೃದ್ಧವಾಗಬೇಕಾದರೆ ಆಡಳಿತ ಮುಖ್ಯಸ್ಥರು ಶಾಂತವಾಗಿರಬೇಕು. ಮಧ್ಯಮದವರು ಸಮಾಧಾನ ಚಿತ್ತದವರಾಗಿರಬೇಕು. ಕೆಳಗಿನರವರು ನಿತ್ಯಜೀವನಕ್ಕಾಗಿ ತೃಪ್ತರಾಗಿಬೇಕು ನಾಗರೀಕರು ಸಮೃದ್ಧರಾಗಲೇಬೇಕು ಆಗ ದೇಶವು ಸಮೃದ್ಧವಾಗಿರುತ್ತದೆ.

ಮನೆಯ ಮುಖ್ಯಸ್ಥನು ಶಾಂತಿ ನೆಮ್ಮದಿಯಿಂದ ಇದ್ದರೆ ಮಾತ್ರ ತನ್ನ ಮನೆಯ ಸದಸ್ಯರು ಆರೋಗ್ಯದಿಂದ ಇದ್ದಾರೆಯೇ? ಅವರ ಸಮಸ್ಯೆಗಳು ಏನು? ಅವರ ಅಭಿವೃದ್ಧಿಗಾಗಿ ತಾನು ಏನು

ಮಾಡಬಹುದು ಎಂದು ವಿಚಾರಿಸಬಹುದು. ಅದರ ಬದಲು ಮುಖ್ಯಸ್ಥನು ಜ್ವರ, ತಲೆನೋವು, ವಾಂತಿ ಭೇದಿಯ ಸ್ಥಿತಿಯಲ್ಲಿ ಇರುವಾಗ ಅವನು ಮನೆಯ ಸದಸ್ಯರ ಕಲ್ಯಾಣದ ಬಗ್ಗೆ ವಿಚಾರಿಸಲು ಸಾಧ್ಯವೇ ಆಗದು.

ಇಂದು ನಮ್ಮಪ್ರಧಾನ ಮಂತ್ರಿಗಳನ್ನು, ಮುಖ್ಯಮಂತ್ರಿಗಳನ್ನು ಅಲ್ಪ ಬಹುಮತ ಹೊಂದಿದ ಸಮಯದಲ್ಲಿ ಅವಿಶ್ವಾಸ ನಿರ್ಣಯದ ಮೂಲಕ ಯಾವಾಗಲಾದರೂ ಮನೆಗೆ ಕಳುಹಿಸಬಹುದು. ಅವರು ಅವಿಶ್ವಾಸಕ್ಕೆ ಅರ್ಹರಾಗುವ ಯಾವ ಕಾರ್ಯ ಮಾಡಿದ್ದಾರೆ ಎಂಬ ಬಗ್ಗೆ ನ್ಯಾಯಯುತವಾದ ವಿಚಾರಣೆ ನಡೆಸಲು ಅವಕಾಶ ಇರುವುದಿಲ್ಲ ಈ ಹಂತದಲ್ಲಿ ಆಡಳಿತ ಮುಖ್ಯಸ್ಥನ ಸ್ಥಿತಿ ಅತೀ ಚಿಂತಾಜನಕವಾಗಿರುತ್ತದೆ. (Law of Jungle) ಅರಣ್ಯ ನಿಯಮದಲ್ಲಿ ಅವರು ಸಿಕ್ಕಿ ಹಾಕಿ ಕೊಂಡಿರುವಾಗ ಅವರಿಂದ ನಾವು ನ್ಯಾಯವನ್ನು ಪಡೆಯಲು ಬಯಸುತ್ತೇವೆ (Rule of Law) "ತನ್ನಲ್ಲಿ ಇಲ್ಲದ ವಸ್ತುವನ್ನು ಹೇಗೆ ಒಬ್ಬನು ಕೊಡಲು ಸಾಧ್ಯವಿಲ್ಲವೋ" ಅದೇ ಪ್ರಕಾರ" "ತಮ್ಮ ಅಧಿಕಾರದ ಸ್ಥಿರತೆ ಇಲ್ಲದ ಮಂತ್ರಿಗಳು ತಮ್ಮ ಅಧಿನ ಸಿಬ್ಬಂದಿಗೆ ಶಾಂತಿ ನೆಮ್ಮದಿಯನ್ನು ಕೊಡಲು ಸಾಧ್ಯವಿಲ್ಲ" ಅಧಿಕಾರಿ ಸಿಬ್ಬಂದಿಗಳಿಗೆ ನೆಮ್ಮದಿ ಸ್ಥಿರತೆ ಇಲ್ಲದಿದ್ದಲ್ಲಿ ಇನ್ನು ನಾಗರೀಕರ ಬಾಳು ಗೋಳೋ ಗೊಳು ಇದರಲ್ಲಿ ಸಂಶಯವಿಲ್ಲ.

ಜನ ಪ್ರತಿನಿಧಿಗಳಾದ ಮಂತ್ರಿಗಳು, ಅಧಿಕಾರಿಗಳು ತಪ್ಪು ಮಾಡಿದಾಗ ಅವರನ್ನು ಎಚ್ಚರಿಸಬೇಕು ಮತ್ತು ಹಾಗೆ ಆಗದಂತೆ ಜಾಗರೂಕತೆವಹಿಸಬೇಕು. ಆದರೆ ಅವರಿಗೆ ಸ್ಥಾನದಲ್ಲಿ ಸ್ಥಿರತೆ ಇಲ್ಲದಿದ್ದಲ್ಲಿ ಅವರು ಈ ಕೆಲಸ ಮಾಡಲು ಸಾಧ್ಯವಾಗಲಾರದು ರಾಷ್ಟ್ರದ ಬಗ್ಗೆ ಚಿಂತಿಸಲು ಅವರ ಬಳಿ ಸಮಯವೇ ಇರಲಾರದು. ಈ ಅನಾಹುತದ ನಿವಾರಣೇ ಆಗಲೇಬೇಕು ಅದಕ್ಕಾಗಿ:

(1) ಒಂದು ಬಾರಿ ಮುಖ್ಯ ಮಂತ್ರಿಯಾದಲ್ಲಿ ಅಥವಾ ಪ್ರಧಾನ ಮಂತ್ರಿಯಾದಲ್ಲಿ 5 ವರುಷದ ಅವಧಿಯವರೆಗೆ ಅವರೇ ಅಲ್ಲಿರಬೇಕು.

(2) ಅವರು ಮಾಡಿದ ಕಾನೂನುಗಳು ತಪ್ಪಾಗಿದ್ದರೆ ಬಹುಮತದಿಂದ ಅದನ್ನು ರದ್ದು ಪಡಿಸಬಹುದು. ಆದರೆ ಅವರನ್ನು ಸ್ಥಾನ ಪಲ್ಲಟಗೊಳಿಸಬಾರದು.

(3) ಅವಿಶ್ವಾಸ ನಿರ್ಣಯ ವಿಧಿಯನ್ನು ರದ್ದು ಪಡಿಸಬೇಕು.(ಈ ಬಗ್ಗೆ 14ನೇ ವಿಧಾನ ಸಭೆಯ ಅರ್ಜಿ ಸಮೀತಿಯ 19ನೇ ವರದಿಯ ವಿಶ್ಲೇಷಣೆಯ VIನೇ ಭಾಗದಲ್ಲಿ ನೋಡಿರಿ).

(4) ಪದಚ್ಯುತಿ (Impeachment) ವ್ಯವಸ್ಥೆ ಜಾರಿಗೆ ತರಬೇಕು. ಎಮ್.ಎಲ್.ಎ. ಎಮ್.ಎಲ್.ಸಿ. ಗಳಲ್ಲಿ ಒಂದು ಸದನವು ಆರೋಪಮಾಡಿದರೆ ನ್ಯಾಯಾಲಯ ವಿಚಾರಣೆ ಮಾಡಬೇಕು ನಂತರ ಇನ್ನೊಂದು ಸದನವು ಆದನ್ನು ಅನುಮೋದಿಸಬೇಕು. ಆಗ ಅವರು ಪದಚ್ಯುತಗೊಳ್ಳಬೇಕು.

(5) ವಿಚಾರಣೆ ಬಹಿರಂಗ ವಿಚಾರಣೆಯಾಗಬೇಕು. ಈ ವಿಚಾರಣೆಯಲ್ಲಿ ಸಾರ್ವಜನಿಕರಿಗೆ ಅವಕಾಶವಿರಬೇಕು ಸಾಕ್ಷ್ಯಾಧಾರ ಸಹಿತವಾಗಿರಬೇಕು.

(6) ನಿಯಮಗಳ ಪ್ರಕಾರ ನಡೆದುಕೊಂಡಾಗ ಕೆಲವು ಸಲ ಆಡಳಿತದಲ್ಲಿ ಹಾನಿಯಾಗಬಹುದು ಈ ವಿಚಾರಣೆಯಲ್ಲಿ ಲಾಭ ಹಾನಿಯನ್ನು ಪರಿಗಣಿಸಬಾರದು ನಿಯಮ ನೀತಿಗಳ ಹಿಂದಿನ ಮೂಲ ಸಿದ್ಧಾಂತ ತತ್ವ ಉಲ್ಲಂಘನೆ ಮಾಡಿದಲ್ಲಿ ಮಾತ್ರ ಅವರನ್ನು ಪದಚ್ಯುತಗೊಳಿಸಬೇಕು. ಆಗಲೇ ದೇಶಕ್ಕೆ ಕಲ್ಯಾಣ ಆಗುವುದು.

**ಕೊನೆಯ ಮಾತು:** ಸ್ಥಿರ ಸರಕಾರದ ಅವಶ್ಯಕತೆ ಮನಗಂಡಿದ್ದರೂ ಕೆಲವರು ಸ್ಥಿರ ಸರಕಾರವನ್ನು ಬೆಂಬಲಿಸುವುದಿಲ್ಲ ಇದಕ್ಕೆ ಕಾರಣ ಸ್ಥಿರ ಸರಕಾರ ಬಂದರೆ ತನ್ನ ಮಹತ್ವಾಕಾಂಕ್ಷೆ ಈಡೇರಲಾರದು ಎಂಬುದು ಅವರ ಚಿಂತೆ ಆಗಿದೆ. ಈ ಗೊಂದಲದಲ್ಲಿ ತನ್ನ ಹಿತ ಸಾಧಿಸಬೇಕು, ಎಂಬ ಸಂಕುಚಿತ

ಮನೋಭಾವನೆಯೇ ಈ ಸಮಸ್ಯೆಗೆ ಕಾರಣವಾಗಿದೆ. "ದೊಡ್ಡ ಸಂಸ್ಥೆ ನಡೆಸುವವರ ಮನಸ್ಸು ದೊಡ್ಡದಾಗಿರಬೇಕು" ಸಂಕುಚಿತ ಮನಸ್ಸಿನವರಿಂದ ದೊಡ್ಡ ಕಾರ್ಯಗಳು ನಡೆಯಲಾರವು.

**ಮೂರನೇ ಸೂತ್ರ:**

**ದೇಣಿಗೆಗಳ ಅವಶ್ಯಕತೆ ಪಾರದರ್ಶಕತೆ, ಲಂಚ ಮತ್ತು ಭ್ರಷ್ಟಚಾರಗಳು, ಪ್ರತಿಭಾ ಸನ್ಮಾನ.**

ಲಂಚ ಮತ್ತು ಭ್ರಷ್ಟಾಚಾರಗಳು ಆಡಳಿತದ ಅವಿಭಾಜ್ಯ ಅಂಶಗಳು ಆಗಿರುತ್ತದೆ. ಕೆಲ ಹಂತದಲ್ಲಿ ಇವು ಅನಿವಾರ್ಯ ಆದರೆ ಯಾವ ಹಂತದವರೆಗೆ ಎಂಬುದನ್ನು ನಿರ್ಣಯಿಸುವುದರಲ್ಲಿ ಜಾಣತನ ಇರುತ್ತದೆ. ಇಂದು ಲಂಚ ಭ್ರಷ್ಟಾಚಾರದ ಬಗ್ಗೆ ಜನ ಸಾಮಾನ್ಯರು ರೋಶಿ ಹೋಗಿದ್ದಾರೆ ಮತ್ತು ಹತಾಶಯರಾಗಿದ್ದಾರೆ.

ಭ್ರಷ್ಟಾಚಾರದ ಉದಾಹರಣೆಗಳು:

1) ಭಾರತದ ಅತೀ ನಿಷ್ಟುರ ಮತ್ತು ಪ್ರಾಮಾಣಿಕ ವ್ಯಕ್ತಿಯೆಂದು ಹೆಸರು ಮಾಡಿದ ಸರದಾರ ವಲ್ಲಭಭಾಯಿ ಪಟೇಲರು ನಿಧನ ಹೊಂದಿದಾಗ ಅವರ ಮನೆಯಲ್ಲಿ ರೂ. 80 ಲಕ್ಷ ಧನ ರಾಶಿ ಇದ್ದಿತು. ಅವರ ಮಗಳು ಕಾಂಗ್ರೆಸ್ ಪಕ್ಷದ ನಿಧಿಯಾದ ಅದನ್ನು ಪಂಡಿತ ಜವಾಹರ ಲಾಲ್ ನೆಹರೂ ಅವರಿಗೆ ತಂದು ಒಪ್ಪಿಸಿದರು.
2) ಮಹಾರಾಷ್ಟ್ರದಲ್ಲಿ ಎನ್‌ರಾನ್, ಕಂಪನಿಯೊಂದಿಗೆ ವಿದ್ಯುತ್ ಉತ್ಪಾದಿಸಲು ಕಾಂಗ್ರೆಸ್ ಸರಕಾರದಿಂದ ಮಾಡಿಕೊಳ್ಳದಾದ ಒಪ್ಪಂದವನ್ನು ಹೊಸದಾಗಿ ಚುನಾಯಿತವಾದ ಬಿ.ಜೆ.ಪಿ. ಸಂಯುಕ್ತ ಸರಕಾರವು ರದ್ದು ಮಾಡಿತು. ಎನ್‌ರಾನ್. ಕಂಪನಿ ಪರಿಹಾರಕ್ಕಾಗಿ ಅಂತರ–ರಾಷ್ಟ್ರೀಯ ನ್ಯಾಯಾಲಯಕ್ಕೆ ಹೋಯಿತು. ಈ ಮಧ್ಯದಲ್ಲಿ ಮಾತುಕತೆಗಳು ನಡೆದು ಒಪ್ಪಂದದ ಕೆಲವು ಕರಾರುಗಳನ್ನು ಬದಲಿಸಿ ದರಗಳನ್ನು ಬದಲಾಯಿಸಿ ಪುನಃ ಎನ್‌ರಾನ್, ಕಂಪನಿಗೆ ಮಹಾರಾಷ್ಟ್ರದಲ್ಲಿ ವಿದ್ಯುತ್ ಉತ್ಪಾದಿಸಲು ಅನುಮತಿ ನೀಡಲಾಯಿತು. ಅಮೇರಿಕಾ ದೇಶದಲ್ಲಿ ಎನ್‌ರಾನ್ ಕಂಪನಿಯು ಆ ವರುಷದ ಆಡಿಟ್ ವರದಿಯಲ್ಲಿ ಭಾರತದಲ್ಲಿ ಕಂಪನಿಯ ಯೋಜನೆಗಳ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ನೀಡುವುದಕ್ಕಾಗಿ ಮಾಡಿದ ವೆಚ್ಚ ರೂ. 98.00 ಕೋಟಿ ಎಂದು ಬರೆಯಾಲಾಯಿತು. ಅಲ್ಲಿನ ಸರಕಾರ ಈ ವೆಚ್ಚಕ್ಕೆ ಮಾನ್ಯತೆ ನೀಡಿತು.

ಈ ಎರಡು ಉದಾಹರಣೆಗಳು ವೈಜ್ಞಾನಿಕವಾಗಿ ಅಧ್ಯಯನ ಮಾಡಿದರೆ ನಿಜವಾಗಿಯೂ ನಮ್ಮ ರಾಷ್ಟ್ರವು ಸಮೃದ್ಧಿ ದೇಶವಾಗಲು ಸಾಧ್ಯವಿರುತ್ತದೆ.

ಒಂದನೆ ಅಂಶ: –ಒಂದು ರಾಷ್ಟ್ರದಲ್ಲಿ ಎರಡು ಕರಗಳು ವಾಸ್ತವಿಕವಾಗಿವೆ. 1)ಅಧಿಕೃತ ಕರ ಮತ್ತು 2) ರಾಜಕೀಯ ಕರ ಅಧಿಕೃತ ಕರ: ಅಧಿಕೃತ ಕರ ಸರಕಾರದ ಅಧಿಕೃತ ವೆಚ್ಚವನ್ನು ತೋರಿಸುತ್ತದೆ.

ರಾಜಕೀಯ ಕರ ಅಥವಾ ಗುಪ್ತ ಕರ: – ರಾಜಕೀಯ ಕರವು ರಾಜಕೀಯ ಪಕ್ಷಗಳ ಅವಶ್ಯಕತೆಯನ್ನು ತೋರಿಸುತ್ತದೆ. ಅದರೆ ಈ ಎರಡನೇಯ ಮಾದರಿಯ ಕರದಿಂದ ಆಗುವ ಅನಾಹುತವು ಕಲ್ಪನೆಯನ್ನು ಮೀರಿದ್ದು ಆಗಿರುತ್ತದೆ. ಆದರೂ ಸ್ಥೂಲ ಪರಿಚಯ ನೀಡಬಹುದು.

1) ರಾಜಕೀಯ ಕರವನ್ನು (Party Fund) ಸರಕಾರದ ಅತೀ ಪ್ರಮುಖ ವ್ಯಕ್ತಿಗೆ ನೀಡಲಾಗುತ್ತದೆ.
2) ಈ ಕರ ನೀಡಿದ ಬಗ್ಗೆ ಮತ್ತು ಪಡೆದುಕೊಂಡ ಬಗ್ಗೆ ಅಧಿಕೃತ ದಾಖಲೆಗಳು ಇರುವುದಿಲ್ಲ.

ಒಂದು ಕಂಪನಿ ರಾಜಕೀಯ ಕಾಣಿಕೆ (ಕರ) ನೀಡಿದ ತರುವಾಯ ಆ ಮೊತ್ತಕ್ಕೆ ಸಂಬಂಧಿಸಿದಂತೆ ತನ್ನ ಲೆಕ್ಕ ಪತ್ರಗಳನ್ನು ಬರೆಯುವಾಗ ಆ ಕಂಪನಿ ಕನಿಷ್ಟ ಅಷ್ಟರ ಮಟ್ಟಿಗೆ ಅಪ್ರಮಾಣಿಕವಾಗಿ ಲೆಕ್ಕಗಳನ್ನು ಬರೆಯಬೇಕಾಗಿರುತ್ತದೆ. ಸರ್ವಕಾಲಿನ ನಾಣ್ನುಡಿ "ವ್ಯವಹಾರಂ ದ್ರೋಹ ಚಿಂತನಂ" ಎಂಬಂತೆ ವ್ಯಾಪಾರಿಯೂ ಸಾಮಾನ್ಯವಾಗಿ ಲಾಭ ಮಾಡಿಕೊಳ್ಳವದರಲ್ಲಿ ಆಸಕ್ತನಾಗಿರುತ್ತಾನೆ. ಇನ್ನು ಅವನಿಗೆ ರಾಜಾಶ್ರಯ ಸಿಕ್ಕಾಗ ಅವನ ಲಾಭ ಬಡುಕನಕ್ಕೆ ಮಿತಿ ಇರುವುದಿಲ್ಲ ಈ ಹಂತದಲ್ಲಿ ವ್ಯಾಪಾರಿ ತಪ್ಪು ಮಾಡಿದಾಗ ಅಂದರೆ ಸರಕಾರಕ್ಕೆ ಮತ್ತು ಜನತೆಗೆ ದ್ರೋಹ ಮಾಡಿದಾಗ ಅಧಿಕಾರಿಗಳು ಅವನ ಮೇಲೆ ಕ್ರಮ ಜರುಗಿಸಲು ನೈತಿಕ ಅಧಿಕಾರ ಹೊಂದಿರುವುದಿಲ್ಲ. ಒಂದು ವೇಳೆ ಕ್ರಮ ಜರುಗಿಸಲು ಧೈರ್ಯ

ತೋರಿದರು ಅವನು ಅಲ್ಲಿಂದ ಕೂಡಲೇ ಎತ್ತಂಗಡಿ ಆಗುವನು. ಆದ್ದರಿಂದ ಅಧಿಕಾರಿಯು ತನ್ನ ಎತ್ತಂಗಡಿಯನ್ನು ತಪ್ಪಿಸಿಕೊಳ್ಳಬೇಕು ಮತ್ತು ರಾಜಕೀಯ ಮುಖಂಡನ ಅವ ಕೃಪೆಗೆ ಪಾತ್ರನಾಗಬಾರದು ಎಂದರೆ ಆ ವ್ಯಾಪಾರಿಯೊಂದಿಗೆ ಅಧಿಕಾರಿ ಶಾಮಿಲಾಬೇಕು.ಅಂದರೆ ಬೇಲಿಯೇ ಎದ್ದು ಹೊಲ ಮೇಯ್ದಂತೆ. ಇದು ರಾಜಕೀಯ ಕಾಣಿಕೆಯ ಮೊದಲ ಪರಿಣಾಮ ಇಲ್ಲಿ ಸರಕಾರದ ಅಸ್ತಿತ್ವಕ್ಕೆ ಗಂಡಾಂತರ ಅಥವಾ ಸರಕಾರ ಇದ್ದರು ಅದು ನೆಪ ಮಾತ್ರ ಸರಕಾರ. ಈ ಸ್ಥಿತಿಯಲ್ಲಿ ಜನರು ಹೇಳುವ ಪರಮ ಸತ್ಯವೆಂದರೆ **"ಯಾರು ಬಂದರೆ ಏನು ನಮ್ಮ ದೇಶದಲ್ಲಿ ಒಳ್ಳೆಯದು ಆಗುವುದಿಲ್ಲ"** ಈ ಹಂತದಲ್ಲಿ ಅಂತಿಮವಾಗಿ ಅರಾಜಕತೆ ಉಂಟಾಗಿ ಕಾಣಿಕೆ ನೀಡಿದವನಿಗೂ ಹಿತವಾಗುವುದಿಲ್ಲ . ಕಾಣಿಕೆ ಪಡೆದವನಿಗೂ ಹಿತವಾಗುವುದಿಲ್ಲ . ಇನ್ನು ಜನರ ಬಾಳು ಗೋಳೇಗೋಳು.

ಎರಡನೆ ಪರಿಣಾಮ ಮಂತ್ರಿಗಳಿಗೆ ಬರುವ ಈ ಕಾಣಿಕೆಯ ಲೆಕ್ಕ ಇತರರಿಗೆ ನಿಖರವಾಗಿ ತಿಳಿಯುವುದಿಲ್ಲ. ಹೀಗಾಗಿ ಮಂತ್ರಿಯ ಮೇಲೆ ಅವನ ಖಾಸಾ ಅನುಯಾಯಿಗಳಿಗೆ ಯಾವಾಗಲು ಅನುಮಾನ. ರಾಜಕೀಯವಾಗಿ ಉನ್ನತ ಹುದ್ದೆಯಲ್ಲಿ ಇರುವವರಲ್ಲಿ ಅವಿಶ್ವಾಸದಿಂದ ಒಂದೇ ಪಕ್ಷದಲ್ಲಿ ಭಿನ್ನಮತಿಯರ ಜನನವಾಗುತ್ತದೆ. ಈ ಭಿನ್ನಮತೀಯರು ಜನರಿಗಾಗುವ ಅನ್ಯಾಯವನ್ನು ಸರಿಪಡಿಸುವುದಕ್ಕೆ ಭಿನ್ನಮತ ಹೊಂದಿದ್ದಾರೆ ಎಂಬುದನ್ನು ಸಾಬೀತು ಪಡಿಸಲು ನಾನಾ ಕಾರಣಗಳನ್ನು ನೀಡುತ್ತಾರೆ. ಉದಾಹರಣೆ ಕೃಷಿ ಯೋಜನೆಗೆ ಈ ಸಾರಿ 900 ಕೋಟಿ ಹಣ ಆವ್ಯಯವದಲ್ಲಿ ಕಾಯ್ದಿರಿಸಲು ಕೇಳಿಕೊಂಡಾಗ ಮಾನ್ಯ ಮುಖ್ಯಮಂತ್ರಿಗಳು ಇದ್ದಕ್ಕಾಗಿ ರೂ. 300 ಕೋಟಿ ಆಯವ್ಯಯದಲ್ಲಿ ಕಾಯ್ದಿರಿಸಿದಕ್ಕಾಗಿ ರಾಜೀನಾಮೆ ನೀಡುವುದಾಗಿ ಜನರಿಗೆ ಸಬೂಬು ಹೇಳುತ್ತಾರೆ. ನಿಜವಾದ ಕಾರಣ ಈ ಗುಪ್ತ ಕಾಣಿಕೆಯಲ್ಲಿನ ಹೊಂದಾಣಿಕೆಯ ಸಮಸ್ಯೆಯಾಗಿರುತ್ತದೆ..

ಮೂರನೆಯಾದಾಗಿ ಒಬ್ಬ ಶಾಸಕನ ಆರ್ಥಿಕ ಸ್ಥಿತಿಗೂ ಒಬ್ಬ ಮಂತ್ರಿಯ ಆರ್ಥಿಕ ಸ್ಥಿತಿಗೂ 1000 ಪಟ್ಟು ವ್ಯತ್ಯಾಸ ಹೊಂದಿರುತ್ತದೆ. ಅನೇಕ ಸಲ ಒಬ್ಬರು ಮಂತ್ರಿಯಾಗುತ್ತಿದಂತೆ ಅನೇಕ ಕಾರು ಬಂಗ್ಲೆ ಹೊಲ ಮನೆ ಅನೇಕ ಕಂಪನಿಗಳಲ್ಲಿ ಶೇರುಗಳನ್ನು ಪಡೆದುಕೊಳ್ಳುತ್ತಾರೆ. ಇದರಿಂದ ಸಾಮಾನ್ಯ ಶಾಸಕನಿಂದ ಮಂತ್ರಿಯ ಮೇಲೆ ಅಸೂಯೆ ಪ್ರಾರಂಭವಾಗುತ್ತದೆ. ತಾತ್ವಿಕವಾಗಿ ಇಬ್ಬರೂ ಒಂದೇ ಪಕ್ಷಕ್ಕೆ ಸೇರಿದ್ದರೂ ವ್ಯವಹಾರದಲ್ಲಿ ಸಹಕಾರ ಇರುವುದಿಲ್ಲ. ಆ ಮಂತ್ರಿ ಮಕ್ಕಳು ಮತ್ತು ಸಂಬಂಧಿಕರು ಅವಶ್ಯಕತೆಗಿಂತ ಹೆಚ್ಚಿನ ಸಂಪತ್ತನ್ನು ಪಡೆಯುವದರಿಂದ ಅನೇಕ ಸಲ ತಮ್ಮ ವ್ಯಕ್ತಿತ್ವವನ್ನು ಕಳೆದುಕೊಳ್ಳುತ್ತಾರೆ. ಈ ಕಾಣಿಕೆಯಿಂದ ಪಡೆದವನಿಗೂ ದೀರ್ಘಕಾಲದಲ್ಲಿ ಪ್ರತಿಕೂಲ ಪರಿಣಾಮ ಉಂಟಾಗುವುದು.

ನಾಲ್ಕನೇಯದಾಗಿ ಹೀಗೆ ಅವರ ಜೀವನ ಮಟ್ಟ ಒಂದೇ ಬಾರಿಗೆ ಏರಿದ್ದರಿಂದ ಅವರು ಜನರಿಂದ ಸಹಜವಾಗಿ ಬೇರೆಯಾಗಿ ತಮ್ಮ ರಾಜಕೀಯ ಭವಿಷ್ಯ ಹಾಳು ಮಾಡಿಕೊಳ್ಳುತ್ತಾರೆ. ಅದೇ ಸಮಯಕ್ಕೆ ಮಂತ್ರಿಗಳ ಹುದ್ದೆಗೆ ಶಾಸಕರಲ್ಲಿ ಪೈಪೋಟಿ ನೆಡೆದು ಜಂಬೋ ಮಂತ್ರಿ ಮಂಡಳಗಳ ಸೃಷ್ಟಿಯಾಗುತ್ತಿತ್ತು ಅದನ್ನು ಈಗ ತಪ್ಪಿಸಲಾಗಿದೆ.ಆದರೇ ಇಂದಿಗೂ ಮಂತ್ರಿಯಾಗಲು ಅವರ ಆಡಳಿತ ದಕ್ಷತೆ ಪ್ರಮಾಣಿಕತೆ ಅಳತೆಗೋಳು ಆಗದೆ ಅವರು ತರ್ಕರಹಿತವಾದ ಪ್ರದೇಶ ಜಾತಿ, ಭಾಷೆ ಇತ್ಯಾದಿಗಳನ್ನು ಮುಂದು ಮಾಡಿ ಮಂತ್ರಿಯಾಗಲು ಪ್ರಯತ್ನಿಸುತ್ತಾರೆ. ಹಾಗೂ ಹೀಗೂ ಮಂತ್ರಿಯಾದ ಮೇಲೂ ಕೇವಲ ಕಂಪನಿ ಕಾಣೀಕೆಯಿಂದ ತೃಪ್ತರಾಗದೇ ಇದೇ ಬಗೆಯಲ್ಲಿ ಎಲ್ಲೆಲ್ಲಿ ಹಣ ಸಂಗ್ರಹಿಸಬಹುದು ಎಂಬುದರ ಬಗ್ಗೆ ದಿನವೂಯೋಜನೆ ಮಾಡುತ್ತಾರೆ. ಹೊಸ ಮೂಲಗಳನ್ನು ಸಂಶೋಧಿಸುತ್ತಾರೆ. ತನ್ನ ಯೋಜನೆಗೆ ಸಹಕಾರಿ ಆಗುವ ಅಧಿಕಾರಿಗಳನ್ನು ತನ್ನ ಹೊಗಳು ಬಂಟರನ್ನು ತನ್ನ ಸುತ್ತಲೂ ನಿರ್ಮಿಸಿಕೊಳ್ಳತ್ತಾರೆ. ಉನ್ನತ ಸ್ಥಾನದಲ್ಲಿರುವವರ ಜೀವನ ವಿಧಾನವನ್ನು ಕೆಳಗಿನವರು ಅನುಕರಣೆ ಮಾಡುವುದರಿಂದ ಈ ಧುರೀಣರ ಅನುಯಾಯಿಗಳು ಲೆಕ್ಕಪತ್ರ ಇಡುವ ಶಿಸ್ತು ಬದ್ಧ ಜೀವನ ನೆಡೆಸಲಾರರು ಇದರಿಂದ ಶ್ರೀ ಸಾಮಾನ್ಯನ ಬಾಳು ಪತನವವಾಗುತ್ತದೆ, ದೇಶ ಪತನವಾಗುತ್ತದೆ. ಮುಂದಿನ ಚುನಾವಣೆಯಲ್ಲಿ ಅವರನ್ನು

ಜನರು ಸೋಲಿಸುತ್ತಾರೆ. ಇದು ಅವರ ದುರದೃಷ್ಟವಾದರೂ ಅಂತಿಮವಾಗಿ ಅವರು ಮಾಡಿದ ಪಾಪವನ್ನು ಜನರೇ ಹೊರಬೇಕು. ಮತ್ತು ಹೊರುತ್ತಾರೆ ಕೂಡಾ, ಕೊನೆಗೆ ಸರ್ಕಾರಗಳು ದಿವಾಳಿ ಏಳುತ್ತವೆ. ಇಲ್ಲಿಯ ನೀರು, ಇಲ್ಲಿಯ ಜನ, ಇಲ್ಲಿಯ ಸಾಮಗ್ರಿ, ಇಲ್ಲಿಯವರೇ ಯೋಜನೆ ಸಿದ್ದಪಡಿಸಿ ಜಾರಿ ಮಾಡುತ್ತಾರೆ. ಆದರೂ ಆ ವಿದೇಶಿ ಕಂಪನಿ ಇಲ್ಲಿಂದಲೇ ನೀರು ಸರಬರಾಜಿನಿಂದ ಲಾಭ ಮಾಡಿಕೊಳ್ಳುತ್ತದೆ. ಅಂದರೆ ನಮ್ಮ ನೆಲದ ನೀರನ್ನು ಸಮರ್ಪಕವಾಗಿ ನಾವು ಬಳಸಲು ಅಶಕ್ತರಾಗಿದ್ದೇವೆ. ಅದೇ ಸಮಯಕ್ಕೆ ಪರಮಾಣು ಶಕ್ತಿ ರಾಷ್ಟ್ರ ಎಂಬ ಸ್ಥಾನ ಪಡೆಯಲು ಬಯಸುತ್ತೇವೆ. ನಾವೇನು ಮಾಡುತ್ತಿದ್ದೇವೆ ಎಂಬುದು ನಮಗೆ ತಿಳಿದ ಹಂತಕ್ಕೆ ಬಂದಿರುತ್ತೇವೆ.

ಈ ಕಂಪನಿಗಳ ಕಾಣಿಕೆ ಪಿಡುಗನ್ನು ತಡೆಗಟ್ಟಲು ಸಾಧ್ಯ ವಿಲ್ಲವೇ? ನಮ್ಮ ಇತಿಹಾಸದಲ್ಲಿ ನಮ್ಮ ರಾಜರು ಕಂದಾಯವಲ್ಲದೆ ಶ್ರೀಮಂತರಿಂದ, ಉಧ್ಯಮಿಗಳಿಂದ ಕಪ್ಪು ಕಾಣಿಕೆಯನ್ನು ಬಹಿರಂಗವಾವಗಿ ತೆಗೆದುಕೊಳ್ಳುತ್ತಿದ್ದರು ಮತ್ತು ಅದಕ್ಕೆ ಮಾನ್ಯತೆ ನೀಡಿದ್ದರು. ಇಂದಿನ ಅವಶ್ಯಕತೆ ಈ ಕಾಣಿಕೆಗಳನ್ನು ಅಧಿಕೃತಗೊಳಿಸುವುದೇ ಆಗಿರುತ್ತದೆ.

1. ಭಾರತದಲ್ಲಿ ಯಾವುದೇ ಕಂಪನಿ, ಗುತ್ತಿಗೆದಾರರು, ಶ್ರೀಮಂತರು, ರಾಜಕೀಯ ಪಕ್ಷಗಳಿಗೆ ಕಾಣಿಕೆ ನೀಡಿದ್ದರೆ ಅದನ್ನು ಚೆಕ್ ಮೂಲಕವೇ ನಿಡಬೇಕು, ಧಾರ್ಮಿಕ ಮತ್ತು ಪರೋಪಕಾರಿ ಸಂಸ್ಥೆಗಳಿಗೆ ದಾನ ನೀಡಿದಾಗ ಆದಾಯ ತೆರಿಗೆಯಲ್ಲಿ (80 ಎಲ್ ಪ್ರಕಾರ) ವಿನಾಯಿತಿ ನೀಡುವಂತೆ (ರಾಜಕೀಯ ಪಕ್ಷಗಳು ಕಾಣಿಕೆ ಸ್ವೀಕರಿಸಿದ ಬಗ್ಗೆ ರಶೀದಿ ನೀಡಬೇಕು. ರಾಷ್ಟ್ರೀಯ ಹಿತ ದೃಷ್ಟಿಯಿಂದ ರಸೀದಿ ನೀಡುವ ಮನೋಧೈರ್ಯ ಬೆಳಸಿಕೊಳ್ಳಬೇಕು. ರಾಜಕೀಯ ಪಕ್ಷಗಳು ನಿಜವಾಗಿಯೂ ಜೀವಂತವಾದ ಸಾಮಾಜಿಕ, ಧಾರ್ಮಿಕ ಸಂಘಗಳಾಗಿರುತ್ತದೆ) ಈ ಕಾಣಿಕೆಗೆ ಆದಾಯ ತೆರಿಗೆಯಿಂದ ವಿನಾಯ್ತಿ ನೀಡಬೇಕು. ಕಂಪನಿಗಳು ತಮ್ಮ ಲೆಕ್ಕ ಪತ್ರಗಳನ್ನು ಪ್ರಮಾಣಿಕವಾಗಿ ಇಡಬೇಕು. ಮತ್ತು ರಾಜಕೀಯ ಪಕ್ಷಗಳಿಗೆ ನೀಡಿದ ಕಾಣಿಕೆಯ ಮೊತ್ತವನ್ನು ತನ್ನ ಲೆಕ್ಕದಲ್ಲಿ ಸ್ಪಷ್ಟವಾಗಿ ತೋರಿಸಬೇಕು. ರಾಜಕೀಯ ಪಕ್ಷಗಳಿಗೆ ಕಾಣಿಕೆ ನೀಡುವಾಗ ಪಕ್ಷಗಳಿಗೆ ಹಿಡಿಶಾಪ ಹಾಕಿ ಹಣ ನೀಡುವ ಬದಲು ಲೊಕ ಕಲ್ಯಾಣಕ್ಕಾಗಿ ನೀಡುತ್ತೇನೆ ಎಂಬ ಹೆಮ್ಮೆ ಕಂಪನಿಗಳಲ್ಲಿ ಇರಬೇಕು.ಇಲ್ಲವೇ ಕೇಂದ್ರ, ರಾಜ್ಯ ಮತ್ತು ಸ್ಥಳೀಯ ಸರ್ಕಾರ, ಜಿ.ಪ. ಸೇರಿದಂತೆ ತಾವು ಸಂಗ್ರಹಿಸುವ ಒಟ್ಟು ಸಂಪನ್ಮೂಲದ 3% ಹಣ ಪಕ್ಷಗಳ ಧುರಿಣರಿಗೆ (ಆಡಳಿತ ಪಕ್ಷ, ವಿರೋಧಿ ಪಕ್ಷ) ನೇರವಾಗಿ ನೀಡಬೇಕು (2% ಮತು 1% ಪ್ರಮಾಣದಲ್ಲಿ).
2. ಆಳುವ ಪಕ್ಷಕ್ಕೆ ಶೇ 2% ಹಣ ನೀಡಿದಲ್ಲಿ ಕಡ್ಡಾಯವಾಗಿ ಅಧಿಕೃತ ವಿರೋಧಿ ಪಕ್ಷಕ್ಕೆ ಶೆ 1% ಕಾಣಿಕೆ ನೀಡಬೇಕು. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಆಡಳಿತ ಪಕ್ಷಕ್ಕೆ ಇರುವಷ್ಟೆ ಜವಾಬ್ದಾರಿ ವಿರೋಧಿ ಪಕ್ಷಕ್ಕೂ ಇರುತ್ತದೆ.
3. ಪ್ರತಿಯೊಂದು ಪಕ್ಷವೂ ಪಡೆದ ಕಾಣಿಕೆಗಳ ಲೆಕ್ಕವನ್ನು ಇಡಬೇಕು.
4. ಈ ಹಣವನ್ನು ಕಾರ್ಯಕರ್ತರ ಚಟುವಟಿಕೆಗಾಗಿ (ವೆಚ್ಚಕ್ಕಾಗಿ) ವಿನಿಯೋಗಿಸಬೇಕು. ಕಾರ್ಯಕರ್ತರಿಗೆ ನೀಡಿದ ಹಣದ ಲೆಕ್ಕವನ್ನು ಇಡಬೇಕು.
5. ಕಾರ್ಯಕರ್ತನು ತಾನು ಪಡೆದ ಹಣಕ್ಕೆ ಲೆಕ್ಕ ಕೊಡಬೇಕು. ಇಲ್ಲಿ ಅತೀ ಮುಖ್ಯ ವಿಷಯವೆಂದರೆ ಕಾರ್ಯಕರ್ತನು ತಾನು ಪಡೆದ ಹಣ ಕೇವಲ ಪಕ್ಷದ ಕೆಲಸಕ್ಕಾಗಿ ಬಳಸದೇ ತನ್ನ ಖಾಸಗಿ ಕೆಲಸಗಳಿಗಾಗಿಯೂ ಪಕ್ಷದ ಒಪ್ಪಿಗೆಯೊಂದಿಗೆ ಉಪಯೋಗಿಸಬಹುದು (ಹೊಲ, ಮನೆ ಖರೀದಿ ಆರೋಗ್ಯಕ್ಕೆ ಬಡವರಿಗೆ ದಾನ ಮಾಡುವುದಕ್ಕಾಗಿ) ಅದೇ ಪ್ರಕಾರ ಸಾರ್ವಜನಿಕರ ಹಿತಕ್ಕಾಗಿಯೂ ಬಳಸಬಹುದು. ಅವನು ಒಂದು ಪಕ್ಷ ಮಧ್ಯಪಾನ ಮಾಡಲಿ, ಸಿಗರೇಟು ಸೇದಲಿ, ವಿದೇಶಿ ನೃತ್ಯ ನೋಡಲಿ, ಚಿಂತೆ ಇಲ್ಲ. ಆದರೆ, ಅದನ್ನು ತನ್ನ ಪಕ್ಷದ ಸದಸ್ಯರಿಗೆ ತಿಳಿಸುವ ನೈತಿಕ ಧೈರ್ಯ ಹೊಂದಿರಬೇಕು.

6. ಈ ಹಣವನ್ನು ರಾಜಕೀಯ ಸಭೆ ಸಮಾರಂಭ ನೆಡೆಸಲು ಪಕ್ಷದ ನೀತಿಗಳನ್ನು ಪ್ರಚಾರಕ್ಕಾಗಿ ವೆಚ್ಚ ಮಾಡಬೇಕು.

ಹೀಗೆ ಬಂದ ಹಣ ಮತ್ತು ವೆಚ್ಚವಾದ ಹಣದ ಬಗ್ಗೆ ಸ್ಪಷ್ಟವಾದ ಲೆಕ್ಕಗಳನ್ನು ಇಟ್ಟಲ್ಲಿ ಆಂತರಿಕ ಪೈಪೋಟಿ ಇರಲಾರದು ಭಿನ್ನಮತೀಯರು ಹುಟ್ಟಲಾರರು ಹುಟ್ಟಿದರೂ ಬದುಕಲಾರರು. ಜಾತಿ ಆಧಾರದ ರಾಜಕೀಯ ನಿಂತು ಮಾನವನ ನಿಜವಾದ ಪ್ರಗತಿಯಾಗುವುದು.

ಇನ್ನೊಂದು ಪ್ರಶ್ನೆ; ಈ ರಾಜಕೀಯ ಕಾಣಿಕೆಯನ್ನು ಯಾರು ಯಾರು ಪಡೆಯಬೇಕು?

ಉತ್ತರ:ಚುನಾವಣೆ ಆಯೋಗದಿಂದ ಮಾನ್ಯತೆ ಪಡೆದ ಎಲ್ಲ ರಾಷ್ಟ್ರೀಯ ಮತ್ತು ಪ್ರಾದೇಶಿಕ ಪಕ್ಷಗಳು ಪಡೆಯಬಹುದು.

ರಾಜಕೀಯ ಪಕ್ಷಗಳು ಸತ್ಯ ನಿಷ್ಠುರವಾಗಿದ್ದರೆ ಅಧಿಕಾರಿಗಳು ಹದ್ದುಬಸ್ತಿನಲ್ಲಿ ಇರುತ್ತಾರೆ. ದುಷ್ಟರೊಂದಿಗೆ ಶಾಮೀಲು ಆಗಲಾರರು, ಕಂಪನಿಗಳು ತಪ್ಪು ಲೆಕ್ಕ ಇಡಲಾರವು. ಒಂದು ಪಕ್ಷ ಅಧಿಕಾರಿ ಶಾಮೀಲಾದರೂ ಕೂಡಲೇ ಅವರು ಸಿಕ್ಕಿಬೀಳುತ್ತಾರೆ. ದೌರ್ಭಾಗ್ಯವೆಂದರೆ ಸಿಪಾಯಿಂದ ಹಿಡಿದು ಪ್ರಧಾನ ಮಂತ್ರಿಯವರೆಗೂ ಎಲ್ಲರೂ ಭ್ರಷ್ಟಚಾರದ ಅರೋಪಕ್ಕೆ ಒಳಗಾಗಿದ್ದರೆ.

**ಲಂಚ ಮತ್ತು ಭ್ರಷ್ಟಾಚಾರಗಳ ವ್ಯತ್ಯಾಸ ಮತ್ತು ಅವಶ್ಯಕತೆ:**

**ಲಂಚ:–** ಆಂಗ್ಲ ಭಾಷೆಯಲ್ಲಿ ಲಂಚವೆಂದರೆ ಊಟ ಎಂದು ಅರ್ಥ ಇರುತ್ತದೆ. ಲಂಚವೆಂದರೆ ಕೆಳಹಂತದಲ್ಲಿ ನಿಯಮಗಳ ಪ್ರಕಾರ ನೆಡೆದುಕೊಳ್ಳುವ (ಯಾವುದೇ ಇಲಾಖೆ ಮುಖ್ಯಸ್ಥನಿಗಿಂತ ಕೆಳಗಿನ ಹುದ್ದೆ ಅಧಿಕಾರಿ) ಸಿಬ್ಬಂದಿಗೆ ನೀಡುವ ಹಣ ಲಂಚವಾಗಿರುತ್ತದೆ.ಇದು ಗಂಡಾಂತರಕಾರಿ ಇದನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಬೇಕು ಅಥವಾ ಗಣನೀಯವಾಗಿ ನಿಯಂತ್ರಣ ಮಾಡಬೇಕು ಇದಕ್ಕಾಗಿ ಅನೇಕ ವಿಧಿ ವಿಧಾನಗಳಿವೆ.

2. **ಭ್ರಷ್ಟಾಚಾರ:** ಇದು ಅವಶ್ಯಕ ಕೆಲ ಹಂತದಲ್ಲಿ ಭ್ರಷ್ಟಾಚಾರದಿಂದಲೂ ಪ್ರಯೋಜನವಾಗುತ್ತದೆ. ಕೊಲಂಬಸ್‌ನು ಪಶ್ಚಿಮಾಭಿಮುಖವಾಗಿ ಭಾರತಕ್ಕೆ ಬರಲು ಸಿದ್ದತೆ ಮಾಡಿಕೊಂಡಾಗ ಅವನೊಂದಿಗೆ ಹಡಗಿನಲ್ಲಿ ಬರಲು ಗೌರವಾನ್ವಿತ ನಾಗರಿಕರು ಒಪ್ಪಲಿಲ್ಲ ಆಗ ಅಲ್ಲಿನ ಆಡಳಿತವು (ರಾಜನು) ಜೈಲಿನಲ್ಲಿರುವ ಕೈದಿಗಳನ್ನು ಅವನೊಂದಿಗೆ ಹಡಗಿನಲ್ಲಿ ಕಳುಹಿಸಿದನು. ಅಪರಾಧಿಗಳು ಪ್ರಯೋಜನಕ್ಕೆ ಬಂದರು. ಈ ಪ್ರಕಾರವಾಗಿ ನೀತಿ ನಿಯಮಗಳನ್ನು ಬದಲಾಯಿಸಲು ಸಮರ್ಥರಾಗಿದ್ದವರು ಕಾಣಿಕೆಯನ್ನು ಸ್ವೀಕರಿಸಿದರೆ ಇಂದು ಅದನ್ನು ಭ್ರಷ್ಟಾಚಾರ ಎಂದು ಕರೆಯಲಾಗುತ್ತದೆ. ಇದು ತಪ್ಪು. ನೀತಿ ನಿಯಮಗಳನ್ನು ನಿರ್ಧರಿಸುವವರು ಕಾಣಿಕೆ ಸ್ವೀಕರಿಸುವ ಹಕ್ಕು ಹೊಂದಿದಂತೆ ಸಮಾಜವನ್ನು ರಕ್ಷಿಸುವ ಜವಾಬ್ಧಾರಿಯನ್ನು ಪಡೆದಿದ್ದಾರೆ. ಹೀಗಾಗಿ ಅವರು ಬಹಿರಂಗವಾಗಿ ಕಾಣಿಕೆಯನ್ನು ಪಡೆಯುವ ಧೈರ್ಯ ಹೊಂದಬೇಕು. ಲೆಕ್ಕ ನೀಡುವ ಧೈರ್ಯ ಹೊಂದಿರಬೇಕು. ದಿವಂಗತ ಶ್ರೀ ದೇವರಾಜ ಅರಸ ಅವರು ಕಾಣಿಕೆ ಪಡೆದುದನ್ನು ಬಹಿರಂಗವಾಗಿ ಒಪ್ಪಿಕೊಳ್ಳುತ್ತಿದ್ದರು. ಅದರೆ ಆ ಹಣ ಹೇಗೆ ವೆಚ್ಚವಾಯಿತು ಎಂಬುವುದನ್ನು ಅವರು ಲೆಕ್ಕವಿಟ್ಟು ಹೇಳಿದ್ದರೆ ನಿಜವಾಗಿಯೂ ಅವರೊಬ್ಬ ಅವತಾರಿ ಪುರುಷರಾಗುತ್ತಿದ್ದರು. ಈ ಕಾಣಿಕೆಗಳು ಸದ್ವಿನಿಯೋಗವಾಗಬೇಕು.ತಮ್ಮ ಜೀವನವನ್ನು ಸಮಾಜಸೇವೆಗಾಗಿ ಮುಡಿಪಾಗಿಟ್ಟ ರಾಜಕೀಯ ಧುರೀಣರು ತಮ್ಮ ನಿತ್ಯ ಅವಶ್ಯಕತೆಗಾಗಿ ಈ ಕಾಣಿಕೆ ಹಣ ಉಪಯೋಗಿಸುವ ಹಕ್ಕು ಹೊಂದಿರುತ್ತಾರೆ. ಆದರೆ ಅವರ ಎಲ್ಲ ವ್ಯವಹಾರಗಳು ಪಾರದರ್ಶಕವಾಗಿರಬೇಕು. ಅಂತಹ ಮಹನೀಯರು ಮಧ್ಯಪಾನ ಮಾಡಿ ಲೋಕ ಕಲ್ಯಾಣ ಮಾಡುತ್ತಾರೆ ಎಂದು ಜನರು ಒಪ್ಪಿದಲ್ಲಿ ಮಧ್ಯಪಾನ ಮಾಡಬಹುದು ಧೂಮಪಾನ ಮಾಡಬಹುದು.

3. **ಪ್ರತಿಭಾ ಸನ್ಮಾನ:** ಪ್ರತಿಭಾವಂತರು ಎಲ್ಲಾ ಕ್ಷೇತ್ರದಲ್ಲಿ ಇರಬೇಕು ರಾಜಕಾರಣದಲ್ಲಿಯೂ ಇರಬೇಕು. ಪ್ರತಿಭಾವಂತರ ಪಾತ್ರ ಮಹತ್ತರವಾಗಿದೆ. ಇಂದು ಶಾಲೆಯಲ್ಲಿ ಹೆಚ್ಚು ಅಂಕ ಪಡೆದ ವಿಧ್ಯಾರ್ಥಿಗಳಿಗೆ

ನೀನು ಜೀವನದಲ್ಲಿ ಏನಾಗುವಿ? ಎಂದರೆ ಐ.ಎ.ಎಸ್, ವೈದ್ಯ, ಇಂಜಿನೀಯರ ಎಂದು ಹೇಳುತ್ತಾರೆ. ನಾನು ಸಮಾಜ ಕಾರ್ಯಕರ್ತನಾಗುವೆ ಮಂತ್ರಿಯಾಗುವೆ ರಾಜಕೀಯ ಮುತ್ಸದಿಯಾಗುವೆನೆಂದು ಹೇಳುವುದಿಲ್ಲ. ನಮ್ಮ ಸಮಾಜದಲ್ಲಿ ನೈತಿಕತೆ ಎಷ್ಟರ ಮಟ್ಟಿಗೆ ಬರಬೇಕೆಂದರೆ ಶಾಲಾ ವಿದ್ಯಾರ್ಥಿಗಳು ನಾನು ಸಮಾಜ ಸೇವಕನಾಗುತ್ತೇನೆ, ಎಂದು ಹೆಮ್ಮೆಯಿಂದ ಹೇಳಿಕೊಳ್ಳುವವರಾಗಬೇಕು.

ಪ್ರತಿಭಾವಂತರು ಚುನಾವಣೆಗೆ ನಿಲ್ಲುವ ಪೂರ್ವದಲ್ಲಿ ನಾನು ಚುನಾಯಿತನಾದಲ್ಲಿ ನನಗೆ ಮಾಸಿಕವಾಗಿ ಇಷ್ಟು ಸಂಬಳ ನೀಡಬೇಕು, ಇಂತಹ ಸೌಲಭ್ಯ ನೀಡಬೇಕು ಎಂದು ಮೊದಲೇ ಘೋಷಣೆ ಮಾಡಬೇಕು. ಅವನು ಚುನಾಯಿತನಾದಲ್ಲಿ ಅವನಿಗೆ ಅಷ್ಟು ಹಣ ನೀಡಬೇಕು. "ಪ್ರಮಾಣಿಕತೆ ತನ್ನಿಂದ ತಾನೆ ಹುಟ್ಟಲಾರದು ಅದಕ್ಕಾಗಿ ವಾತಾವರಣ ನಿರ್ಮಿಸಬೇಕು", ಅಗಲೇ ಉತ್ತಮ ನಾಗರಿಕ ಜೀವನ ಸಾಧ್ಯವಾಗುವುದು.

**ನಾಲ್ಕನೇ ಸೂತ್ರ:**

ಪ್ರಭುದ್ದತೆ.

ಕರ್ನಾಟಕದಲ್ಲಿ ಪೂಜ್ಯನೀಯ ವ್ಯಕ್ತಿಗಳಲ್ಲಿ ಒಬ್ಬರಾದ ಶ್ರೀ ಪೇಜಾವರ ಮಠಾದೀಶರು ಮೇಲಿಂದ ಮೇಲೆ ಒಂದು ಮಾತನ್ನು ಹೇಳುತ್ತಾರೆ. ಬಾಲ್ಯ ವಿವಾಹವನ್ನು ಸರಕಾರ ನಿಷೇಧಿಸಿದಂತೆ ಬಾಲ ಸನ್ಯಾಸಿಗಳನ್ನು ನಿಯಂತ್ರಿಸಬೇಕು. ಬಾಲಕನಾಗಿದ್ದಾಗ ಅವನನ್ನು ಸನ್ಯಾಸಿಯನ್ನಾಗಿ ಮಾಡಿದರೆ ಅವನು ದೊಡ್ಡವನಾದ ಮೇಲೆ ಅನೇಕ ಪ್ರಸಂಗದಲ್ಲಿ ಅವನು ತನ್ನ ಮೂಲ ಸ್ವಬಾವಕ್ಕೆ ವಿರುದ್ದವಾಗಿ ನಡೆಯುವಂತೆ ಮಾಡುವುದು ಸಮಾಜಿಕ ದಬ್ಬಾಳಿಕೆಯ ಒಂದು ರೂಪವಾಗುತ್ತದೆ.. ಕಾರಣ ಧಾರ್ಮಿಕ ಸಂಸ್ಥೆಗಳಿಗೆ ಮುಖ್ಯಸ್ಥನಾಗುವವನಿಗೆ ಕನಿಷ್ಟ 40 ವರ್ಷ ವಯಸ್ಸಾಗಿರಬೇಕು. ಜನರು ಅವನ ಪೂರ್ವಾಪರವನ್ನು ತಿಳಿದು ಅವನ ಶುದ್ಧ ಚರಿತ್ರೆಯನ್ನು ತಿಳಿದ ನಂತರ ಅವನನ್ನು ಪೀಠಾಧಿಕಾರಿಯನ್ನಾಗಿ ಮಾಡಬೇಕು.

ಈ ಹಿತವಚನವು ರಾಜಕೀಯಕ್ಕೂ ಅನ್ವಯಿಸುತ್ತದೆ. ರಾಜಕೀಯ ಪಕ್ಷಗಳ ಮೇಲೆ ದೇಶವನ್ನು ಮತ್ತು ಮಾನವ ಜನಾಂಗವನ್ನು ಪರಿಪೂರ್ಣತೆಯ ಮಾರ್ಗದಲ್ಲಿ ನಡೆಸಿಕೊಂಡು ಹೋಗುವ ಜವಾಬ್ಧಾರಿ ಇರುತ್ತದೆ. ರಾಜಕೀಯವು ಸಜೀವ ಧರ್ಮವಾಗಿರುತ್ತದೆ. ಈ ಜವಾಬ್ದಾರಿ ಹೊರುವವನು ಪ್ರಬುದ್ದನಾಗಿರುವುದು ಅತೀ ಅವಶ್ಯಕ. ಸಾಮಾನ್ಯವಾಗಿ ಪ್ರಬುದ್ಧತೆ ಮತ್ತು ಸಮಾಜಿಕ ಜ್ಞಾನವು ಯೌವನವು ಕಳೆದ ತರುವಾಯ ಪ್ರಾಪ್ತವಾಗುತ್ತದೆ. ಮತದಾನದ ವಯಸ್ಸು 18 ಇರಬಹುದು ಅದರೆ ಜನ ಪ್ರತಿನಿಧಿಯಾಗಿ ಆಯ್ಕೆಯಾಗಬಯಸುವವರು ಕನಿಷ್ಟ 30 ವರುಷ ವಯಸ್ಸಾಗಿರಬೇಕು. ಈ ಪ್ರಕಾರ ಅವರ ವಯಸ್ಸು ನಿರ್ಧರಿಸಬಹುದಾಗಿದೆ. ಉದಾಹರಣೆಗೆ

| | ಕನಿಷ್ಟ ವಯಸ್ಸು | ಗರಿಷ್ಟ+ ಹೆಚ್ಚುವರಿ |
|---|---|---|
| ಗ್ರಾಮ ಪಂಚಾಯಿತಿ, ಮಂಡಲ ಪಂಚಾಯಿತಿ ಪ್ರತಿನಿದಿ | 30 | 50 + 20 |
| ತಾಲೂಕ ಪಂಚಾಯಿತಿ, ಪಟ್ಟಣ ಪಂಚಾಯಿತಿ ಪ್ರತಿನಿದಿ ನಗರಸಭೆ | 35 | 55 + 15 |
| ಜಿಲ್ಲಾ ಪಂಚಾಯಿತಿ, ಮಹಾನಗರ ಪಾಲಿಕೆ ವಿಧಾನ ಸಭೆ, ವಿಧಾನ ಪರಿಷತ್ತು ಪ್ರತಿನಿಧಿ | 40 | 60 + 10 |
| ಲೋಕ ಸಭೆ / ರಾಜ್ಯ ಸಭೆ | 45 | 65 + 05 |
| ರಾಷ್ಟ್ರಾಧ್ಯಕ್ಷ | 50 ರ ನಂತರ | ಗರಿಷ್ಟ ಮಿತಿ ಇಲ್ಲ |

ಈ ಗರಿಷ್ಟ ಅವಧಿಯ ನಂತರ ಅವರು ನಿವೃತ್ತರಾಗಬೇಕು ಸಮಾಜ ಮುನ್ನಡೆಸುವ ಜವಾಬ್ಧಾರಿಯನ್ನು ಸಂತೋಷದಿಂದ ಇನ್ನೊಬ್ಬರಿಗೆ ವಹಿಸಿಕೊಡುವ ಪ್ರಬುದ್ದತೆ ಹೊಂದಿರಬೇಕು.

ಲೋಕಸಭೆ, ರಾಜ್ಯಸಭೆ ಮತ್ತು ವಿಧಾನಸಭೆ / ವಿಧಾನ ಪರಿಷತ್ತುಗಳ ಸದಸ್ಯತ್ವವನ್ನು ಒಬ್ಬ ವ್ಯಕ್ತಿ ಗರಿಷ್ಟ 20–25 ವರುಷದ ಅವಧಿಯವರೆಗೆ ಹೊಂದಿರಬಹುದು. ಒಬ್ಬ ವ್ಯಕ್ತಿ ಮುಖ್ಯಮಂತ್ರಿ ಮತ್ತು ಪ್ರಧಾನ ಮಂತ್ರಿಗಳಾಗಿ ಗರಿಷ್ಟ 10 ವರುಷದ ಅವಧಿಗೆ ಇರಬೇಕು ಜನರಲ್ಲಿ ಇನ್ನೂ ಅವರ ಬಗ್ಗೆ ಗೌರವ ಇರುವಾಗಲೇ ನಿವೃತ್ತಿ ಹೊಂದುವ ಸಭ್ಯತೆ ಬೆಳೆಸಿಕೊಳ್ಳಬೇಕು.

**ಐದನೇಯ ಸೂತ್ರ:**

**ಜೀವನದ ಸಮಗ್ರತೆ ಬಗ್ಗೆ ಜ್ಞಾನ**

ರಾಜಕೀಯ ಮುಖ್ಯಸ್ಥರಾಗುವವರು ಅವಶ್ಯವಾಗಿ ಧಾರ್ಮಿಕನಾಗಿರಲೇಬೇಕು. ಆದರೆ ಮತಾಂಧನಾಗಿರಬಾರದು, ಜೀವನದ ಮೂಲಭೂತ ಗುರಿ ಏನು? ಎಂಬ ಬಗ್ಗೆ ಪರಿಜ್ಞಾನವನ್ನು, ಅಂತಿಮವಾಗಿ ಸಾವನ್ನು ಸಂತೋಷದಿಂದ ಸ್ವಾಗತಿಸುವ ಸಮಾಧಾನವನ್ನು ಹೊಂದಿರಬೇಕು. ಅದಕ್ಕಾಗಿ ಅವಶ್ಯಕ ತರಬೇತಿ ಪಡೆಯಬೇಕು, ಅಥವಾ ತರಬೇತಿ ನೀಡಬೇಕು. ಮರಣದ ಮೂಲಾರ್ಥವನ್ನು ಅರ್ಥ ಮಾಡಿಕೊಂಡಲ್ಲಿ ರಾಜಕೀಯದಲ್ಲಿ ಯಾವುದೇ ಸಮಸ್ಯೆಗಳು ಅವರನ್ನು ಪೀಡಿಸಲಾರವು ಧ್ಯಾನ ಸಮಾಧಿಗಳ ಜ್ಞಾನ ಹೊಂದಿದ್ದಲ್ಲಿ ಯಾವುದೇ ಬದಲಾವಣೆಯನ್ನು ತಡೆದುಕೊಳ್ಳಬಲ್ಲ ಮತ್ತು ಬದಲಾವಣೆ ಸ್ವೀಕರಿಸುವ ಮತ್ತು ಬದಲಾವಣೆಗೆ ಮಾರ್ಗ ಸುಗಮಗೊಳಿಸುವ ಶಕ್ತಿಯನ್ನು ಪಡೆದುಕೊಂಡಿರುತ್ತಾರೆ ಅದರಿಂದ ಮಾನವ ಕಲ್ಯಾಣಕಾರ್ಯವು ಪರಿಪೂರ್ಣತೆ ಮುಟ್ಟುತ್ತದೆ.

**ಕೊನೆಯ ಮಾತು**

ನಮ್ಮ ರಾಷ್ಟ್ರದ ಜನಪ್ರತಿನಿಧಿಗಳು ಈ ಪಂಚ ಸೂತ್ರಗಳನ್ನು ಹಂತ ಹಂತವಾಗಿ ಜಾರಿಗೆ ತರಲು ಪ್ರಯತ್ನಿಸಬೇಕಾಗಿದೆ,. ಈ ವಿಧಾನದಿಂದ ಆ ಕಾರ್ಯಕರ್ತರ ಜನ ಪ್ರತಿನಿಧಿಗಳ ಕಲ್ಯಾಣವಾಗುವುದು ಅದರೊಂದಿಗೆ ದೇಶದ ಮತ್ತು ಸಮಸ್ತ ಜನರ ಕಲ್ಯಾಣವಾಗುವುದು. ಸರ್ಕಾರವು ಈ ಬಗ್ಗೆ ಧನಾತ್ಮಕ ನೀತಿ ರೂಪಿಸಲು ಸಂಘ ಕೋರುತ್ತದೆ.

**10.<u>ನಿವೃತ್ತ ರಾಜಕಾರಣಿಗಳಿಗೆ ವಿಶೇಷ ವೃದ್ಧಾಶ್ರಮ</u>**

ಸ್ಥಳೀಯ ಸಂಸ್ಥೆಗಳು ನಾಗರೀಕರಿಗಾಗಿ ವೃದ್ಧಾಶ್ರಮಗಳನ್ನು ಧರ್ಮ ಛತ್ರಗಳನ್ನು ನಡೆಸುವದು ಅವಶ್ಯಕವಾಗಿರುವಂತೆ ನಿವೃತ್ತ ರಾಜಕಾರಣಿಗಳ ವಯಸ್ಸು 60 ದಾಟಿದ ನಂತರ ಅವರನ್ನು ನೋಡಿಕೊಳ್ಳಲು ಅವರ ಕುಟುಂಬದ ಸದಸ್ಯರು ಇಲ್ಲದಿದ್ದರೆ, ಅಥವಾ ಇದ್ದರೂ ಅಸಮರ್ಥರಾಗಿದ್ದರೆ ಅವರನ್ನು ಪುರ ಪಿತೃಗಳೆಂದು ಸ್ಥಳೀಯ ಸರ್ಕಾರವು ಅವರ ಯೊಗಕ್ಷೇಮವನ್ನು ಅತ್ಯಂತ ಗೌರವ ಹಾಗೂ ಆತ್ಮೀಯತೆಯಿಂದ ನೋಡಿಕೊಳ್ಳಬೇಕು. ಆಗ ಜನಸಾಮಾನ್ಯರಲ್ಲಿ ಸಮಾಜ ಸೇವಕರಾಗಲು ಉತ್ತಮ ವಾತಾವರಣ ನಿರ್ಮಿಸಿದಂತಾಗುತ್ತದೆ.

11.**<u>ನಾಮ ನಿರ್ದೇಶನ ಸದಸ್ಯರು</u>**

ಪ್ರತಿ ಸ್ಥಳೀಯ ಸರ್ಕಾರಕ್ಕೆ ರಾಜ್ಯ ಸರ್ಕಾರವು ಐದು ಜನ ನಾಮ ನಿರ್ದೇಶನ ಸದಸ್ಯರ ಆಯ್ಕೆ ಮಾಡಲು ಅವಕಾಶ ನೀಡಲಾಗಿದೆ ಮತ್ತು ಅವರು **1. ಶಿಕ್ಷಣ, 2. ಆರೋಗ್ಯ 3. ನಗರ ಯೋಜನೆ 4. ಮುನ್ಸಿಪಲ್ ಆಡಳಿತ ಹಾಗೂ 5. ಸಾಮಾಜಿಕ** ಸೇವೆಯಲ್ಲಿ ಪ್ರಾವಿಣ್ಯತೆ ಹೊಂದಿರಬೇಕು ಎಂದು ಹೇಳಲಾಗಿದೆ. ಆದರೆ ರಾಜ್ಯ ಸರ್ಕಾರವು ಇಂದು ಅಧಿಕಾರ ಹೊಂದಿದ ರಾಜಕೀಯ ಪಕ್ಷಗಳ ಕಾರ್ಯಕರ್ತರು ಇಲ್ಲವೆ ಸ್ಥಳೀಯ ಚುನಾವಣೆಯಲ್ಲಿ ಸೊತ ಅಭ್ಯರ್ಥಿಗಳನ್ನು ನಾಮನಿರ್ದೇಶಿತ ಸದಸ್ಯರೆಂದು ನಾಮಕರಣ ಮಾಡುತ್ತಿದೆ. ಇದು ಕಾನೂನಿನ ಮೂಲ ಉದ್ದೇಶಕ್ಕೆ ವ್ಯತಿರಿಕ್ತವಾಗಿದೆ. ಇದನ್ನು ಸರಿಮಾಡಲು ಇನ್ನು ಮುಂದೆ ಕಡ್ಡಾಯವಾಗಿ 60 ದಿಂದ 85ವರ್ಷ ಒಳಗಿನ ಉತ್ತಮ ಆರೋಗ್ಯಹೊಂದಿದ ಆಯಾ ಕ್ಷೇತ್ರದಲ್ಲಿ ನುರಿತ ವ್ಯಕ್ತಿಗಳನ್ನೇ ನಾಮನಿರ್ದೇಶಿತ ಸದಸ್ಯರು ಎಂದು ನೇಮಕಾತಿ ಮಾಡಬೇಕು. ಎಲ್ಲರೂ ಸಮಾಜ ಸೇವೆ ವಿಭಾಗಕ್ಕೆ ಸೇರಿರದೆ ಐದು ಜನರಲ್ಲಿ ಒಬ್ಬರು ಮಾತ್ರ ರಾಜಕೀಯ/ಸಮಾಜ ಸೇವೆಯಲ್ಲಿ ಅನುಭವಿಗಳಾಗಿ

ಇತರರು ಆಯಾ ವಿಷಯ ತಜ್ಞರಾಗಿ ನಿವೃತ್ತರಾಗಿ ಆಯಾ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ವಾಸಿಸುವ ಸರ್ಕಾರಿ ನೌಕರರು ಇಲ್ಲವೇ ರಾಜಕೀಯದಿಂದ ನಿವೃತ್ತಿ ಹೊಂದಿದ ಸದಸ್ಯರು ಆಗಿರಬೇಕು.

**12.ಸಮಾಜ ಸೇವಕರಿಗೆ /ಮುನ್ಸಿಪಲ್ ಸದಸ್ಯರಿಗೆ ಕನಿಷ್ಠ ಶಿಕ್ಷಣ**

ಇದು 10 ತಿಂಗಳ ಅಥವಾ 1ವರ್ಷದ ತರಬೇತಿ ಕಾರ್ಯಕ್ರಮ. ಸ್ಥಳೀಯ ಸಂಸ್ಥೆಗಳ ಚುನಾವಣೆ ಸೇರಿದಂತೆ ಎಲ್ಲಾ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು ಈ ಪರೀಕ್ಷೆ ಪಾಸಾಗಿರುವುದು ಕಡ್ಡಾಯವಾಗಬೇಕು (ಸರ್ಕಾರದ ರಚನೆ, ಪ್ರಮುಖ ಉದ್ದೇಶ, ಸರ್ಕಾರ ಮತ್ತು ನಾಗರಿಕರ ನಡುವಿನ ಸಂಬಂದ ಸ್ಥಾಪನೆಗಾಗಿ, ಅದು ತಂದೆ ಮಕ್ಕಳ, ತಾಯಿ ಮಕ್ಕಳ ಸಂಬಂದ ವಾಗಿರಬೇಕು ಎಲ್ಲದಕ್ಕೂ ನಾನೇ ಜವಾಬ್ದಾರನು ಎಂಬ ಮನೊಭಾವನೆಯನ್ನು ನಾಗರೀಕರು ಹೊಂದಿರಬೇಕು.) ಪರೀಕ್ಷೆ ಪಠ್ಯ ಕ್ರಮಗಳು ಈ ಪ್ರಕಾರವಾಗಿರಬೇಕು.

1. ಜಗತ್ತಿನ ಪ್ರಮುಖ ಧರ್ಮಗಳು, ಎಕತೆ/ಭಿನ್ನತೆ ಭಾರತದ ಪ್ರಮುಖ ಧರ್ಮಗಳು ಎಕತೆ/ಭಿನ್ನತೆ ಕರ್ನಾಟಕ ರಾಜ್ಯ ಪ್ರಮುಖ ಧರ್ಮಗಳು ಎಕತೆ/ಭಿನ್ನತೆ.
2. ಸ್ಥಳೀಯ ಸಮಾಜ ಸುಧಾರಕರು ರಾಜಕೀಯ ಚಿಂತಕರು, ಆಧುನಿಕ ಕರ್ನಾಟಕದ ಸಮಾಜ ಸುಧಾರಕರು,ಮಾನವ ಇತಿಹಾಸ, ಭಾರತ ಇತಿಹಾಸ, ಕರ್ನಾಟಕ ಇತಿಹಾಸ, ಪ್ರಾಚೀನ, ಮಧ್ಯಕಾಲೀನ, ಯು.ಎನ್.ಒ. ಹಿನ್ನೆಲೆ , ಇತಿಹಾಸ, ಕಾರ್ಯವಿಧಾನ
3. ಸರ್ಕಾರಗಳಲ್ಲಿ ಪ್ರಕಾರಗಳು ಭಾರತದ ಸಂವಿಧಾನದ ಪ್ರಮುಖ ಅಂಶಗಳು, ಭಾರತದ ಸ್ವಾತಂತ್ರ ಚಳುವಳಿ, ಸ್ಥಳೀಯ ಸರ್ಕಾರಗಳ ಆಡಳೀತ ಇತಿಹಾಸ, ವಿವಿಧ ಸ್ಥಳೀಯ ಆಡಳಿತ ವಿಧಾನಗಳು ಯುರೋಪ/ಭಾರತ ಸ್ಥಳೀಯ ಆಡಳಿತ – ಎಕತೆ/ಭಿನ್ನತೆ.
4. ಆಧುನಿಕ ಭಾರತದ ಪ್ರಮುಖ ರಾಜಕೀಯ ಪಕ್ಷಗಳು ಅವುಗಳ ಇತಿಹಾಸ ಬೆಳವಣಿಗೆ ಅವುಗಳಲ್ಲಿ ಎಕತೆ/ಭಿನ್ನತೆ ಕರ್ನಾಟಕ ಪ್ರಮುಖ ರಾಜಕೀಯ ಧುರಿಣರು
5. ನ್ಯಾಯವೆಂದರೆ ಏನು? ಕಾನೂನು ವ್ಯವಸ್ಥೆ ಆಡಳಿತ ವ್ಯವಸ್ಥೆಗಳು ಪ್ರಜಾಪ್ರಭುತ್ವ ಮುಖ್ಯ ಅಂಶಗಳು ಮಾನವನ ಹಕ್ಕುಗಳು ಮಹಿಳೆ/ಪುರುಷ ಸಮಾನತೆ, ಸಂಸ್ಕ್ರತಿ/ಪರಿಸರ/ಪರಂಪರೆಗಳು, ವ್ಯಕ್ತಿತ್ವ ಮತ್ತು ಧುರಿಣತ್ವ ತರಬೇತಿ ಮಾನಸಿಕ/ದೈಹಿಕ ಆರೋಗ್ಯ – ಉಪವಾಸ ಕನಿಷ್ಠ 12 ಗಂಟೆ ಆಹಾರ ಮತ್ತು ಆರೋಗ್ಯ ,ಆರೋಗ್ಯದ ಮೂಲಭೂತ ನಿಯಮಗಳು, ಪ್ರಕೃತಿ ಚಿಕಿತ್ಸಾ ವಿಧಾನ, ಉಪವಾಸ/ಯೋಗ/ಧ್ಯಾನದ/ಪ್ರಾರ್ಥನೆಗಳ ಮಹತ್ವ, ಸಹಜೀವನ ಅವಶ್ಯಕತೆ.
6. ವಿಜ್ಞಾನ, ತಂತ್ರಜ್ಞಾನ, ಪರಿಸರ ರಕ್ಷಣೆ – ನಿರಂತರ ಬೆಳವಣಿಗೆ ನಾಗರೀಕರು ಪಾಲಿಸಬೇಕಾಗುವ ಪ್ರಮುಖ ಕಾನೂನುಗಳೂ, Property law, Personnel law, etc. ಸಧ್ಯದ ಸರಕಾರಿ ಯೋಜನೆಗಳು,Creativities – ಭವಿಷತ್‌ನಲ್ಲಿ ಜಾರಿಗೊಳಿಸಬಹುದಾದ ನವನವೀನ ಯೋಜನೆಗಳು.

13. **<u>ಸಭೆ ಕರೆಯುವ ಅಧಿಕಾರ:</u>**

ಸಾಮಾನ್ಯ ಸಭೆ ಕರೆಯುವ ಅಧಿಕಾರ ಅಧ್ಯಕ್ಷರಿಗೆ ನೀಡಲಾಗಿದೆ. ಇಲ್ಲಿ ಸುಧಾರಣೆಯ ಅವಶ್ಯಕತೆ ಇದೆ. ಒಂದು ವರ್ಷದಲ್ಲಿ 4 ಸಾಮಾನ್ಯ ಸಭೆಗಳ ದಿನಾಂಕವನ್ನು ಸರ್ಕಾರವು ಖಾಯಂ ಆಗಿ ನಿಗದಿ ಮಾಡಬೇಕು, ಉದಾಹರಣೆಗೆ ಜನವರಿ, ಏಪ್ರಿಲ್,ಜುಲೈ ಅಕ್ಟೋಬರ್ ತಿಂಗಳಿನ ಮೊದಲನೇ ಮಂಗಳವಾರ ಅಂದು ರಜೆ ಇದ್ದಲ್ಲಿ ಮರುದಿನವೆಂದು ನಿಗದಿ ಮಾಡುವುದು. ಅಂದು ಅಧ್ಯಕ್ಷರು ಇರಲಿ ಇಲ್ಲದಿರಲಿ ಲಭ್ಯವಿದ್ದ ಸದಸ್ಯರು ಲಭ್ಯವಿದ್ದ ಸಿಬ್ಬಂದಿಯೊಂದಿಗೆ ಸಭೆ ನಡೆಸಿ ಠರಾವುಗಳನ್ನು ದಾಖಲಿಸಬೇಕು. ಹೆಚ್ಚುವರಿ ಸಭೆಗಳು ಅವಶ್ಯಕತೆ ಇದ್ದಲ್ಲಿ ಅಧ್ಯಕ್ಷರು ಈ ಮೊದಲಿನಂತೆ ಸಭೆಗಳನ್ನು ಕರೆಯಲು ಅವಕಾಶವಿರಬೇಕು .

14. **ವಾರ್ಡ್‌ಕಮೀಟಿ:/ನಗರ ಮಾಲೀಕರ ಸಮಿತಿ ರಚನೆ:**

ವಾರ್ಡ್ ಕಮಿಟಿಯಲ್ಲಿ 3 ಅಂಶಗಳು ಸ್ಪಷ್ಟವಾಗಿರಬೇಕು (Fund, Function & Functionaries,) ಆರ್ಥಿಕ ಭದ್ರತೆ, ನಿರ್ವಹಿಸಬೇಕಾದ ಕಾರ್ಯ, ಕಾರ್ಯನಿರ್ವಾಹಕರು. ಈ ಹಿನ್ನಲೆಯಲ್ಲಿ ಪ್ರತಿ ಚುನಾವಣೆ ಮತಗಟ್ಟೆ ವ್ಯಾಪ್ತಿಯನ್ನು ವಾರ್ಡ್ ಸಮಿತಿಯ ಮೂಲ ಆಡಳಿತ ಘಟಕವೆಂದು ಪರಿಗಣಿಸಬೇಕು. ಹಿಗೆ ಒಂದು ಮತಗಟ್ಟೆಗೆ ಒಬ್ಬ ಪ್ರತಿನಿಧಿ ಇರಬೇಕು ಇಂತಃ ಹತ್ತು ಮತಗಟ್ಟೆ ಪ್ರದೇಶವನ್ನು ಒಂದು ಬ್ಲಾಕ್ ಆಗಿ ಪರಿಗಣಿಸಬೇಕು ಇಂತಃ 10 ಬ್ಲಾಕ್‌ಗಳನ್ನು ಸೇರಿಸಿ ಒಂದು ವಾರ್ಡ್ ಮಾಡಬೇಕು. (ಮುನ್ಸಿಪಲ್ ಮಾಲೀಕರ ವಾರ್ಡ್ ಹಾಗೂ ಚುನಾವಣಾ ವಾರ್ಡ್ ಒಂದೇ ಆಗಿರುವುದಿಲ್ಲ.) ಮುನ್ಸಿಪಾಲಿಟಿ ತನ್ನ ಆಯವ್ಯಯ ಸಿದ್ಧಪಡಿಸುವಾಗ ಪ್ರತಿ ಮತಗಟ್ಟೆ ವ್ಯಾಪ್ತಿಯಲ್ಲಿ ಯಾವಯಾವ ಕಾಮಗಾರಿ ಕೈಗೊಳ್ಳಬೇಕೆಂಬ ಬಗ್ಗೆ ಬ್ಲಾಕ್ ಲೆವೆಲ್ / ಮತಗಟ್ಟೆ ಲೆವೆಲ್ ಜನರ ಅಭಿಪ್ರಾಯ ಕೇಳಬೇಕು ಅವರಿಗೆ ಆ ವರ್ಷದಲ್ಲಿ ಆ ಮತಗಟ್ಟೆಗೆ ಸಂಬಂಧಿಸಿದಂತೆ ಮುನ್ಸಿಪಾಲಿಟಿಯಲ್ಲಿ ಲಭ್ಯವಾಗಬಹುದಾದ ಹಣಕಾಸಿನ ಮಾಹಿತಿ ನೀಡಬೇಕು. ಲಭ್ಯವಿದ್ದ ಹಣಕ್ಕಿಂತಲು ಹೆಚ್ಚಿಗೆ ಹಣ ಯೋಜನೆಗೆ ಬೇಕಾದಲ್ಲಿ ಯೋಜನೆ ಕಡಿತಗೊಳಿಸಬೇಕು. ಇಲ್ಲವೆ ಕೊರತೆ ಹಣವನ್ನು ಅವರೇ ಸ್ವಯಂ ಸ್ಪೂರ್ತಿಯಿಂದ ಭರಿಸಿ ಸದರಿ ಕಾಮಗಾರಿ ನಿರ್ವಹಿಸಬೇಕು. ಕನಿಷ್ಠ ಪಕ್ಷ ಆಯಾ ಮತಗಟ್ಟೆಯಲ್ಲಿ ಸಂಗ್ರಹಿಸುವ ಕಂದಾಯ ಆಯಾ ಪ್ರದೇಶ ನಿರ್ವಾಹಣಾ ವೆಚ್ಚಕ್ಕೆ ಸಮನಾಗಿರಬೇಕು.

ಆರು ತಿಂಗಳನಂತರ ಈ ಕಾಮಗಾರಿಗೆ ಸಂಬಂಧಿಸಿದಂತೆ ಸಭೆ ಸೇರಿ ಅದರ ಉಸ್ತುವಾರಿ ಪ್ರಗತಿಯನ್ನು ಅವರು ಪರಿಶೀಲಿಸಲು ಜವಾಬ್ದಾರಿ/ ಹಕ್ಕು ಹೊಂದಿರಬೇಕು. ಹೀಗೆ ಜನರು ಕೇವಲ ಓಟನ್ನು ಮಾತ್ರ ನೀಡದೆ ಸ್ಥಳೀಯ ಅಭಿವೃದ್ಧಿಗೆ ಕೊರತೆ ಬೀಳುವ ಹಣವನ್ನು, ಸಾಮಗ್ರಿಗಳನ್ನು, ಸೇವೆಯನ್ನು ಸಹ ನೀಡಲು ಮುಂದಾಬೇಕು.ಆಗ ಜವಾಬ್ದಾರಿಯುತ ವಾರ್ಡ್ ಸಮಿತಿ ರಚಿಸಲು ಸಾಧ್ಯವಾಗುವುದು.

ಅದೇ ಸಮಯಕ್ಕೆ ಬ್ಲಾಕ್ ಸಮಿತಿ ಸದಸ್ಯರು ಆಯಾ ಬ್ಲಾಕಿನ ಸ್ಥಳೀಯ ಸರ್ಕಾರದ ಎಲ್ಲಾ ಕಾಮಗಾರಿಗಳ ಮೌಲೀಕರಣ, ಸಾಮಾಜಿಕ ಪರಿಶೋಧನೆ ಇತ್ಯಾದಿಗಳನ್ನು ಆರು ತಿಂಗಳಿಗೊಮ್ಮೆ ಕೈಗೊಳ್ಳಲು ಅಧಿಕಾರ ಹೊಂದಿರಬೇಕು. ಬ್ಲಾಕ್ ಸಮಿತಿಗಳ ವ್ಯಾಪ್ತಿಯಲ್ಲಿ ಕ್ರಮಬದ್ಧವಾಗಿ ಆಯ್ಕೆಯಾದ ಚುನಾಯಿತರಾದ ಸದಸ್ಯರ ಬ್ಲಾಕ್ ಮಾಲೀಕರ /ವಾರ್ಡ್‌ಗಳಲ್ಲಿ ಗೌರವಾಧ್ಯಕ್ಷರಾಗಿ ಕಾರ್ಯನಿರ್ವಹಿಸಬೇಕು.

15.**<u>ಲೋಕಾಯುಕ್ತ ಆಡಳಿತ ಕುರಿತು:</u>**

ಸಾರ್ವಜನಿಕ ಆಡಳಿತದಲ್ಲಿ ದಕ್ಷತೆ ಸಾಧಿಸಲು ಲೋಕಾಯುಕ್ತ ವ್ಯವಸ್ಥೆಯನ್ನು ತರಲಾಗಿದೆ. ಪ್ರಾರಂಭದಲ್ಲಿ ಲೋಕಾಯುಕ್ತವು ಟ್ರ್ಯಾಪ್ ಹಾಗೂ ಡಿಸ್ ಪ್ರೊಪೊರ್ಷನಲ್ ವೆಲ್ತ್ ಬಗ್ಗೆ ವಿಚಾರಣೆ ನಡೆಸುತ್ತಿತು. ಇಂದು, ವಿಳಂಬ, ಗುಣಮಟ್ಟ, ನಿತ್ಯ ಉಸ್ತುವಾರಿ, ನಿಯಮಗಳ ಉಲ್ಲಂಘನೆಗಳ ಬಗ್ಗೆಯು ಕ್ರಮ ಜರುಗಿಸಲು ಪ್ರಾರಂಭಿಸಿರುತ್ತಾರೆ (1.Delay, 2.Procedural irregularity, 3.O&M & 4.Quality control) ಈ ಹಿನ್ನೆಲೆಯಲ್ಲಿ ಈ ಕೆಳಗೆ ನಾಲ್ಕು ವಾಸ್ತವಿಕ ಉದಾಹರಣೆಗಳನ್ನು ಪರಿಶೀಲಿಸಬಹುದಾಗಿದೆ.

| | |
|---|---|
| ಪ್ರಕರಣ–1 | ಸ್ಥಳೀಯ ಸರ್ಕಾರದ ವ್ಯಾಪ್ತಿಯಲ್ಲಿ ಗಟಾರು ಸ್ವಚ್ಛತಾ ಕಾರ್ಯವನ್ನು ಸಮಯಕ್ಕೆ ಸರಿಯಾಗಿ ಮಾಡಿಲ್ಲವೆಂದು ಮುಖ್ಯಾಧಿಕಾರಿ ಮೇಲೆ ವಿಚಾರಣೆ ಹೂಡಲಾಗಿದೆ. ಇಲ್ಲಿ ಸ್ವಚ್ಛತಾ ಮಾಡುವ ಸಿಬ್ಬಂದಿಯ ಮೇಲೆ ಮೇಲ್ವಿಚಾರಣೆ ಮಾಡುವ ಸಿಬ್ಬಂದಿ ಇದ್ದು ನಂತರ ಮುಖ್ಯಾಧಿಕಾರಿ ಬರುತ್ತಾರೆ ನಿತ್ಯ ಸ್ವಚ್ಛತಾ ಕಾರ್ಯದ ವಿಳಂಬಕ್ಕಾಗಿ ಮುಖ್ಯಾಧಿಕಾರಿ ಮೇಲೆ ವಿಚಾರಣೆಗೆ ಪ್ರಾರಂಭಿಸಿದಲ್ಲಿ ವಿಚಾರಣೆ ಮುಗಿಯುವವರೆಗೆ ಮುಖ್ಯಾಧಿಕಾರಿಗೆ ಬಡ್ತಿ ಸಿಗುವುದಿಲ್ಲ. ನಿವೃತ್ತನಾದಲ್ಲಿ ನಿವೃತ್ತಿ ಉಪದಾನ ಹಾಗೂ ಇತರ ಆರ್ಥಿಕ ಸೌಲಭ್ಯದಿಂದ ವಂಚಿತರಾಗುತ್ತಾರೆ. ಇಲ್ಲಿ ಮುಖ್ಯಾಧಿಕಾರಿ ನೇರವಾಗಿ ನಿತ್ಯ ನಿರ್ವಹಣಾ ಕಾರ್ಯಕ್ಕೆ ಜವಾಬ್ದಾರನಾಗಿರುವದಿಲ್ಲ ಆದರೂ ಮುಖ್ಯಾಧಿಕಾರಿಯನ್ನು ಬಲಿಪಶುವನ್ನಾಗಿ ಮಾಡಲಾಗುತ್ತದೆ ಎಂದು ಸಂಘ ಭಾವಿಸುತ್ತದೆ. ಹಾಗೊಂದು ಪಕ್ಷ ಮುಖ್ಯಾಧಿಕಾರಿಯೇ ಅಂತಿಮವಾಗಿ ಜವಾಬ್ದಾರ ಎನ್ನುವುದಾದಲ್ಲಿ ಸ್ವಚ್ಛತಾ ಸಿಬ್ಬಂದಿ ನೇಮಕಾತಿ ಹಾಗೂ ತೆಗೆದು ಹಾಕುವ ಅಧಿಕಾರ ಮುಖ್ಯಾಧಿಕಾರಿಗೆ ನೀಡುವುದು ನ್ಯಾಯ ಸಮ್ಮತ.ಆದರೆ ವ್ಯವಸ್ಥೆಯಲ್ಲಿ ಅದಕ್ಕೆ ಅವಕಾಶವಿರುವುದಿಲ್ಲ. |
| ಪ್ರಕರಣ–2 | ಕಟ್ಟಡ ಪರವಾನಿಗೆಗೆ ಮುಖ್ಯಾಧಿಕಾರಿ ಅಧಿಕೃತವಾಗಿ ಅನುಮೋದನೆ ನೀಡುತ್ತಾರೆ. ಹಾಗೆ ಅನುಮೋದನೆ ನೀಡುವಾಗ ಕಟ್ಟಡ ಪರವಾನಿಗೆಯನ್ನು ತಾಂತ್ರಿಕವಾಗಿ ಟೌನ್ ಪ್ಲ್ಯಾನಿಂಗ್ ಇಲಾಖೆ ದೃಢೀಕರಿಸುತ್ತದೆ. ಒಂದು ಪ್ರಕರಣದಲ್ಲಿ ಟೌನ್ ಪ್ಲ್ಯಾನಿಂಗ್ ಇಲಾಖೆ ಅಧಿಕಾರಿಯು ಸಿಡಿಪಿ ಯಲ್ಲಿ 50ಅಡಿ ರಸ್ತೆ ಇದ್ದರೂ ಕಟ್ಟಡ ಪರವಾನಿಗೆಗೆ ತಾಂತ್ರಿಕ ಅನುಮೋದನೆ ನೀಡುವಾಗ 30ಅಡಿ ರಸ್ತೆ ಇರುವುದಾಗಿ ಶಿಫಾರಸ್ಸು ಮಾಡಿರುತ್ತಾರೆ. ಟೌನ್ ಪ್ಲ್ಯಾನಿಂಗ್ ಇಲಾಖೆ ಅಧಿಕಾರಿಯ ಶಿಫಾರಸ್ಸಿನ ಮೇಲೆ ಮುಖ್ಯಾಧಿಕಾರಿ ಅನುಮೋಧನೆ ನೀಡಿರುತ್ತಾರೆ. ಜಾರಿಯಲ್ಲಿ ಇರುವ ನಿಯಮಗಳ ಪ್ರಕಾರ ಕಟ್ಟಡ ಪರವಾನಿಗೆ ನೀಡುವಾಗ ತಪ್ಪಾಗಿ ಅನುಮೊದನೆ ನೀಡಿದಾಗ ಕಟ್ಟಡ ಪರವಾನಿಗೆ ಹಿಂದಕ್ಕೆ ಪಡೆಯಲು ಇಲ್ಲವೇ ಪರಿಷ್ಕರಿಸಿ ಸರಿಪಡಿಸಿ ಪರಿಷ್ಕೃತ ಪರವಾನಿಗೆ ನೀಡಲು ಅವಕಾಶವಿರುತ್ತದೆ. ಈ ಪ್ರಕಾರ ತಪ್ಪು ಸರಿಪಡಿಸುವ ಬದಲು ಮುಖ್ಯಾಧಿಕಾರಿ ಮೇಲೆ ವಿಚಾರಣೆ ಹೂಡಲಾಗಿದೆ.ಇಲ್ಲಿ ಮುಖ್ಯಾಧಿಕಾರಿ ಬಲಿ ಪಶು ಆಗಿರುತ್ತಾನೆ.ವಾಸ್ತವಿಕವಾಗಿ ಟೌನ್ ಪ್ಲಾನಿಂಗ್ ಅಧಿಕಾರಿ ನೇರ ಜವಾಬ್ದಾರನಾಗಿದ್ದು ಟೌನ್ ಪ್ಲಾನಿಂಗ್ ಅಧಿಕಾರಿ ವಿರುದ್ಧ ವಿಚಾರಣೆ ಮಾಡಬೇಕಾಗಿತ್ತು. |

| | |
|---|---|
| ಪ್ರಕರಣ–3 | ಒಂದು ಸಿಸಿ ರಸ್ತೆಯನ್ನು ಮಾಡಿದ ತರುವಾಯ ಸಂಬಂಧಿಸಿದ ಅಭಿಯಂತರರು ಮತ್ತು ಮೂರನೆ ಪಾರ್ಟಿ ಅಭಿಯಂತರರು ಗುಣಮಟ್ಟದ ಬಗ್ಗೆ ಶಿಫಾರಸ್ಸು ಮಾಡಿದ ತರುವಾಯ ಮುಖ್ಯಾಧಿಕಾರಿ ಗುತ್ತಿಗೆದಾರನಿಗೆ ಹಣ ಪಾವತಿ ಮಾಡಿರುತ್ತಾರೆ. ಮುಂದಿನ ಮೂರು ವರ್ಷದಲ್ಲಿ ರಸ್ತೆ ಹಾಳಾಗಿ ಹೊಗಿದೆ ಎಂದು ವ್ಯಕ್ತಿ ಒಬ್ಬರು ದೂರು ನೀಡಿದ ತರುವಾಯ ರಸ್ತೆ ಕಾಮಗಾರಿಯ ಗುತ್ತಿಗೆದಾರರು ಮತ್ತು ಮೂರನೇ ಅಭಿಯಂತರರನ್ನು ವಿಚಾರಣೆಗೆ ಗುರಿ ಪಡಿಸದೇ ಕೇವಲ ಮುಖ್ಯಾಧಿಕಾರಿ ಹಾಗೂ ಮುನ್ಸಿಪಲ ಅಭಿಯಂತರರ ವಿರುದ್ಧ ವಿಚಾರಣೆ ಹೂಡಲಾಗಿದೆ. ಇಲ್ಲಿ ಅಭಿಯಂತರರ ಶಿಫಾರಸ್ಸಿನ ಆಧಾರದಲ್ಲಿ ಹಣ ಪಾವತಿಸಲಾಗುತ್ತದೆ. ಗುಣಮಟ್ಟಕ್ಕೆ ಅಭಿಯಂತರರು ಪ್ರಮುಖವಾಗಿ ಜವಾಬ್ದರರಾಗಿರುತ್ತಾರೆ. ಆದರೆ ಮುಖ್ಯಾಧಿಕಾರಿ 25% ಜವಾಬ್ದಾರರು ಎಂದು ರಸ್ತೆ ವೆಚ್ಚದ 25% ಹಣ ಪಾವತಿಸಲು ಮುಖ್ಯಾಧಿಕಾರಿಗೆ ಲೋಕಾಯುಕ್ತ ನಿರ್ದೇಶಿಸಿದೆ. ವಾಸ್ತವಿಕವಾಗಿ ಗುತ್ತಿಗೆದಾರನು ಪೂರ್ಣಪ್ರಮಾಣದಲ್ಲಿ ಜವಾಬ್ದರರಾಗಿರುತ್ತಾರೆ. ಅಭಿಯಂತರರು ಭಾಗಶಃ ಜವಾಬ್ದರಾಗಿರುತ್ತಾರೆ. ಈ ವಿಚಾರಣೆಯಲ್ಲಿ ಗುತ್ತಿಗೆದಾರರನ್ನು ವಿಚಾರಣೆಗೆ ಬಲಪಡಿಸಬೇಕಾಗಿತ್ತು. 3ನೇಯ ಅಭಿಯಂತರರನ್ನು ವಿಚಾರಣೆಗೆ ಒಳಪಡಿಸಬೇಕಾಗಿತ್ತು. ಆದರೆ ಹಾಗೆ ಮಾಡಿಡಿರುವುದಿಲ್ಲ. ಆದರೆ ಇಲ್ಲಿ ಮುಖ್ಯಾಧಿಕಾರಿಯನ್ನು ಬಲಿಪಶು ಮಾಡಲಾಗಿದೆ. |
| ಪ್ರಕರಣ–4 | ಸ್ಥಳೀಯ ಸರ್ಕಾರವು ಠರಾವು ಮಾಡಿ ಟೆಂಡರ್ ಕರೆದು ಗುತ್ತಿಗೆ ನೀಡಿ ಕಚ್ಚಾ ರಸ್ತೆ ಸಿದ್ದ ಪಡಿಸಿದ ತರುವಾಯ ದೃಢೀಕರಿಸಿ ಹಣ ಪಾವತಿಸಲಾಗಿದೆ. ಆದರೆ ಆ ರಸ್ತೆ ಮಾಡದೇ ಬಿಲ್ಲು ನೀಡಲಾಗಿದೆ ಎಂದು ಓರ್ವ ವ್ಯಕ್ತಿ ದೂರು ನೀಡಿದ್ದಾರೆ. ಇಲ್ಲಿ ಮುಖ್ಯಾಧಿಕಾರಿ ವಿರುದ್ಧ ವಿಚಾರಣೆ ಹೂಡಲಾಗಿದೆ. ಲೋಕಾಯುಕ್ತರು ಸಾಮಾನ್ಯ ಜನರ ದೂರಿಗೆ ನಂಬುತ್ತಾರೆ ಹೊರತು ಸ್ಥಳೀಯ ಸರ್ಕಾರದ ಠರಾವು, ಟೆಂಡರ್ ಪ್ರಕ್ರಿಯೆ, ಗುತ್ತಿಗೆ ನೀಡಿರುವ ಎಂ.ಬಿ ದಾಖಲೆ ಇತ್ಯಾಧಿಗಳನ್ನು ನಂಬದೇ ವಿಚಾರಣೆ ಹೂಡುತ್ತಾರೆ. ಇಲ್ಲಿ ಇಡೀ ಆಡಳಿತ ವ್ಯವಸ್ಥೆಯನ್ನು ಲೋಕಾಯುಕ್ತರು ಅವಿಶ್ವಾಸದಿಂದ ನೋಡಿರುತ್ತಾರೆ. ಇಲ್ಲಿ ಹೀಗೆ ಬೇಕಾಬಿಟ್ಟಿ ಲೋಕಾಯುಕ್ತರು ವಿಚಾರಣೆ ಪ್ರಾರಂಭಿಸಿರುತ್ತಾರೆ. ಲೋಕಾಯುಕ್ತವು ತನ್ನ ಗಾಂಭೀರ್ಯತೆಯನ್ನು ಕಳೆದು ಕೊಂಡಿರುತ್ತದೆ. ಈ ವಿಚಾರಣೆಗೆ ಪ್ರಾರಂಭಿಸಲು ಆಸಕ್ತಿ ಹೊಂದಿದ ಲೋಕಾಯುಕ್ತ ಸಂಸ್ಥೆ ಸದರಿ ವಿಚಾರಣೆಗಳನ್ನು ಮುಕ್ತಾಯಗೊಳಿಸಲು ಆಸಕ್ತಿ ಹೊಂದಿಲ್ಲ 10–15 ವರ್ಷದವರೆಗೆ ಈ ತರಹದ ವಿಚಾರಣೆಗಳನ್ನು ಮುಂದುವರಿಸಲಾಗುತ್ತದೆ ಇದರಿಂದ ದಕ್ಷತೆ ಹೆಚ್ಚಿಸುವ ಬದಲು ದಕ್ಷತೆ ಕುಂಠಿತಗೊಳ್ಳುತ್ತದೆ. |
| | ಪ್ರಕರಣಗಳ ಇತ್ಯರ್ಥದ ವಿಳಂಬದಿಂದ ಮುಂಬಡ್ತಿ ಹಾಗೂ ನಿವೃತ್ತಿ ಆರ್ಥಿಕ ಸೌಲಭ್ಯಗಳ ವಿಳಂಬದಿಂದ ಬ್ರಷ್ಟಾಚಾರ ಕಡಿಮೆಗೊಳ್ಳುವ ಬದಲು ನ್ಯಾಯದ ಹೆಸರಿನಲ್ಲಿ ಅನ್ಯಾಯ ಉಂಟಾಗಿ ಬ್ರಷ್ಟಾಚಾರದ ಹೊಸದೊಂದು ಶಾಖೆ ಹುಟ್ಟಲು ಕಾರಣವಾಗಿದೆ. ನ್ಯಾಯದಾನದಲ್ಲಿನ ವಿಳಂಬವು ನ್ಯಾಯವನ್ನು ನಿರಾಕರಿಸಿದಂತೆ ಎಂದು ಹೇಳಲಾಗುತ್ತದೆ (justice delayed is justice denied) ನ್ಯಾಯದಾನದಲ್ಲಿ ಒಂಭತ್ತು ಜನ ಅಪರಾಧಿಗಳು ಶಿಕ್ಷೆ ಇಂದ ತಪ್ಪಿಸಿಕೊಂಡರು ಸರಿ ಆದರೆ ಒಬ್ಬ ನಿರಪರಾಧಿಗೆ ಶಿಕ್ಷೆ ಆಗಬಾರದು ಎಂದು ನ್ಯಾಯ ಶಾಸ್ತ್ರ ಹೇಳುತ್ತದೆ.<br>ಈ ಹಿನ್ನೆಲೆಯಲ್ಲಿ ಲೊಕಾಯುಕ್ತ ಸಂಸ್ಥೆಯ ಈ ಅನ್ಯಾಯಗಳ ನಿವಾರಣೆಗಾಗಿ ಸಂಘವು ಈ ಕೆಳಗಿನ ಬೇಡಿಕೆಯನ್ನು ಮಂಡಿಸುತ್ತದೆ<br>1. ಲೊಕಾಯುಕ್ತವು ಕೇವಲ ಟ್ರ್ಯಾಪ್ ಮತ್ತು ರೇಡ್‌ಗಳನ್ನು ಮಾತ್ರ ಮಾಡಬೇಕು ಇತರ ಲೋಪದೋಷಗಳನ್ನು ಆಯಾ ಇಲಾಖೆಗಳು ನೋಡಿಕೊಳ್ಳಬೇಕು.<br>2. ಆದರೂ ಸಹಿತ ಲೋಕಾಯುಕ್ತವು 100% ದಕ್ಷತೆ ಸಾಧಿಸಲು, 1.ಗುಣಮಟ್ಟ ಖಾತರಿ 2.ವಿಳಂಬ, 3.ನಿಯಮಗಳ ಉಲ್ಲಂಘನೆ ಹಾಗೂ 4.ನಿತ್ಯ ಉಸ್ತುವಾರಿ ವಿಷಯಗಳ ಬಗ್ಗೆಯೂ ತಾನು ಕ್ರಮ ವಹಿಸುತ್ತೇನೆ ಎನ್ನುವದಾದಲ್ಲಿ ಈ ಅಜೆಂಡಾದಲ್ಲಿ ಈಗಾಗಲೇ ತಿಳಿಸಿದ ಮುನ್ಸಿಪಲ್ ಆಡಳಿತಕ್ಕೆ |

| | |
|---|---|
| | ಸಂಬಂಧಿಸಿದಂತೆ ಉಲ್ಲೇಖಿಸಲಾದ ಎಲ್ಲ ಕುಂದು ಕೊರತೆಗಳನ್ನು ವಿಶೇಷವಾಗಿ ಸಿಬ್ಬಂದಿಗಳ ಕೊರತೆಯನ್ನು ಲೋಕಾಯುಕ್ತವು ಮೊದಲು ಸರಿಪಡಿಸಲು ಸಮರ್ಥವಾಗಬೇಕು. ಹಾಗೆ ಪಡಿಸುವುದು ನ್ಯಾಯ ಸಮ್ಮತವಾಗಿದೆ.<br>3. ನಗರಾಡಳಿತ ಈ ಕುಂದು ಕೊರತೆಗಳನ್ನು ಸರಿ ಪಡಿಸದೆ ಎಲ್ಲಾ ಜವಾಬ್ದಾರಿ ವಹಿಸಿಕೊಳ್ಳಲು ಇಚ್ಛಿಸಿದಲ್ಲಿ ಎಲ್ಲಾ ವಿಚಾರಣೆಗಳನ್ನು ದಾಖಲಾತಿಮಾಡಿದ 6 ತಿಂಗಳು ಒಳಗಾಗಿ ಅವುಗಳನ್ನು ಅಂತಿಮವಾಗಿ ಇತ್ಯರ್ಥ ಪಡೆಸಲು ಲೋಕಾಯುಕ್ತವು ಸಮರ್ಥವಾಗಿರಬೇಕು. ಒಂದು ಪಕ್ಷ 6 ತಿಂಗಳಲ್ಲಿ ಇತ್ಯಾರ್ಥವಾಗದೇ ಇದ್ದಲ್ಲಿ ಸದರಿ ಪ್ರಕರಣ ಮುಕ್ತಾಯವಾಗಿದೆ ಎಂದು ಪರಿಗಣಿಸಬೇಕು.<br>4. ತನ್ನಲ್ಲಿ ಕಾಲಬದ್ಧವಾಗಿ ಪ್ರಕರಣಗಳನ್ನು ಇತ್ಯರ್ಥ ಪಡಿಸಲು ಸಾಧ್ಯವಿಲ್ಲದೇ ಇರುವಾಗ ಮತ್ತು ತನ್ನ ಇತಿಮಿತಿ ಮೀರಿ ನ್ಯಾಯದ ಹೆಸರಿನಲ್ಲಿ ಅಸಂಖ್ಯಾತ ವಿಚಾರಣೆಗಳನ್ನು ಪ್ರಾರಂಭಿಸಿ ಇತ್ಯರ್ಥ ಪಡಿಸದೇ ಇರುವುದರಿಂದ ಈ ವಿಳಂಬಗಳಿಂದ ಆಡಳಿತದಲ್ಲಿ ಕ್ಷೋಭೆ ಉಂಟಾಗಿರುತ್ತದೆ ಇದು **"ನ್ಯಾಯದ ಹೆಸರಿನಲ್ಲಿ ಮಾಡುವ ಪರಮ ಅನ್ಯಾಯ"** ವಾಗಿದೆ. ಈ ದೊಷವನ್ನು ಕೂಡಲೇ ಸರಿ ಪಡಿಸಲು ಸಂಘವು ಒತ್ತಾಯಿಸುತ್ತದೆ.<br>5. ಈ ದೋಷ ಪರಿಹಾರಾರ್ಥಕವಾಗಿ ಬಾರ್ ಕೌನ್ಸಿಲ್, ಚಾರ್ಟರ್ಡ್ ಅಕೌಂಟೆಂಟ್, ಮಾದರಿಯಲ್ಲಿ ಸರ್ಕಾರಿ ನೌಕರರು ತಪ್ಪು ಮಾಡಿರುವ ಬಗ್ಗೆ ದೂರುಗಳು ಬಂದಾಗ ಪ್ರಥಮ ಹಂತದಲ್ಲಿ ಆಯಾ ಸರ್ಕಾರಿ ನೌಕರರ ಸಂಘಗಳೇ ವಿಚಾರಣೆ ನಡೆಸಿವರದಿ ನೀಡಲು ಅವಕಾಶ ಒದಗಿಸಬೇಕು. ಅದು ಸರಿ ಇಲ್ಲದಿದ್ದಲ್ಲಿ ಸಂಬಂಧಿಸಿದ ಇಲಾಖೆ ವಿಚಾರಣೆ ಮಾಡಬೇಕು ಅದೂ ಸರಿ ಇಲ್ಲದಿದ್ದಲ್ಲಿ ಲೋಕಾಯುಕ್ತ ಮಾಡಬೇಕು. ಅದಕ್ಕಾಗಿ ಪ್ರತಿ ಹಂತದಲ್ಲಿ ಸಮಯ ನಿಗದಿಪಡಿಸಬೇಕು. ಭಾರತ ದೇಶವು ಸ್ವತಂತ್ರ ದೇಶವಾಗಿದ್ದು ನೌಕರನು ಸಹ ಇಲ್ಲಿಯ ಪ್ರಜೆಯಾಗಿರುತ್ತಾನೆ ಮತ್ತು ನೌಕರನು ಈ ದೇಶದ ಮಾಲಿಕನೂ ಸಹ ಆಗಿರುತ್ತಾನೆ. ನೌಕರರು ಮಾಡಿದ ತಪ್ಪಿನ ಬಗ್ಗೆ ಅವನ ಅಭಿಪ್ರಾಯದ ಜೊತೆಗೆ ಅವನ ಸಹುದ್ಯೋಗಿಗಳ ಅಭಿಪ್ರಾಯವನ್ನು / ವರದಿಯನ್ನು ಪಡೆಯುವ ಹೊಸ ಸಂಪ್ರದಾಯವನ್ನು ಸರ್ಕಾರ ಪ್ರಾರಂಭಿಸಬೇಕು ಎಂದು ಸಂಘ ಒತ್ತಾಯಿಸುತ್ತದೆ. |

16. **100% ವೈದ್ಯಕೀಯ ವೆಚ್ಚ ಮರುಪಾವತಿ:**

(ಅ) ಸದ್ಯದ ವೈದ್ಯಕೀಯ ವೆಚ್ಚ ಮರುಪಾವತಿ ಪದ್ಧತಿ ಸರಿ ಇರುವುದಿಲ್ಲ. ವೆಚ್ಚ ಮಾಡಿದ ಹಣದಲ್ಲಿ 20% ರಿಂದ 30% ಮಾತ್ರ ಮರುಪಾವತಿ ಆಗುತ್ತದೆ. ಅದರ ಬದಲು ಮನ್ನಣೆ ಪಡೆದ ಖಾಸಗಿ/ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಾಗ ಸದರಿ ಆಸ್ಪತ್ರೆಗೆ ನೀಡಿದ ಬಿಲ್ಲಿನ ಪೂರ್ಣಮೊತ್ತವನ್ನು ಮರು ಪಾವತಿಸಬೇಕು ಇಲ್ಲವೆ ನೌಕರನು ಉಚಿತವಾಗಿ ಸೌಲಭ್ಯ ಪಡೆದು ಸೇವಾ ಶುಲ್ಕವನ್ನು ನೇರವಾಗಿ ಈ ಸ್ಥಳೀಯ ಸಂಸ್ಥೆಯು ಸಂಬಂದಿಸಿದ ಆಸ್ಪತ್ರೆಗೆ ನೀಡಬೇಕು.

(ಆ) ಕೇಂದ್ರ ಸರ್ಕಾರದ **ಸಿ.ಜಿ.ಹೆಚ್.ಎಸ್** ಮಾದರಿಯಲ್ಲಿ ನಿವೃತ್ತಿ ನಂತರವು ಮುನ್ಸಿಪಲ್ ನೌಕರರಿಗೆ ವೈದ್ಯಕೀಯ ಸೌಲಭ್ಯವನ್ನು ಮುಂದುವರೆಯಬೇಕು.

**17.ಸರ್ಕಾರಿ ನೌಕರರ ನೇಮಕಾತಿ ಮತ್ತು ನಿವೃತ್ತಿ ವಯಸ್ಸು: ಒಂದು ವೈಜ್ಞಾನಿಕ ನೀತಿ:–**

ಇತ್ತೀಚೆಗೆ ಕೇಂದ್ರ ಸರ್ಕಾರ ನೌಕರರ ನಿವೃತ್ತಿ ವಯಸ್ಸನ್ನು 60 ವರ್ಷಕ್ಕೆ ಏರಿಸಿರುತ್ತದೆ.ಇದು ಕೆಲ ಹಂತದಲ್ಲಿ ಸ್ವಾಗತಾರ್ಹವಾಗಿದೆ. ಅಮೇರಿಕಾ ದೇಶದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ನಿವೃತ್ತಿ ವಯಸ್ಸು ಇರುವುದಿಲ್ಲ. ಮುಖ್ಯ ನ್ಯಾಯಾಧೀಶರು ತಮಗೆ ಸಾಕು ಎನಿಸುವ ವರಗೆ ನ್ಯಾಯಾಧೀಶರಾಗಿ ಮುಂದುವರೆಯುತ್ತಾರೆ.ಅವರು ಎಂದು ಆ ಕೆಲಸ ಬೇಡ ಎಂದು ತೀರ್ಮಾನ ಮಾಡುತ್ತಾರೋ ಅಲ್ಲಿಯವರೆಗೆ ಅವರೇ ಮುಖ್ಯ ನ್ಯಾಯಾಧೀಶರು. ಅವರು ಸ್ವಯಂ ನಿವೃತ್ತರಾದರೆ ನಿವೃತ್ತಿ ವೇತನ ಮೊದಲಿನ ವೇತನಕ್ಕೆ ಸಮವಾಗಿರುತ್ತದೆ. ಇದೇ ಪ್ರಕಾರ ಭಾರತದಲ್ಲಿ ಸುಪ್ರೀಂ ಕೋರ್ಟಿನ ನ್ಯಾಯಾಧೀಶರಿಗೆ ಅನ್ವಯಿಸಬಹುದಾಗಿದೆ. ಈ ಆಧಾರದ ಮೇಲೆ ಬೇರೆ ಹುದ್ದೆಗಳಿಗೆ ಬೇರೆ ಬೇರೆ ನಿವೃತ್ತಿ ವಯಸ್ಸು ನಿಗದಿಪಡಿಸುವುದು ಅವಶ್ಯವಾಗಿದೆ.

ಇದೇ ನಿಯಮವನ್ನು ಪೋಲೀಸ್ ಪೇದೆ, ಪೌರಕಾರ್ಮಿಕರು, ಕಛೇರಿ ಜವಾನರಿಗೆ, ಗುಮಾಸ್ತರಿಗೆ ಅನ್ವಯಿಸುವುದು ಸಮರ್ಥನೀಯವಾಗಿರುವುದಿಲ್ಲ. ಈ ಹುದ್ದೆಯಲ್ಲಿ ಚಲನವಲನವು ಅಧಿಕವಾಗಿರುತ್ತದೆ. 20 ವರ್ಷದ ಜವಾನರು ಮಾಡುವ ಕೆಲಸವನ್ನು 60 ವರ್ಷದ ಜವಾನರು ಮಾಡಲು ಸಧ್ಯವೇ ಇಲ್ಲ. 50 ವರ್ಷಗಳ ನಂತರ ಗುಮಾಸ್ತರು ಶೀಘ್ರವಾಗಿ ಬರೆಯುವ ಶಕ್ತಿ ಕಳೆದುಕೊಳ್ಳುತ್ತಾರೆ. ಬೆರಳಚ್ಚುಗಾರರು, ಶೀಘ್ರಲಿಪಿಗಾರರು ಕೂಡಾ ಬರವಣಿಗೆ, ಬೆರಳಚ್ಚುಗಳಲ್ಲಿ ತೀವ್ರತೆಯನ್ನು ಕಳೆದುಕೊಳ್ಳುತ್ತಾರೆ. ಮಧ್ಯಮ ಆಡಳಿತ ಹಂತದಲ್ಲಿ ಅಧಿಕಾರಿಗಳು ಮೇಲಿಂದ ಮೇಲೆ ಪ್ರಯಾಣಗಳನ್ನು ಕೈಗೊಳ್ಳಬೇಗಾಗಿದ್ದು 55ರ ನಂತರ ಪ್ರಯಾಣ ಕೈಗೊಳ್ಳವ ಶಕ್ತಿ ಅವರಲ್ಲಿ ಉಳಿಯಲಾರದು. ಕೆಲ ಪ್ರಸಂಗದಲ್ಲಿ ಕೆಲ ವ್ಯಕ್ತಿಗಳು (5 ಶೇಕಡಾ) ತಮ್ಮ ವಯಸ್ಸು ಹೆಚ್ಚಾದರೂ ಕಾರ್ಯದಕ್ಷತೆ ಉಳಿಸಿಕೊಂಡಿರುತ್ತಾರೆ ಅಂತಹ ವ್ಯಕ್ತಿಗಳ ಕಾರ್ಯದಕ್ಷತೆ ಪರೀಕ್ಷೆಗಳನ್ನು ನಿಗದಿಪಡಿಸಿ ಲಿಪಿಕ ಮತ್ತು ದೈಹಿಕ ಪರೀಕ್ಷೆಯಲ್ಲಿ ಪಾಸಾದರೆ ಅವರ ಸೇವಾವಧಿಯನ್ನು 2–3 ವರ್ಷ ವಿಸ್ತರಿಸಬಹುದು. ಎ ವೃಂದದ ಅಧಿಕಾರಿಗಳು ಶೀಘ್ರವಾಗಿ ಬರೆಯಬೇಕಾಗಿಲ್ಲ ಅವರಿಗೆ ಆಪ್ತ ಸಹಾಯಕರು ಇರುತ್ತಾರೆ. ಮೇಲಿಂದ ಮೇಲೆ ಪ್ರವಾಸ ಮಾಡಬೇಕಾಗಿರುವುದಿಲ್ಲ. ಅವರಿಗೆ ವಿಶ್ರಾಂತಿ ಕೊಠಡಿಗಳು ಇರುವುದರಿಂದ 60 ವರ್ಷ ಸೇವೆಯಲ್ಲಿ ಮುಂದುವರಿಯಬಹುದು.

ಸೈನ್ಯದಲ್ಲಿ ನಿವೃತ್ತಿ ವಯಸ್ಸು ಹುದ್ದೆಯನ್ನು ಅವಲಂಬಿಸಿರುತ್ತದೆ. ಯುದ್ದ ವಿಮಾನ ಚಾಲಕರು 25ನೇ ವಯಸ್ಸಿಗೆ ನಿವೃತ್ತಿಯಾಗುತ್ತಾರೆ. ಅದೇ ಪ್ರಕಾರ ಅಣು ಶಕ್ತಿ ಇಲಾಖೆಯಲ್ಲಿ ರೇಡಿಯೇಶನ್ ಕ್ರಿಯೆಗೆ ಒಳಗಾಗುವವರಿಗೆ ಹೆಚ್ಚುವರಿ ರಜೆಯನ್ನು ನೀಡಲಾಗುತ್ತದೆ.

ಈ ಅಂಶಗಳ ಹಿನ್ನಲೆಯಲ್ಲಿ ಸರ್ಕಾರದ ಸೇವೆಯನ್ನು ಎ.ಬಿ.ಸಿ.ಡಿ ಎಂದು ನಾಲ್ಕು ವೃಂದಗಳಲ್ಲಿ ವಿಂಗಡಿಸಲಾಗಿದೆ ನೇಮಕಾತಿ ಮತ್ತು ನಿವೃತ್ತಿ ವಯಸ್ಸುನ್ನು ಈ ಪ್ರಕಾರವಾಗಿ ನಿಗದಿಪಡಿಸಬಹುದಾಗಿದೆ.

| ವೃಂದ | ನೇಮಕಾತಿ | | ನಿವೃತ್ತಿ ವಯಸ್ಸು | ಒಟ್ಟು ಸೇವಾವಧಿ | |
|---|---|---|---|---|---|
| | ಕನಿಷ | ಗರಿಷ್ಟ | | ಕನಿಷ | ಗರಿಷ್ಟ |
| D | 16 | 20 | 45 | 25 | 29 |
| C | 20 | 25 | 50 | 25 | 30 |
| B | 22 | 28 | 55 | 27 | 33 |
| A | 22 | 30 | 60 | 30 | 38 |

ಹೀಗೆ ನೇಮಕಾತಿ ಮತ್ತು ನಿವೃತ್ತಿ ವಯಸ್ಸು ನಿಗದಿ ಪಡಿಸಿದಲ್ಲಿ ಶ್ರಮ ಜೀವಿಗಳ ಕಲ್ಯಾಣವಾಗುತ್ತದೆ. ಸಾಮಾನ್ಯವಾಗಿ 45 ವರ್ಷಗಳ ತರುವಾಯ ಸರ್ಕಾರಿ ನೌಕರರು ರಕ್ತದ ಒತ್ತಡ,

ಸಕ್ಕರೆ ಖಾಯಿಲೆ, ಬೆನ್ನು ನೋವು, ಸಂದು ನೋವಿಗೆ ಒಳಗಾಗುತ್ತಾರೆ.ಇಂತಹ ಸ್ಥಿತಿಯಲ್ಲಿ ಅವರಿಂದ ಉತ್ತಮ ಸೇವೆ ಪಡೆಯಲು ಸಾಧ್ಯವಿಲ್ಲ ಅದೇ ಸಮಯಕ್ಕೆ ಬಲವಂತ ಮಾಡಿದಲ್ಲಿ ಅದು ಮಾನವೀಯತೆ ಉಲ್ಲಂಘನೆಯೂ ಆಗುತ್ತದೆ ಹಾಗೆ ಬಿಟ್ಟಲ್ಲಿ ಕಾರ್ಯಾದಕ್ಷತೆಯಲ್ಲಿ ಕುಂದು ಉಂಟಾಗುತ್ತದೆ. ಶಿಸ್ತು ಸೈನ್ಯದಲ್ಲಿ ಮಾತ್ರ ಅವಶ್ಯಕ ಎಂದು ಹೇಳಲು ಬಾರದು. ಬದಲಾಗಿ ಅದು ನಾಗರೀಕ ಆಡಳಿತದಲ್ಲಿಯೂ ಇರುವುದು ಅತೀ ಅವಶ್ಯಕವಾಗಿರುತ್ತದೆ.

ಮೇಲಿನ ವಿಚಾರಗಳು ಯೋಗ್ಯವೆನಿಸಿದರೂ ಅವುಗಳನ್ನು ಜಾರಿಗೊಳಸಲು ಬಹಳ ತೊಂದರೆ ಅನುಭವಿಸಬೇಕಾಗುತ್ತದೆ. ಸದ್ಯದ ಸ್ಥಿತಿಯಲ್ಲಿ.

ಡಿ ವೃಂದದಲ್ಲಿ ಗರಿಷ್ಟ 13 ವರ್ಷ, ಸಿ ವೃಂದದಲ್ಲಿ ಗರಿಷ್ಟ 8 ವರ್ಷ ಮತ್ತು ಬಿ ವೃಂದದಲ್ಲಿ ಗರಿಷ್ಟ 3 ವರ್ಷ,ಈ ಪ್ರಕಾರವಾಗಿ ಸೇವಾ ಕಡಿತವಾಗುವುದರಿಂದ ಈ ವೃಂದದ ನೌಕರರು ಪ್ರತಿರೋಧ ವ್ಯಕ್ತಪಡಿಸುತ್ತಾರೆ. ಸಮಾಜದಲ್ಲಿ ಶಿಸ್ತು ಬೇಕೆ ಬೇಕು ಅದಕ್ಕಾಗಿ ಪ್ರತಿಯೊಬ್ಬರು ತ್ಯಾಗ ಮಾಡಬೇಕಾಗಿದ್ದು ಸರ್ಕಾರಿ ನೌಕರರು ಸ್ವಲ್ಪ ಮಟ್ಟಿಗಿನ ತ್ಯಾಗ ಮಾಡಬೇಕಾಗುತ್ತದೆ.

ಬಿ ವೃಂದದ ನೌಕರ 55ಕ್ಕೆ ವರ್ಷಕ್ಕೆ ನಿವೃತ್ತನಾದರೂ ಗರಿಷ್ಟ 57.5ಕ್ಕೆ ನಿವೃತ್ತನಾಗಿದ್ದಾನೆ ಎಂದು ಭಾವಿಸಿ ನಿವೃತ್ತಿ ವೇತನ ನಿಗದಿ ಪಡಿಸಬೇಕು. ಅದೇ ಪ್ರಕಾರ ಸಿ ವೃಂದದ ನೌಕರರನ್ನು 50 ವರ್ಷಕೆ ನಿವೃತ್ತನಾದರೂ ಗರಿಷ್ಟ 56ನೇ ವರ್ಷಕ್ಕೆ ನಿವೃತ್ತನಾಗಿದ್ದಾನೆ ಎಂದೂ ಭಾವಿಸಿ ನಿವೃತ್ತಿ ವೇತನ ನಿಗದಿ ಪಡಿಸಬೇಕು. ಅದೇ ಪ್ರಕಾರ ಡಿ ವೃಂದದ ನೌಕರನು 45 ವಯಸ್ಸಿಗೆ ನಿವೃತ್ತನಾದರೂ ಗರಿಷ್ಟ 54ನೇ ವಯಸ್ಸಿಗೆ ನಿವೃತ್ತನಾಗಿದ್ದಾನೆ ಎಂದು ಭಾವಿಸಿ ನಿವೃತ್ತಿ ವೇತನ ನೀಡಬೇಕು.ಅಥವಾ ಯಾವುದೇ ವೃಂದದಲ್ಲಿ ನಿವೃತ್ತಿ ಹೊಂದುವ ನೌಕರನ ಸೇವೆಯಲ್ಲಿ ಎಷ್ಟು ವರ್ಷ ಕಡಿತವಾಗುವುದೋ ಒಟ್ಟು ಕಡಿತದ 75ಶೇ. ಅವಧಿಯ ಸೇವೆ ಮಾಡಿದ್ದೇನೆ ಎಂದು ಭಾವಿಸಿ ನಿವೃತ್ತಿ ವೇತನ ನೀಡಬೇಕು. ಅಥವಾ ಹೊಸ ನಿಯಮ ದಿಂದ ಎಷ್ಟು ಸೇವಾ ಕಡಿತವಾದರೂ ಅವನು ಪೂರ್ಣಅವಧಿಗೆ ಕಾರ್ಯ ಮಾಡಿದ್ದಾನೆ ಎಂದು ನಿವೃತ್ತಿ ವೇತನ ನಿಗದಿಪಡಿಸಿ ನೀಡಬೇಕು. ಇನ್ನೊಂದು ವಿಶೇಷ ನಿಯಮವೆಂದರೆ ಎಲ್ಲಿ ಡಿ ವೃಂದದ ನೌಕರನ ಸೇವೆಯಲ್ಲಿ 10 ವರ್ಷ ಅಥವಾ ಅದಕ್ಕಿಂತಲೂ ಹೆಚ್ಚಿಗೆ ಸೇವಾ ಕಡಿತವಾಗುತ್ತದೆಯೋ ಅಂತಃ ಸಂದರ್ಭದಲ್ಲಿ ಮೇಲೆ ಹೇಳಿದ ಪ್ರಕಾರ ನಿವೃತ್ತಿ ವೇತನ ನಿಗದ ಪಡಿಸಬೇಕು ಮತ್ತು ಡಿ ವೃಂದದ ಸಮೀಪ ಸಂಬಂಧಿಗೆ (ಮಗ,ಮಗಳು,ಅಳಿಯ ಇತ್ಯಾದಿ) ಡಿ ವೃಂದದಲ್ಲಿ ಈ ಸೇವಾ ಕಡಿತಕ್ಕೆ ಪರಿಹಾರವಾಗಿ ನೌಕರಿ ನೀಡಬೇಕು. ಸಮೀಪದ ಸಂಬಂಧಿ ನೌಕರಿ ಪಡೆದಲ್ಲಿ ಡಿ ವೃಂದದ ನೌಕರನು 45ನೇ ವಯಸ್ಸಿಗೆ ನಿವೃತ್ತನಾದಲ್ಲಿ ಅವನು 45ನೇ ವಯಸ್ಸಿಗೆ ಎಷ್ಟು ವರ್ಷ ಸೇವೆ ಸಲ್ಲಿಸಿರುತ್ತಾನೋ ಅಷ್ಟಕ್ಕೆ ಮಾತ್ರ ನಿವೃತ್ತಿ ವೇತನ ನಿಗದಿಪಡಿಸಬೇಕು.

ಈ ನಿಯಮಗಳನ್ನು ತಕ್ಷಣ ಜಾರಿಗೆ ತರದೆ ಕನಿಷ್ಟ ಎರಡು ವರ್ಷಗಳ ನಂತರ ಜಾರಿಗೆ ಬರುವಂತೆ ಸಮಯ ನಿಗದಿಪಡಿಸಬೇಕು. ಈ ಎರಡು ವರ್ಷ ಅವಧಿಯಲ್ಲಿ ನೌಕರರ ನಿವೃತ್ತಿಯಿಂದ ತೆರವಾಗುವ ಎಲ್ಲ ಹುದ್ದೆಗಳನ್ನು ಕೂಡಲೇ ತುಂಬಲು ಅವಶ್ಯಕವಾಗಿ ಬೇಕಾಗುವ ಸಿಬ್ಬಂದಿಯನ್ನು ಆಯ್ಕೆ ಮಾಡಿ ಇಟ್ಟುಕೊಳ್ಳಬೇಕು. ಇದರಿಂದ ಆಡಳಿತದಲ್ಲಿ ಹೊಸ ಶಕ್ತಿ ಬರುತ್ತದೆ. ಹಳೆಯ ಅನುಭವ ಉಳಿಯುತ್ತದೆ. ಈ ಬಗ್ಗೆ ರಾಜ್ಯ ಸರ್ಕಾರ ಗಂಭೀರವಾಗಿ ಆಲೋಚಿಸಲು ಸಂಘ ಕೋರುತ್ತದೆ.

**18.ವರ್ಗಾವಣೆ ನೀತಿ:–**

ದಕ್ಷ ಆಡಳಿತಕ್ಕೆ ವರ್ಗಾವಣೆ ಅತಿ ಪ್ರಬಲ ಅಸ್ತ್ರವಾಗಿರುತ್ತದೆ. ಆದರೆ ಇಂದು ವರ್ಗಾವಣೆ ಮುನ್ಸಿಪಲ್ ಆಡಳಿತದಲ್ಲಿ ಇಚ್ಛಿತ ಗುರಿ ಸಾಧಿಸುತ್ತಾ ಇಲ್ಲವೆಂದು ಸಂಘ ಭಾವಿಸುತ್ತದೆ. ಕರ್ನಾಟಕ ರಾಜ್ಯ ವಾಣಿಜ್ಯ ತೆರಿಗೆ ಇಲಾಖೆ ಹಾಗೂ ಶಿಕ್ಷಣ ಇಲಾಖೆಯಲ್ಲಿ ಅಳವಡಿಸಿದ ವರ್ಗಾವಣೆ ನೀತಿಯನ್ನು ನಗರಾಡಳಿತಕ್ಕೂ ಅನ್ವಯಿಸಬೇಕು ಎಂದು ಸಂಘ ಒತ್ತಾಯಿಸುತ್ತದೆ. [1. ಹುದ್ದೆಗಳ ವರ್ಗೀಕರಣ 2. ಕೌನ್ಸಲಿಂಗ್ 3. ಮುಂಗಡ ವರ್ಗಾವಣೆ].

ವರ್ಗಾವಣೆಗಳ ಪ್ರಕ್ರಿಯೆ ಡಿಸೆಂಬರ್ 1 ರಿಂದ ಪ್ರಾರಂಭಿಸಿ ಫೆಬ್ರವರಿ 15 ಕ್ಕೆ ಅಂತಿಮಗೊಳಿಸಬೇಕು. ವರ್ಗಾವಣೆ ಆ ವರ್ಷ ಮೇ ತಿಂಗಳು 1 ರಿಂದ 30 ಒಳಗೆ ಅನುಷ್ಠಾನಗೊಳಿಸಬೇಕು. ಒಬ್ಬ ನೌಕರನು ಮುಖ್ಯಾಧಿಕಾರಿ / ಪೌರಾಯುಕ್ತನಾಗಿ ಒಂದು ಸಲ ಗರಿಷ್ಠ 5 ವರ್ಷ ಮಾತ್ರ ಇರಬೇಕು. ನಂತರ 5 ವರ್ಷ ಕೂಲಿಂಗ್ ಪಿರಿಯಡ್ ನಲ್ಲಿ ಇರಬೇಕು. ಅಂದರೆ ಪೌರಾಯುಕ್ತ/ ಮುಖ್ಯಾಧಿಕಾರಿಯಾಗದೇ ಇತರ ಹುದ್ದೆಯಲ್ಲಿ ಕಾರ್ಯನಿರ್ವಹಿಸಬೇಕು. 5 ವರ್ಷ ತರುವಾಯ ಪುನಃ ಮುಖ್ಯಾಧಿಕಾರಿ/ಪೌರಾಯುಕ್ತರು ಆಗಬೇಕು ಇದರಿಂದ ಮುಖ್ಯಾಧಿಕಾರಿ/ಪೌರಾಯುಕ್ತರ ಹುದ್ದೆ ಪಡೆಯಲು ನಡೆಯುವ ಪೈಪೋಟಿ ನಿಯಂತ್ರಣಕ್ಕೆ ಬರುತ್ತದೆ. ಎಲ್ಲರೂ ತಮ್ಮ ತಮ್ಮ ಬುದ್ಧಿಮತ್ತೆ, ಕಾರ್ಯದಕ್ಷತೆ ಪ್ರದರ್ಶಿಸಲು ಅವಕಾಶ ದೊರಕುತ್ತದೆ. ಆಡಳಿತದಲ್ಲಿ ಹೊಸತನ ಮೂಡಲು ಅವಕಾಶವಾಗುತ್ತದೆ. ಸರ್ಕಾರವು ಅಧಿಕೃತವಾಗಿ ಈ ನೀತಿ ಒಪ್ಪಿದ ತರುವಾಯ ವಾಣಿಜ್ಯ ಇಲಾಖೆಯ ಮಾದರಿಯಲ್ಲಿ ಹುದ್ದೆಗಳ ವರ್ಗೀಕರಣವನ್ನು ಸಂಘ ಒದಗಿಸುವುದು.

ಹೀಗೆ ವರ್ಗೀಕರಣ ಮಾಡಿ ವರ್ಗಾವಣೆ ಮಾಡುವಾಗ ಶಿಕ್ಷಣ ಇಲಾಖೆಯಲ್ಲಿ ಅಳವಡಿಸಿದ ಕೌನ್ಸಲಿಂಗ್ ಪದ್ಧತಿಯನ್ನು ಸಹ ಅಳವಡಿಸಬೇಕು.

**19.ಸಮಗ್ರ ಕಾರ್ಯಕ್ಷಮತೆ:–**

ಕೇಂದ್ರ ಸರ್ಕಾರವು ನಗರಾಡಳಿತದ ಸಿಬ್ಬಂದಿಗಳಲ್ಲಿ ಸಮಗ್ರ ಕಾರ್ಯಕ್ಷಮತೆ ಅಭಿವೃದ್ಧಿಗಾಗಿ (Comphrehensive Capacity Building Programme) ರೂ.65 ಕೋಟಿ ನೀಡಿರುತ್ತದೆ. ಅದಕ್ಕಾಗಿ 15 ಸ್ಥಳೀಯ ಸಂಸ್ಥೆಗಳನ್ನು ಆಯ್ಕೆ ಮಾಡಲಾಗಿದೆ. SIUD ಅನುಷ್ಠಾನ ಸಂಸ್ಥೆಯಾಗಿದ್ದು KUIDFC ಆಡಳಿತ ಬೆಂಬಲ ನೀಡುತ್ತಿದೆ. CCBP ಒಂದು ಕಾಯಂ ವ್ಯವಸ್ಥೆ ಆಗಬೇಕೆ ಹೊರತು ಕೇಂದ್ರ ಸರ್ಕಾರ ಧನ ಸಹಾಯ ನೀಡಿದಾಗ ಮಾತ್ರ ಕಾರ್ಯನಿರ್ವಹಿಸಿ ನಂತರ ನಿಂತು ಹೋಗುವ ವ್ಯವಸ್ಥೆ ಆಗಬಾರದು. ಪ್ರಸ್ತುತ, CCBP ಯೋಜನೆಯಲ್ಲಿ ನಿರಂತತೆ ಕಂಡು ಬರುವುದಿಲ್ಲ. ಅದಕ್ಕಾಗಿ 15 ಸ್ಥಳೀಯ ಸಂಸ್ಥೆಗಳನ್ನು ಆಯ್ಕೆ ಮಾಡುವ ಬದಲು ರಾಜ್ಯದ ನಾಲ್ಕು ವಿಭಾಗದಲ್ಲಿ ನಾಲ್ಕು ಮುನ್ಸಿಪಲ್ ಕಾಲೇಜುಗಳನ್ನು ಪ್ರಾರಂಭಿಸಬೇಕು. SIUD ಮತ್ತು AIILSG ಹಾಗೂ IIM, IISc,IIT ಅವರ ಸಂಯುಕ್ತ ಸಹಭಾಗಿತ್ವದಲ್ಲಿ ಇಲ್ಲಿ ಪಠ್ಯಕ್ರಮಗಳನ್ನು ಪ್ರತಿ 3 ವರ್ಷಕ್ಕೆ ಒಮ್ಮೆ ಪರಿಷ್ಕರಿಸಬೇಕು. ಯಾವುದೇ ಮುನ್ಸಿಪಲ್ ಸಿಬ್ಬಂದಿ ಬಡ್ತಿ ಹೊಂದಬೇಕಾದಲ್ಲಿ ನಿರ್ದಿಷ್ಟ ಪರೀಕ್ಷೆ ಪಾಸಾಗಿರಬೇಕು ಎಂದು ನಿರ್ಬಂಧಿಸಬೇಕು. ಪ್ರಥಮ ಸಲ ಪರೀಕ್ಷಾ ಸಿದ್ಧತೆ ಮಾಡಲು ಸೂಕ್ತ ಸಮಯಾವಕಾಶವನ್ನು ವೇತನ ಸಹಿತ ರಜೆಯನ್ನು ನೀಡಬೇಕು. ನಂತರ ವೇತನ ರಹಿತ ರಜೆ ನೀಡಬಹುದು ಕೇವಲ ಸೇವಾ ಹಿರಿತನದಲ್ಲಿ ಬಡ್ತಿ ನೀಡುವುದು ರಾಷ್ಟ್ರೀಯ ಹಿತಾಸಕ್ತಿಗೆ ವಿರೋಧವಾಗಿರುತ್ತದೆ. (ರಾಷ್ಟ್ರ ಮೊದಲು ನಂತರ ವ್ಯಕ್ತಿ) ಪ್ರಾರಂಭದಲ್ಲಿ ಸದ್ಯಕ್ಕೆ ಸೂಕ್ತ ಮೀಸಲಾತಿ ನೀಡಬಹುದು. SIUD ಯನ್ನು ಮುನ್ಸಿಪಲ್ ಯನಿವರ್ಸಿಟಿಯಾಗಿ ಅಭಿವೃದ್ಧಿ ಪಡಿಸಬೇಕು.

**20.ಸಿಬ್ಬಂದಿ ಕೊರತೆ:**

ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ಸಿಬ್ಬಂದಿ ಕೊರತೆ ನಿರಂತರವಾಗಿ ಕಂಡುಬರುತ್ತಿದೆ. ಆಡಳಿತದಲ್ಲಿ ದಕ್ಷತೆ ಸಾಧಿಸಬೇಕಾದಲ್ಲಿ, ಸಕಾಲ, ಆರ್‌ಟಿಐ, ನಿಯಮಗಳನ್ನು ಸರಿಯಾಗಿ ಅನುಷ್ಠಾನಗೊಳಿಸಬೇಕಾದಲ್ಲಿ ಸಿಬ್ಬಂದಿಗಳ ಕೊರತೆ ಉಂಟಾಗಬಾರದು. ಸಿಬ್ಬಂದಿ ಕೊರತೆ ಉಂಟಾದ ತರುವಾಯ ಅದರ ಭರ್ತಿಗಾಗಿ ಕ್ರಮ ಜರುಗಿಸುವ ಬದಲು, ಮುಂದಿನ ಮೂರು ವರ್ಷದಲ್ಲಿ ನಿವೃತ್ತಿಯಿಂದ ಉದ್ಭವಿಸುವ ಹುದ್ದೆಗಳು ಮತ್ತು ನಗರ ಪ್ರದೇಶದ ವ್ಯಾಪ್ತಿ ಹೆಚ್ಚಳದಿಂದ ಉಂಟಾಗುವ ಹುದ್ದೆಗಳನ್ನು ಲೆಕ್ಕಹಾಕಿ ಸೂಕ್ತ ಸಿಬ್ಬಂದಿಗಳನ್ನು ಆಯ್ಕೆ ಮಾಡಿ ತರಬೇತಿ ನೀಡಿ ನಿರೀಕ್ಷಣಾ ಯಾದಿಯಲ್ಲಿ (Waiting List) ಇಟ್ಟಿರಬೇಕು. ಹುದ್ದೆಗಳು ಖಾಲಿಯಾಗುವ ಒಂದು ತಿಂಗಳ ಮುಂಚಿತವಾಗಿ ನೇಮಕಾತಿ ಆದೇಶ ನೀಡಿ ಹುದ್ದೆಗಳು ಎಂದೂ ಖಾಲಿ ಬೀಳದಂತೆ ಜಾಗರೂಕತೆ ವಹಿಸಬೇಕು.

21. **ಪ್ರತಿ ನಿಯೋಜನ ಸಿಬ್ಬಂದಿ**

ಈ ಮೊದಲು ಮುನ್ಸಿಪಲ್ ಆಡಳಿತವು ಕಂದಾಯ ಇಲಾಖೆಯ ಭಾಗವಾಗಿತ್ತು. ಕಾಲಾಂತರದಲ್ಲಿ ಕಂದಾಯ ಇಲಾಖೆ ಸಿಬ್ಬಂದಿಗಳು ಮುನ್ಸಿಪಲ್ ಕಾರ್ಯನಿರ್ವಹಿಸಲು ಅಸಮರ್ಥರು ಎಂದು ಮನಗಂಡ ತರುವಾಯ ಅದಕ್ಕಾಗಿ ವಿಶೇಷ ಸಿಬ್ಬಂದಿಯನ್ನು ನೇಮಿಸುವುದು ಸೂಕ್ತ ಎಂದು ನಿರ್ಧರಿಸಿ ಮುನ್ಸಿಪಲ್ ಆಡಳಿತಕ್ಕೆ ಪ್ರತ್ಯೇಕ ಸಿಬ್ಬಂದಿ ನೇಮಿಸಲು ಕ್ರಮ ವಹಿಸಲಾಯಿತು. ಆದರೇ ಈ ತತ್ವ ಅನುಷ್ಠಾನವನ್ನು ಮಾತ್ರ ಬೇಕಾಬಿಟ್ಟಿಯಾಗಿ ಮಾಡಲಾಯಿತು. ಇಂದಿಗೂ ಮುನ್ಸಿಪಲ್ ಹುದ್ದೆಗಳನ್ನು ಖಾಲಿ ಇಡಲಾಗುತ್ತದೆ ಮತ್ತು ಪ್ರತಿ ನಿಯೋಜನೆ ಮೇಲೆ ಸಿಬ್ಬಂದಿ ನೀಡಲಾಗುತ್ತದೆ. ಪ್ರತಿ ಯೋಜನೆ ತುರ್ತು ವ್ಯವಸ್ಥೆಯಾಗಿರಬೇಕು. ಆದರೆ ಇಂದು ತುರ್ತು ವ್ಯವಸ್ಥೆಯೇ ಕ್ರಮ ಬದ್ಧವಾದ ವ್ಯವಸ್ಥೆಯಾಗಿ ರೂಪಗೊಂಡು, ಮುನ್ಸಿಪಲ್ ಆಡಳಿತ ವಿರೂಪಗೊಂಡಿದೆ. ಕಾರಣ ಇನ್ನು ಮುಂದೆ ಹೀಗೆ ಪ್ರತಿ ನಿಯೋಜನೆ ಮೇಲೆ ಬರುವ ಸಿಬ್ಬಂದಿಗಳು ಕನಿಷ್ಠವಾಗಿ / ಕಡ್ಡಾಯವಾಗಿ ಮುನ್ಸಿಪಲ್ ನಿಯಮಗಳ ಅಧ್ಯಯನವನ್ನಾದರೂ ಮಾಡಿರಬೇಕು. ಇಂದು ಮುನ್ಸಿಪಲ್ ನಿಯಮಗಳನ್ನು ಅಧ್ಯಯನ ಮಾಡದ ಸಿಬ್ಬಂದಿಗಳು ಪ್ರತಿ ನಿಯೊಜನೆ ಮೇಲೆ ಕಾರ್ಯ ನಿರ್ವಹಿಸುತ್ತಾ ಇರುವುದರಿಂದ ಮುನ್ಸಿಪಲ್ ಆಡಳಿತದಲ್ಲಿ ಭಾರಿ ಅಡಚಣೆ ಉಂಟಾಗಿರುತ್ತದೆ. ಕಾರಣ ಇನ್ನು ಮುಂದೆ ಯಾವುದೇ ಇಲಾಖೆಯಿಂದ ಮುನ್ಸಿಪಲ್ ಆಡಳಿತಕ್ಕೆ, ಸಿಬ್ಬಂದಿ ಪ್ರತಿ ನಿಯೋಜನೆಯಲ್ಲಿ ನೇಮಕ ಮಾಡುವುದಾದಲ್ಲಿ ಕನಿಷ್ಠ ಪಕ್ಷ ಅವರು ಕಡ್ಡಾಯವಾಗಿ ಮುನ್ಸಿಪಲ್ ಇಲಾಖೆಗೆ ನಿಗದಿ ಪಡಿಸಿದ ಇಲಾಖೆ ಪರೀಕ್ಷೆಗಳನ್ನು ಪಾಸು ಮಾಡಿರಬೇಕು ಎಂಬುದನ್ನು ಕಡ್ಡಾಯಗೊಳಿಸಲು ಸಂಘ ಒತ್ತಾಯಿಸುತ್ತದೆ.

ಈ ಹಿನ್ನಲೆಯಲ್ಲಿ ಪೌರಾಡಳಿತ ನಿರ್ದೇಶಕರಾಗುವ ಐಎಎಸ್ ಅಧಿಕಾರಿಯು ನಿರ್ದೇಶಕರಾಗುವ ಪೂರ್ವದಲ್ಲಿ ಕನಿಷ್ಠ ಎರಡು/ಮೂರು ವರ್ಷ ಸ್ಥಳೀಯ ಸರ್ಕಾರದಲ್ಲಿ ಕೆಲಸ ಮಾಡಿರುವ ಅನುಭವ ಹೊಂದಿರಬೇಕು.

ಅದೇ ಪ್ರಕಾರ ಪೌರಾಡಳಿತ ನಿರ್ದೇಶನಾಲಯದಲ್ಲಿ ಎಲ್ಲಾ ಜೆ.ಡಿಗಳು ಮುನ್ಸಿಪಲ್‌ದಲ್ಲಿ 2–3 ವರ್ಷ ಕಾರ್ಯನಿರ್ವಹಿಸಿದ ಅನುಭವ ಹೊಂದಿರಬೇಕು ಮತ್ತು ಪೌರಾಡಳಿತ ನಿರ್ದೇಶನಾಲಯದಲ್ಲಿನ ಎಲ್ಲಾ ಎಸ್‌ಡಿಸಿ/ಎಫ್‌ಡಿಸಿ ಸಿಬ್ಬಂದಿಗಳು ಇತರ ತಾಂತ್ರಿಕ ಸಿಬ್ಬಂದಿಗಳ ಸಹಿತ ಪ್ರತಿ 10 ವರ್ಷದಲ್ಲಿ ಕನಿಷ್ಠ 3 ವರ್ಷ ಸ್ಥಳೀಯ ಸರ್ಕಾರಗಳಲ್ಲಿ ಕಾರ್ಯನಿರ್ವಹಿಸಿದ ಅನುಭವ ಪಡೆದಿರಬೇಕು ಎಂಬ ನಿಯಮ ಕಡ್ಡಾಯಗೊಳಿಸಲು ಸಂಘ ಒತ್ತಾಯಿಸುತ್ತದೆ.

22. **ಸಿಂಗಲ್ ವಿಂಡೋ /ಏಕ ಗವಾಕ್ಷಿ ವ್ಯವಸ್ಥೆ**

ಎಲ್ಲರೂ ಸಿಂಗಲ್ ವಿಂಡೋ ವ್ಯವಸ್ಥೆ ಬೇಕು ಎಂದೇ ಹೇಳುತ್ತಾರೆ. ಸಿಂಗಲ್ ವಿಂಡೋ ವ್ಯವಸ್ಥೆ ಬೇಕಿದ್ದಲ್ಲಿ ಬಹುಪಾಲು ಎಲ್ಲಾ ಆಡಳಿತವು ಸ್ಥಳೀಯ ಸರ್ಕಾರದ ವ್ಯಾಪ್ತಿ ಇದ್ದಾಗ ಮಾತ್ರ ಸ್ಥಳೀಯ ಸರ್ಕಾರಗಳು ಸಿಂಗಲ್ ವಿಂಡೋಗಳಾಗಿ ಕಾರ್ಯ ನಿರ್ವಹಿಸಲು /ಸ್ಮಾರ್ಟ್ ಆಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತದೆ.

23. **ಸರ್ಕಾರ ಹಾಗೂ ಅಧಿಕಾರಿಗಳ ಹಿತಾಸಕ್ತಿಯ ರಕ್ಷಣೆ:**

ಸರ್ಕಾರವು ಸಾರ್ವಜನಿಕ ಸೇವೆಗಾಗಿ ಸಕಾಲ ಪದ್ಧತಿ ಪ್ರಾರಂಭಿಸಿರುತ್ತದೆ ಅದೇ ಮಾದರಿಯಲ್ಲಿ ಪೌರಾಡಳಿತ ನೌಕರರ ಎಲ್ಲಾ ಸೇವಾ ವಿಷಯಗಳು ನಿಗಧಿತ ಅವಧಿಯಲ್ಲಿ ಸಚಿವಾಲಯ ಮಟ್ಟದಲ್ಲಿ ನಡೆಯಬೇಕು ಎಂದು ಸಂಘ ಒತ್ತಾಯಿಸುತ್ತದೆ. ಸದ್ಯಕ್ಕೆ ಸರ್ಕಾರದ ಮಟ್ಟದಲ್ಲಿರುವ ಎಲ್ಲಾ ವಿಚಾರಣೆಗಳನ್ನು 6 ತಿಂಗಳ ಅವಧಿಯಲ್ಲಿ ಮುಕ್ತಾಯಗೊಳಿಸಲು ವಿಶೇಷ ಕ್ರಮ ಜರುಗಿಸಲು ಮತ್ತು ಮುಂಬರುವ ದಿನಗಳಲ್ಲಿ ಸಹ ಎಲ್ಲಾ ವಿಚಾರಣೆಗಳು 6 ತಿಂಗಳ ಒಳಗೆ ಪೂರ್ತಿಗೊಳಿಸಲು ಸಂಘ ಒತ್ತಾಯಿಸುತ್ತದೆ. ವಿಚಾರಣೆ ವಿಳಂಬವಾದಲ್ಲಿ ಸಾಕ್ಷಾಧಾರಗಳು ನಾಶವಾಗಿ ತಪ್ಪಿತಸ್ಥ ಸಿಬ್ಬಂದಿ ಖುಲಾಸೆ ಆಗುವ ಸಂಭವ ಇರುತ್ತದೆ. ಅದೇ ಸಮಯಕ್ಕೆ ನಿರಪರಾಧಿಗೆ ಬಿಡುಗಡೆ ಯಾದರೂ ಅನಾವಶ್ಯಕವಾಗಿ ಹಿಂಸೆ ಅನುಭವಿಸಿದಂತಾಗುತ್ತದೆ. ನ್ಯಾಯದ ದೃಷ್ಟಿಯಿಂದ ವಿಚಾರಣೆ ಸೇರಿದಂತೆ ಎಲ್ಲಾ ಸೇವಾ ವಿಷಯಗಳು ತೀವ್ರವಾಗಿ ಇತ್ಯಾರ್ಥಗೊಳಿಸಬೇಕು ಇದಕ್ಕಾಗಿ ಸಂಘವು ನಿವೃತ್ತ ನೌಕರರ ಸೇವೆಯನ್ನು ನೀಡಲು ಇಚ್ಛಿಸುತ್ತದೆ/ಮತ್ತು ಒತ್ತಾಯಿಸುತ್ತದೆ.

24. **ನಗರಾಡಳಿತ ಸ್ಫೋಟ ನಿಯಂತ್ರಣ:**

ಹಳ್ಳಿಗಳಿಂದ ನಗರಕ್ಕೆ ವಲಸೆ ಇತ್ತೀಚಿನ ದಿನಗಳಲ್ಲಿ ತೀವ್ರಗತಿ ಪಡೆದಿದ್ದು ನಗರಾಡಳಿತವು ಎಷ್ಟೇ ಪ್ರಯತ್ನ ಪಟ್ಟರು ಅದು ನಿಯಂತ್ರಣಕ್ಕೆ ಬರುತ್ತಿಲ್ಲ . ನಗರದ ಜೀವನ ನರಕ ಜೀವನವಾಗುತ್ತಿದೆ ಇತ್ಯಾದಿಯಾಗಿ ಅರೋಪಗಳು ಕೇಳಿಬರುತ್ತಿವೆ. ಆದರೂ ಸಹಿತ ನಗರಕ್ಕೆ ವಲಸೆ ಬರುವವರ ಸಂಖ್ಯೆ ಹೆಚ್ಚುತ್ತಿದ್ದು ಮುಂಬರುವ ದಿನಗಳಲ್ಲಿ ಈ ಸಮಸ್ಯೆ ಉಲ್ಬಣಗೊಳ್ಳುವುದು ಎಂದು ಹೇಳಲಾಗುತ್ತಿದೆ. ಆದರೆ ಇದರ ನಿಯಂತ್ರಣಕ್ಕೆ ಪರಿಹಾರವನ್ನು ನಿರ್ದಿಷ್ಠವಾಗಿ ವ್ಯಕ್ತಪಡಿಸದೇ ಇರುವದನ್ನು ಗಮನಿಸಿ ಈ ಸಲಹೆ ನೀಡಲಾಗಿದೆ ಮತ್ತು ಅನುಷ್ಠಾನಕ್ಕಾಗಿ ಒತ್ತಾಯಿಸಲಾಗುತ್ತಿದೆ.

ನಮಗೆ ಸ್ವಾತಂತ್ರ್ಯ ಬೇಕೆಂದರೆ ನಾವು ನಮ್ಮ ರಕ್ಷಣೆಗೆ ಸೈನ್ಯ ಕಟ್ಟಬೇಕು ಸೈನ್ಯ ಕಟ್ಟಿದ ಮೇಲೆ ಪ್ರಾಣದ ಹಂಗು ತೊರೆದು ಹೋರಾಡಬೇಕು. ಹಾಗೇ ಹೊರಾಡದಿದ್ದರೆ ಸೈನ್ಯ ಕಟ್ಟಿ ಪ್ರಯೋಜನವಿಲ್ಲ. ಹೊರಾಟದಲ್ಲಿ ಕೆಲವರು ಪ್ರಾಣತ್ಯಾಗ ಮಾಡಿದಾಗಲೇ ಇದ್ದವರಿಗೆ ಸ್ವಾತಂತ್ರ್ಯ ಅನುಭವಿಸಲು ಸಾದ್ಯವಾಗುವುದು. ಒಬ್ಬರ ಸ್ವಾತಂತ್ರಕ್ಕಾಗಿ ಇನ್ನೊಬ್ಬರು ಪ್ರಾಣನೀಡಬೇಕು. ಇದು ಕಠೋರ ಸತ್ಯ. ಈ ಹಿನ್ನಲೆಯಲ್ಲಿ ಇಂದು ನಗರಾಡಳಿತ ಸ್ಫೋಟವನ್ನು ನಿಯಂತ್ರಿಸಲು ತಿರ್ಮಾನ ಕೈಗೊಳ್ಳಬೇಕಾಗಿದೆ.

ಇಂದಿನ ನಗರ ದುಸ್ಥಿತಿಗೆ ನಗರ ಯೋಜನೆಯನ್ನು ನಿರ್ಲಕ್ಷ ಪಡಿಸಿರುವುದೆ ಮೂಲಕಾರಣವಾಗಿದೆ. ಕನಿಷ್ಠ ಪಕ್ಷ ಇನ್ನು ಮುಂದಾದರೂ ನಗರ ಯೋಜನೆಗೆ ಅತ್ಯಂತ ಪಾವಿತ್ರ್ಯಸ್ಥಾನ ನೀಡುವುದು ಅವಶ್ಯಕವಿದೆ. ನಗರಾಡಳಿತದಲ್ಲಿ ಕಂದಾಯ ಗ್ರಾಮ ಪ್ರದೇಶವನ್ನು ಆಡಳಿತದ ಮೂಲ ಘಟಕಗಳೆಂದು ಪರಿಗಣಿಸಬೇಕು. ನಗರ ಸರಹದ್ದಿಗೆ ಹೊಂದಿಕೊಂಡಿರುವ ಹಾಗೂ ಸಿಡಿಪಿ, ಒಡಿಪಿ ಗೆ ಹೊಂದಿಕೊಂಡಿರುವ ಕಂದಾಯ ಗ್ರಾಮಗಳನ್ನು ಗುರುತಿಸಿ ಅಲ್ಲಿಂದ 3–5 ಕೀ.ಮೀ ವ್ಯಾಪ್ತಿಯಲ್ಲಿ ಇರುವ ಕಂದಾಯ ಗ್ರಾಮಗಳಲ್ಲಿ 30% ಪ್ರದೇಶವನ್ನು ಇಂದೇ "ಹಸಿರು ವಲಯವೆಂದು" ಘೋಷಿಸಬೇಕು. ಒಮ್ಮೆ "ಹಸಿರು ವಲಯ" ವೆಂದು

ಘೋಶಿಸಿದ ತರುವಾಯ ಯಾವುದೇ ಕಾರಣಕ್ಕೂ ಅದನ್ನು ಬದಲಾಯಿಸಲು ಅವಕಾಶವಿರಬಾರದು. ನಗರಗಳು ಬೆಳೆದು ಅಕ್ಕ ಪಕ್ಕದ ಹಳ್ಳಿಗಳನ್ನು ಒಳಗೊಂಡಾಗ ಈ ಹಸಿರು ಪ್ರದೇಶಗಳನ್ನು "ನಗರ ಅರಣ್ಯಗಳೆಂದು" ಗುರುತಿಸಬೇಕು. ಈ ಪ್ರದೇಶದಲ್ಲಿ ಕೃಷಿ ಹೊರತಾಗಿ ಬೇರೆ ಚಟುವಟಿಗೆಗೆ ಅವಕಾಶ ನೀಡಬಾರದು ಸಾಮಾನ್ಯವಾಗಿ ಅವು ನಗರ ಪ್ರದೇಶಕ್ಕೆ ಸೇರುವ 15–20–30 ವರ್ಷ ಮೊದಲೇ ಸಿಡಿಪಿ, ಒಡಿಪಿ ಇಂದ 3–4 ಕೀಮೀ ದೂರ ಇರುವಾಗಲೇ "ಗ್ರಾಮೀಣ ಹಸಿರು ವಲಯ" ಎಂದು ಘೋಷಣೆ ಮಾಡುವುದರಿಂದ, ಮುಂಬರುವ ದಿನಗಳಲ್ಲಿ ಅವು ನಗರ ಪ್ರದೇಶಕ್ಕೆ ಸೇರಿದಾಗ, ನಗರಗಳಿಗೆ ಹಣ್ಣು, ತರಕಾರಿ, ಹಾಲು ಪೂರೈಕೆ ಕೇಂದ್ರಗಳಾಗುತ್ತವೆ. ನಗರದ ಕಲ್ಮಷವನ್ನು ಗೊಬ್ಬರವಾಗಿ ಮಾರ್ಪಡಿಸಿ ಉಪಯುಕ್ತ ವಸ್ತುಗಳಾಗಿ ಸಿದ್ದಪಡಿಸಲು ಸ್ಥಳಾವಕಾಶ ದೊರಕುತ್ತದೆ. ಮಳೆ ನೀರು ಕೊಯ್ಲು ಕೇಂದ್ರಗಳಾಗುತ್ತವೆ. ಹೆಚ್ಚುವರಿ ಲಂಗ್‌ಸ್ಪೇಸ್‌ಗಳಾಗುತ್ತವೆ. ನಗರಗಳಲ್ಲಿ 30% ಹಸಿರು ವಲಯವಿದ್ದರೇ ಆರೋಗ್ಯಪೂರ್ಣ ನಗರ ಜೀವನಕ್ಕೆ ಪರಿಪೂರ್ಣ ಪರಿಹಾರವಾಗುತ್ತದೆ.

ಅರಣ್ಯ ಇಲಾಖೆಯ **ಒನ್ಸ್ ಫಾರೆಸ್ಟ್ ಈಸ್ ಆಲ್ವೇಸ್ ಫಾರೆಸ್ಟ್ ಎಂಬ ನೀತಿಯಂತೆ ಒನ್ಸ್ ಗ್ರೀನ್ ಝೋನ್ ಆಲ್ವೇಸ್ ಗ್ರೀನ್ ಝೋನ್** ತತ್ವ ಅಳವಡಿಸಬೇಕು. ಈ ಹಸಿರು ವಲಯದಲ್ಲಿ ಮನೆ ಕಟ್ಟುವದಾದಲ್ಲಿ Floor -Area-Ration 0.01 ಮಾತ್ರವಿರಬೇಕು. ಆರ್.ಸಿ.ಸಿ ಹಾಗೂ ಟಾರ್ ರಸ್ತೆಗಳಿಗೆ ಅವಕಾಶ ನೀಡಬಾರದು ಬದಲಾಗಿ (ಮೆಟಲ್) ಕಚ್ಚಾ ರಸ್ತೆಗಳಿರಬೇಕು ಈ ಕಠೊರ ನಿಯಮಗಳು ಮುಂಬರುವ ದಿನಗಳಲ್ಲಿ ನಗರಗಳನ್ನು ರಕ್ಷಿಸಲು ಸಮರ್ಥವಾಗುತ್ತದೆ ಎಂದು ಸಂಘ ಅಭಿಪ್ರಾಯಪಡುತ್ತದೆ. ಇಲ್ಲಿ ಹಸಿರು ವಲಯ ಘೋಷಣೆ 15–20 ವರ್ಷ ಮುಂಚಿತವಾಗಿ ಮಾಡಿರುವುದರಿಂದ ಸದರಿ ಭೂಮಿಗೆ ಸಂಬಂಧಿಸಿದ ರೈತರು ಮಾನಸಿಕವಾಗಿ ಘಾಸಿ ಆಗಲಾರದು ಎಂದು ಭಾವಿಸಬೇಕಾಗಿರುತ್ತದೆ.

## 25. ಮುನ್ಸಿಪಾಲಿಟಿಗಳಿಗೆ ಮೊಜಣಿದಾರರು

ಕರ್ನಾಟಕ ರಾಜ್ಯದ ಬೆಳಗಾಂ ವಿಭಾಗ ಹೊರತುಪಡಿಸಿ ಇತರ ಪ್ರದೇಶಗಳಲ್ಲಿ ಸಿಟಿ ಸರ್ವೇ ಪದ್ಧತಿ ಜಾರಿಯಲ್ಲಿ ಇರುವುದಿಲ್ಲ. ಅದಕ್ಕೆ ಬದಲಾಗಿ ಯು.ಪಿ.ಒ.ಆರ್ ಯೋಜನೆಯನ್ನು ರಾಜ್ಯದ ಆಯ್ದಭಾಗಗಳಲ್ಲಿ ಅನುಷ್ಠಾನಗೊಳಸಲು ಪ್ರಯತ್ನಿಸಲಾಗುತ್ತದೆ. ನಗರ ಪ್ರದೇಶದಲ್ಲಿ ಸಿಟಿ ಸರ್ವೇಪದ್ದತಿ ಇಲ್ಲದೇ ಇರುವುದರಿಂದ ಭೂಮಿಗೆ ಸಂಭಂಧಿಸಿದಂತೆ ಬಹುಪಾಲು ವಿವಾದಗಳು ನ್ಯಾಯಾಲಯದಲ್ಲಿ ಉದ್ಭವವಾಗಿರುತ್ತದೆ. ಇದರಿಂದ ನಾಗರೀಕರು ಬಹಳ ತೊಂದರೆಗೆ ಒಳಗಾಗಿರುತ್ತಾರೆ. ಈ ಬಗ್ಗೆ ಬಸವಕಲ್ಯಾಣದ ಶಾಸಕರಾದ ಶ್ರೀ ಕೋಭಾ ಅವರು ಅನೇಕ ಬಾರಿ ಸರ್ಕಾರಕ್ಕೆ, ಪೌರಾಡಳಿತ ನಿರ್ದೇಶನಾಲಯಕ್ಕೆ ಮನವಿ ಸಲ್ಲಿಸಿರುತ್ತಾರೆ. ಆದರೂ ಸಮರ್ಪಕವಾಗಿ ಪರಿಹಾರವಾಗಿರುವುದಿಲ್ಲ. ಇಂದಿನ ನಿಯಮಗಳ ಪ್ರಕಾರ ನಗರ ಮೊಜಣಿ ಕಂದಾಯ ಇಲಾಖೆ ವ್ಯಾಪ್ತಿಯಲ್ಲಿ ಇರುತ್ತದೆ. ಲ್ಯಾಂಡ್ ರೆವೆನ್ಯೂ ಯ್ಯಾಕ್ಟ್ ಪ್ರಕಾರ ಕಂದಾಯ ಇಲಾಖೆ ನಗರ ಪ್ರದೇಶಗಳ ಮೊಜಣಿ ಮಾಡಬೇಕಾಗಿರುತ್ತದೆ. ಆದರೆ ವಾಸ್ತವಿಕವಾಗಿ ಕಂದಾಯ ಇಲಾಖೆ ಈ ಕಾರ್ಯಮಾಡಲು ಸಮರ್ಥವಾಗಿಲ್ಲ. ಈ ಸಮಸ್ಯೆ ನಿವಾರಣೆಗಾಗಿ ಪ್ರತಿ ಮೂರು ಲಕ್ಷ ನಗರ ಜನಸಂಖ್ಯೆಗೆ ಒಬ್ಬರಂತೆ ಅಧಿಕೃತ ಮೊಜಣಿದಾರರನ್ನು ನಗರಾಭಿವೃದ್ಧಿ ಇಲಾಖೆಯಲ್ಲಿ ನೇಮಕ ಮಾಡಿ ಅವರನ್ನು ಜಿಲ್ಲಾ ಕೇಂದ್ರದ ಡಿಯುಡಿಸಿ ಕೋಶದಲ್ಲಿ ಇಡಬೇಕಾಗಿರುತ್ತದೆ. ಜಿಲ್ಲೆಯ ಯಾವುದೇ ಸ್ಥಳೀಯ ನಗರಗಳಲ್ಲಿ ಅವಶ್ಯಕತೆ ಇದ್ದಲ್ಲಿ ಅಲ್ಲಿಗೆ ಪಿ.ಡಿ ಅವರು ತಾತ್ಕಾಲಿಕವಾಗಿ ಮೊಜಣಿದಾರರನ್ನು ನಿಯೋಜಿಸಬೇಕಾಗಿರುತ್ತದೆ. ಪ್ರತಿ ಕಾರ್ಪೋರೇಷನ್‌ದಲ್ಲಿ ಪ್ರತಿ ಮೂರು ಲಕ್ಷ ಜನಸಂಖ್ಯೆಗೆ ಒಬ್ಬ ನಗರ ಮೊಜಣಿದಾರರನ್ನು ಖಾಯಂ ಆಗಿ ನೇಮಕಾತಿ ಮಾಡುವುದು ಅವಶ್ಯಕವಿದೆ. ಇದೇ ಸಮಯಕ್ಕೆ ರಾಜ್ಯದ ಎಲ್ಲಾ ನಗರ ಪ್ರದೇಶಗಳಿಗೆ ಸಿಟಿ ಸರ್ವೇ /ಯುಪಿಒಆರ್ ಪದ್ಧತಿ ಅಳವಡಿಸಲು ಸಹ ಸರ್ಕಾರ ತುರ್ತಾಗಿ ಕ್ರಮ ಜರುಗಿಸಲು ಸಂಘ ಒತ್ತಾಯಿಸುತ್ತಾರೆ.

**26. ಆರ್‌ಟಿಐ ನಿರ್ವಹಣೆಗೆ (ಡಿ ಲಿಬ್) ಹುದ್ದೆ ಸೃಷ್ಠಿ ಮಾಡುವದು**

ಆರ್‌ಟಿಐ ಅನುಷ್ಠಾನಕ್ಕಾಗಿ ಉನ್ನತಮಟ್ಟದಲ್ಲಿ ಹುದ್ದೆಗಳನ್ನು ಸೃಷ್ಠಿ ಮಾಡಲಾಯಿತು. ಆದರೆ ಅದಕ್ಕೆ ಪೂರಕವಾಗಿ ತಳಮಟ್ಟರಲ್ಲಿ ಹುದ್ದೆಗಳ ಸೃಷ್ಠಿಯನ್ನು ಮಾಡಲೇ ಇಲ್ಲ. ಇದು ಆರ್‌ಟಿಐ ಧ್ಯೆಯೋದ್ದೇಶಗಳನ್ನು ಇಡೇರಿಸುವಲ್ಲಿ ತೊಡಕಾಗಿರುತ್ತದೆ. ಇದರ ನಿವಾರಣೆಗಾಗಿ ಪ್ರತಿ ಯುಎಲ್‌ಬಿಯಲ್ಲಿ ಡಿ.ಲಿಬ್ ಹಾಗೂ ಕಾರ್ಪೋರೇಷನ್‌ಗಳಲ್ಲಿ ಬಿ.ಲಿಬ್ ಅವರನ್ನು ರೆಕಾರ್ಡ್ ರೂಮ್ ಮುಖ್ಯಸ್ಥರನ್ನಾಗಿ ನೇಮಕ ಮಾಡಬೇಕಾಗುತ್ತದೆ.ಆರ್‌ಟಿಐ ನಿಯಮ (4) ಪ್ರಕಾರ ಪ್ರತಿ ಸಂಸ್ಥೆಯಲ್ಲಿ ಇರುವ ಧಾಖಲೆಗಳ ಯಾಧಿಯನ್ನು ಪ್ರಕಟಗೊಳಿಸಬೇಕಾಗುತ್ತದೆ. ಆದರೆ ಸರ್ಕಾರದ ಒತ್ತಡಕ್ಕೆ ಒಳಗಾಗಿ ನಿಯಮ (4) ರ ಅಡಿಯಲ್ಲಿ ನಿಯಮಾನುಸಾರ ಘೋಷಣೆ ಮಾಡಿರುತ್ತದೆ, ಹೊರತು ವಾಸ್ತವಿಕವಾಗಿ ಬಹುಪಾಲು ಸ್ಥಳಿಯ ಸರ್ಕಾರಗಳಲ್ಲಿ ನಿಯಮ (4)ರ ಪ್ರಕಾರ ಯಾದಿ ಇನ್ನು ಸಿದ್ಧವಾಗಿರುವದಿಲ್ಲ. ಈ ಸಮಸ್ಯೆ ನಿವಾರಣೆಗಾಗಿ ಕೂಡಲೇ ಡಿ.ಲಿಬ್, ಬಿ.ಲಿ.ಬ್, ಸಿಬ್ಬಂದಿಗಳ ಹುದ್ದೆಗಳನ್ನು ಸ್ಥಳೀಯ ಸರ್ಕಾರಗಳಲ್ಲಿ ಸೃಷ್ಠಿ ಮಾಡಿ ನೇಮಕಮಾಡಲು ಸರ್ಕಾರ ಕ್ರಮ ಜರುಗಿಸಲು ಸಂಘವು ಒತ್ತಾಯಿಸುತ್ತದೆ.

**27.ಇ.ಆಡಳಿತ/ಸ್ಮಾರ್ಟ್ ಸಿಟಿ/ಇತ್ಯಾದಿ**

ಸರ್ಕಾರವು ನಗರಾಡಳಿತಕ್ಕೆ ಇ.ಆಡಳಿತ ಸೌಲಭ್ಯ ಒದಗಿಸಲು ಬಹಳ ಶ್ರಮ ಪಟ್ಟಿರುವದನ್ನು ಸಂಘ ಗಮನಿಸಿರುತ್ತದೆ. ಈ ಗುರಿ ಸಾಧನೆಗಾಗಿ ಎಂಆರ್‌ಸಿ ಸ್ಥಾಪಿಸಿಲಾಯಿತು. ಬಹು ಕೋಟಿ ರೂಪಾಯಿ ವೆಚ್ಚ ಮಾಡಲಾಯಿತು. ಆದರೂ ಇಂದಿಗೂ ಅದು ಆನ್‌ಲೈನ್ ಆಗಿರುವುದಿಲ್ಲ. ಈ ಅನುಷ್ಠಾನ ಕಾರ್ಯ ವಿಧಾನದಲ್ಲಿ ಬದಲಾವಣೆಯ ಅವಶ್ಯಕತೆ ಇರುತ್ತದೆ. ಪ್ರಥಮ ಹಂತದಲ್ಲಿ ರಾಜ್ಯದ ನಾಲ್ಕು ವಿಭಾಗಗಳಲ್ಲಿ 4 ಟಿ.ಪಿಗಳನ್ನು ಆಯ್ಕೆ ಮಾಡಿ ಅವುಗಳನ್ನು ಪೇಪರ್‌ಲೆಸ್ ಕಛೇರಿಗಳನ್ನಾಗಿ ಮಾಡಬೇಕು. ನಂತರ ಎಲ್ಲಾ ಟಿಪಿಗಳು ಪೇಪರ್ ಲೆಸ್ ಆದಾಗ ಈ ಕಛೇರಿ ಅನುಭವಗಳನ್ನು ಹಂತಹಂತವಾಗಿ ಟಿ.ಎಂ.ಸಿ ,ಸಿ.ಎಂ.ಸಿಗೆ ಕಾರ್ಪೋರೇಶನ್‌ಗೆ ವಿಸ್ತರಿಸುತ್ತಾ ಹಿಗೆ ಪೇಪರ್ ಲೆಸ್ ಮಾಡುತ್ತಾ ಬರಬೇಕು ಎಂದು ಸಂಘವು ಒತ್ತಾಯಿಸುತ್ತದೆ. ಈ ಕಾರ್ಯಕ್ಕೆ ಮೈಕ್ರೊ ಸಾಫ್ಟ್‌ವೇರ್ ಬಳಸುವ ಬದಲು ಲುನೆಕ್ಸ್ ಸಾಫ್ಟ್ ವೇರ್ ಬಳಸಲು/ಅಭಿವೃದ್ಧಿ ಪಡಿಸಲು /ಹೊಂದಲು ಕ್ರಮ ಜರುಗಿಸಲು ಸಂಘ ಒತ್ತಾಯಿಸುತ್ತದೆ.

**28.ಮೆಟ್ರೊ: ರೈಲು ಪೂರ್ವ ಯೋಜನೆಗಳು**

ನಗರ ಸಾರಿಗೆಯಲ್ಲಿ ಮೆಟ್ರೊ ಒಂದು ಪ್ರಮುಖ ಅಂಗವಾಗಿದ್ದು ನಗರವು 10ಲಕ್ಷ ಜನ ಸಂಖ್ಯೆ ತಲುಪುತ್ತಿದ್ದಂತೆ ಮೆಟ್ರೊ ಅಳವಡಿಸಲು ಅಥವಾ ಸದ್ಯಕ್ಕೆ ಅಳವಡಿಸದೆ ಇದ್ದರೂ ಅದಕ್ಕಾಗಿ ಸ್ಥಳವನ್ನು ಈ ಕೂಡಲೇ (ಮೊದಲೇ) ಗುರುತಿಸಬೇಕು. ಕಂದಾಯ ಆರ್.ಟಿ.ಸಿ ಧಾಖಲೆಯಲ್ಲಿ ಪ್ರತಿ ಜಮೀನಿನ ಎಷ್ಟು ಭಾಗ ಮೆಟ್ರೊಗಾಗಿ ಕಾಯ್ದಿರಿಸಲಾಗಿದೆ ಎಂದು ನಮೂದಿಸಬೇಕು ಮತ್ತು ನೆಲದಲ್ಲಿಯೂ ಗುರುತು ಹಾಕಬೇಕು. ಆಗಲೇ ನಗರ ಸಾರಿಗೆ ಸಮಸ್ಯೆ ಪರಿಹರಿಸಲು ಸಾಧ್ಯವಾಗುವುದು.

29. **ನಗರದಲ್ಲಿ ಕನಿಷ್ಠ ಉದ್ಯೋಗ**

ಸರ್ಕಾರವು ಗ್ರಾಮೀಣ ಭಾಗದಲ್ಲಿ ವರ್ಷಕ್ಕೆ 90 ಕಡ್ಡಾಯ ದಿನ ಕೂಲಿ ನೀಡುತ್ತದೆ. (NEGRA) ಅದೇ ಮಾದರಿಯಲ್ಲಿ ನಗರ ಪ್ರದೇಶದಲ್ಲಿಯೂ ನೀಡುವದು ಅವಶ್ಯಕವಿರುತ್ತದೆ. ಇಲ್ಲಿ ವೇತನವಾಗಿ ಕನಿಷ್ಠ ಕೂಲಿ ನೀಡುವ ಬದಲು ಉಚಿತ ಊಟದ ವ್ಯವಸ್ಥೆ ಹಾಗೂ ಅಲ್ಪ ಹಣ ನೀಡಿ ಅವರ ಸೇವೆಯನ್ನು ನಗರದ ಮನೆಯಿಂದ ಮನೆಗೆ ಕಸ ಸಂಗ್ರಹಿಸಲು ಹಾಗೂ ಸ್ವಚ್ಛತೆಗೆ ಪಡೆಯಬಹುದು.

30. **ರಸ್ತೆ ಅಗಲೀಕರಣ ನೀತಿ:**

ಇಂದಿನ ದಿನಗಳಲ್ಲಿ ನಗರ ಪ್ರದೇಶದಲ್ಲಿ ವಾಹನಗಳ ಬಳಕೆ ಹೆಚ್ಚಾಗುತ್ತಿದ್ದು, ಸಂಚಾರದಟ್ಟಣೆ ಹೆಚ್ಚಿಗೆಯಾಗಿ ರಸ್ತೆ ಅಗಲೀಕರಣಕ್ಕಾಗಿ ನಾಗರೀಕರು ಸರ್ಕಾರಕ್ಕೆ ಬೇಡಿಕೆ ಸಲ್ಲಿಸುತ್ತಿದ್ದಾರೆ. ನಾಗರೀಕರ ಬೇಡಿಕೆ ಸೂಕ್ತವಾಗಿದೆ. ಅದೇ ಸಮಯಕ್ಕೆ ರಸ್ತೆ ಅಗಲೀಕರಣದಿಂದ ಸ್ಥಳ ಕಳೆದುಕೊಂಡವರಿಗೆ ಸರ್ಕಾರ ಸೂಕ್ತ ಪರಿಹಾರ ನೀಡಬೇಕು ಎಂದು ಬೇಡಿಕೆ ನೀಡಲಾಗುತ್ತಿದೆ. ಈ ಪರಿಹಾರ ಮೊತ್ತ ಸರ್ಕಾರ ನೀಡುವುದು ನಿಜವಾದರು ಪ್ರಜಾ ಸರ್ಕಾರದ ವ್ಯವಸ್ಥೆಯಲ್ಲಿ ಪ್ರಜೆಗಳೆ ಸರ್ಕಾರಕ್ಕೆ ಹಣ ನೀಡಬೇಕಾಗುತ್ತದೆ ಎಂಬುದು ಸಹ ವಾಸ್ತವಿಕವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಈ ಪ್ರಕಾರ ರಸ್ತೆ ಅಗಲೀಕರಣ ನೀತಿ ರೂಪಿಸಲಾಗಿದ್ದು, ಎಲ್ಲಾ ಸ್ಥಳೀಯ ಸಂಸ್ಥೆಗಳು ಇನ್ನುಮುಂದೆ ರಸ್ತೆ ಅಗಲೀಕರಣ ಪ್ರಸ್ತಾವನೆಗೆ ಸಂಬಂಧಿಸಿದಂತೆ ಈ ನೀತಿಯನ್ನು ಅಳವಡಿಸಿಕೊಳ್ಳಲು ಸರ್ಕಾರ ಆದೇಶಿಸಬೇಕಾಗುತ್ತದೆ.

1) ಯಾವ ರಸ್ತೆ ಅಗಲೀಕರಣ ಮಾಡಲು ಉದ್ದೇಶಿಸಲಾಗಿದೆ ಎಂಬುದನ್ನು ಪ್ರಥಮ ಹಂತದಲ್ಲಿ ಠರಾವ್ ಮೂಲಕ ನಿರ್ಧರಿಸಬೇಕು

2) ಠರಾವ್ ಆದ ತರುವಾಯ ಸದರಿ ರಸ್ತೆ ಮೇಲೆ ಸಧ್ಯಕ್ಕೆ ನಡೆಯುತ್ತಿರುವ ಸಂಚಾರ ದಟ್ಟಣೆಯ ಸಮೀಕ್ಷೆ ಮಾಡಿಸಬೇಕು ಮತ್ತು ಮುಂದಿನ 50 ವರುಷಗಳ ಅವಧಿಗೆ ಸುಗಮ ಸಂಚಾರಕ್ಕಾಗಿ ರಸ್ತೆ ಅಗಲ ಎಷ್ಟಿರಬೇಕು ಎಂಬುದನ್ನು ಸಮೀಕ್ಷೆ ಅಂಕಿಅಂಶಗಳ ಆಧಾರದಲ್ಲಿ ರಸ್ತೆಯ ಒಟ್ಟು ಅಗಲ, (ಚರಂಡಿ, ಕಾಲುದಾರಿ ಸೇರಿದಂತೆ) ಠರಾವ್ ಮೂಲಕ ನಿರ್ಧರಿಸಬೇಕು

3) ರಸ್ತೆ ಅಗಲ ತೀರ್ಮಾನವಾದ ನಂತರ ಯಾವ ನಾಗರೀಕರಿಂದ ಎಷ್ಟು ಎಷ್ಟು ಪ್ರದೇಶ ರಸ್ತೆ ಅಗಲೀಕರಣಕ್ಕಾಗಿ ಬೇಕಾಗುತ್ತದೆ ಎಂಬ ಬಗ್ಗೆ ವಿವರ ಸಿದ್ಧಪಡಿಸಬೇಕು ಮತ್ತು ಸದರಿ ಸ್ವತ್ತಿನ ಮಾಲೀಕರ ಯಾದಿ ಸಿದ್ಧಪಡಿಸಿ ಪ್ರಕಟಿಸಬೇಕು.

4) ನಂತರದಲ್ಲಿ ಉಪನೊಂದಾಣಿ ಕಛೇರಿಯಲ್ಲಿ 45ಬಿ ಪ್ರಕಾರ ಸದರಿ ನಿವೇಶನದ ಮಾರ್ಗಸೂಚಿ ದರವೇನು ಎಂಬುದನ್ನು ಪಡೆದು ಸ್ಥಳಕ್ಕಾಗಿ ಒಟ್ಟು ನೀಡಬೇಕಾದ ಪರಿಹಾರ ಮತ್ತು ಕಟ್ಟಡಗಳು ಇದ್ದಲ್ಲಿ ಎಸ್.ಆರ್. ದರದ ಪ್ರಕಾರ ನೀಡಬೇಕಾದ ಪರಿಹಾರ ಅಂತಿಮವಾಗಿ ಲೆಕ್ಕಹಾಕಿ ಪ್ರತಿ ನಾಗರೀಕರಿಗೆ ಸಂಬಂಧಿಸಿದಂತೆ ಠರಾವ್ ಪಾಸ್ ಮಾಡಬೇಕು.

5) ಎ) ಅದೇ ಸಮಯಕ್ಕೆ ರಸ್ತೆ ಅಗಲೀಕರಣದಿಂದ ಯಾವ ಯಾವ ಆಸ್ತಿಯ ಮಾಲಿಕರು ನೇರವಾಗಿ ಪ್ರಯೋಜನ ಪಡೆಯುತ್ತಾರೆ ಅವರ ನಿವೇಶನದ ವಿಸ್ತೀರ್ಣವನ್ನು ಮತ್ತು ಅವರ ಹೆಸರನ್ನು ಪಟ್ಟಿ ಮಾಡಬೇಕು.

   ಬಿ) ರಸ್ತೆ ಅಗಲೀಕರಣದಿಂದ ಅಪರೋಕ್ಷವಾಗಿ ಯಾವ ಯಾವ ಆಸ್ತಿಗಳ ಮಾಲೀಕರು ಪ್ರಯೋಜನ ಪಡೆಯುತ್ತಾರೆ. ಅವರ ನಿವೇಶನದ ವಿಸ್ತೀರ್ಣ, ಮಾಲೀಕರ ಯಾದಿ ಸಿದ್ದಪಡಿಸಬೇಕು.

6) ನಂತರ ನೀಡಬೇಕಾದ ಒಟ್ಟು ಪರಿಹಾರ ಮೊತ್ತಕ್ಕಾಗಿ ಠರಾವ್ ಮೂಲಕ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಬೇಕು, ಸರ್ಕಾರವು ಪರಿಹಾರ ಮೊತ್ತವನ್ನು ಅತೀ ಕಡಿಮೆ ಬಡ್ಡಿಯ ಸಾಲ ರೂಪದಲ್ಲಿ ನೀಡಬಹುದು ಅಥವಾ ಸಾಲ ಪಡೆಯಲು ಜಾಮೀನು ನೀಡಬಹುದು.

7) ಸದರಿ ನಿಧಿಯನ್ನು ಬಾಧಿತರಿಗೆ ಕೂಡಲೇ ನೀಡಿ ನಿವೇಶನ/ಸ್ಥಳಗಳನ್ನು ಸ್ಥಳೀಯ ಸರ್ಕಾರಗಳು ತಮ್ಮ ಸ್ವಾಧೀನಕ್ಕೆ ಪಡೆದುಕೊಂಡು 12 ತಿಂಗಳ ಒಳಗಾಗಿ ಅವುಗಳನ್ನು ಮುಂದಿನ 50 ವರುಷಗಳಿಗಾಗಿ ಅಭಿವೃದ್ಧಿ ಪಡಿಸಬೇಕು. ಪ್ರತಿ 100-150 ಮೀಟರ್‌ಗೆ ಅಡ್ಡಕೊಳವೆಗಳನ್ನು ಮತ್ತು ರಸ್ತೆಯ ಎರಡು ಬದಿ ಸಾಕಷ್ಟು ದೊಡ್ಡ ಕೊಳವೆಗಳನ್ನು ಹಾಕಿರಬೇಕು. ಮನ: ಮನ: ರಸ್ತೆ ಹಾಳಾಗಲು ಅವಕಾಶವಿರಬಾರದು.

8) ಅಭಿವೃದ್ಧಿಯ ನಂತರ 3–4 ವರುಷಗಳ ನಂತರ 5ಎ, 5ಬಿ ಮಾಲೀಕರ ಆಸ್ತಿಯ ಮಾರುಕಟ್ಟೆ ಬೆಲೆ ನೊಂದಣಿ ಕಾಯ್ದೆ ಪ್ರಕಾರ ಎಷ್ಟಾಗಿದೆ ಎಂಬುದನ್ನು ಸಮೀಕ್ಷೆ ಮಾಡಿಸಬೇಕು.

9) ರಸ್ತೆ ಅಭಿವೃದ್ಧಿಗಾಗಿ (ಪರಿಹಾರ+ಅಭಿವೃದ್ಧಿಗಾಗಿ) ಮಾಡಲಾದ ವೆಚ್ಚ ಮತ್ತು ಕಳೆದ 3–4 ವರುಷದಲ್ಲಿ ಆಸ್ತಿ ಬೆಲೆಯಲ್ಲಿ ಆದ ನಿವ್ವಳ ಏರಿಕೆ ಮೊತ್ತಕ್ಕೆ ಸಮನಾಗಿ ಪ್ರತಿ ನಿವೇಶನಕ್ಕೆ ಪ್ರತಿ ಮಾಲೀಕರಿಗೆ ಸಂಬಂಧಿಸಿದಂತೆ ಲೆಕ್ಕಹಾಕಿ ಆಯಾ ಮಾಲೀಕರು ತಮ್ಮ ಆಸ್ತಿಯ ನಿವ್ವಳ ಏರಿಕೆ ಮೊತ್ತಕ್ಕೆ ಗರಿಷ್ಠ 33% ಅಥವಾ ಒಟ್ಟು ಅಭಿವೃದ್ಧಿ ವೆಚ್ಚಕ್ಕೆ ಸರಿ ಹೊಂದುವಂತೆ ಬೆಟರ್‌ಮೆಂಟ್ ಶುಲ್ಕವನ್ನು ಠರಾವ್ ಮೂಲಕ ಸ್ಥಳೀಯ ಸರ್ಕಾರ/ಸಂಸ್ಥೆ ನಿಗದಿ ಮಾಡಬೇಕು.

10) ಸದರಿ ಶುಲ್ಕವನ್ನು ಮುಂದಿನ 5 ರಿಂದ 8 ವರುಷದ ಅವಧಿಯಲ್ಲಿ ಸಮಾನ ಕಂತುಗಳಲ್ಲಿ ಕಂದಾಯದ ರೂಪದಲ್ಲಿ ವಸೂಲಿ ಮಾಡಲು ಕಂದಾಯದ ದಸ್ತಾವೇಜಿಗೆ ಸೇರಿಸಬೇಕು. ಹೀಗೆ ಬೆಟರ್‌ಮೆಂಟ್ ಶುಲ್ಕ ವಸೂಲಿ ಮಾಡಿ ಕ್ರಮ ಸಂಖ್ಯೆ.6 ರಲ್ಲಿ ಪಡೆದ ಸಾಲವನ್ನು ಬಡ್ಡಿ ಸಮೇತ ಹಿಂದಿರುಗಿಸಬೇಕು.

11) ಒಂದು ಪಕ್ಷ ಬಡ್ಡಿ ಸಮೇತ ಶುಲ್ಕ ತೀರಿಸಲು ಸ್ಥಳೀಯ ಸರ್ಕಾರಗಳು ವಿಫಲವಾದಲ್ಲಿ ಆ ಸಂಸ್ಥೆಗಳಿಗೆ ಸರ್ಕಾರ ನೀಡುವ ಅನುದಾನದಲ್ಲಿ ಹಿಡಿದುಕೊಳ್ಳಲು ಸರ್ಕಾರಕ್ಕೆ ಸಾಲಕ್ಕಾಗಿ ಬೇಡಿಕೆ ಸಲ್ಲಿಸುವಾಗ ಮುಚ್ಚಳಿಕೆ ಬರೆದು ಕೊಡಬೇಕು.

**31. <u>ಮಾರುಕಟ್ಟೆ ನಿರ್ಮಾಣ ಅಥವಾ ವಾಣಿಜ್ಯ ಮಳಿಗೆ ನಿರ್ಮಾಣ ನೀತಿ:</u>**

ಯಾವುದೇ ಸ್ಥಳದಲ್ಲಿ ವಾಣಿಜ್ಯ ಮಳಿಗೆ ನಿರ್ಮಿಸಬೇಕೆಂದು ಸ್ಥಳೀಯ ಸಂಸ್ಥೆಗಳು ಇಚ್ಛಿಸಿದಲ್ಲಿ ಅವು ತಮ್ಮ ಸ್ವಂತ ಭೂಮಿಯನ್ನು ಅಥವಾ ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ಮಾರುಕಟ್ಟೆಗಳನ್ನು ಹೊಂದಿರಬೇಕು.

ಹೊಸ ಅಥವಾ ಪುನರ್ ನಿರ್ಮಾಣ ಮಾರುಕಟ್ಟೆ ಮಾಡುವುದಾದಲ್ಲಿ ಈ ಸ್ಥಳವನ್ನು ಶಾಸ್ತ್ರೀಯವಾಗಿ ಗರಿಷ್ಠ ಪ್ರಯೋಜನಕರವಾಗಿ ಹೇಗೆ ಉಪಯೋಗಿಸಬಹುದು ಎಂಬ ಬಗ್ಗೆ ತಜ್ಞರಿಂದ ಮುಂದಿನ 50 ವರುಷಕ್ಕೆ ವಿವರವಾದ ನಕ್ಷೆ ಸಿದ್ಧಪಡಿಸ(Model)ಬೇಕು.

ಹೀಗೆ ನಕ್ಷೆ ಸಿದ್ಧಪಡಿಸಿದ ತರುವಾಯ ಸದರಿ ಮಾರುಕಟ್ಟೆ ನಿರ್ಮಿಸಿದಲ್ಲಿ ಅಲ್ಲಿ ವ್ಯಾಪಾರ ಮಾಡಲು ಆಸಕ್ತಿ ಇರುವ ಗ್ರಾಹಕ ಬೇಡಿಕೆಯನ್ನು ಸಮೀಕ್ಷೆ ಮಾಡುವ ಸಲುವಾಗಿ ಠರಾವ್ ಪಾಸು ಮಾಡಿ ಜಾಹೀರಾತು ನೀಡಿ ಸ್ಥಳೀಯ ವ್ಯಾಪಾರಸ್ತರು ಎಷ್ಟು ಬಾಡಿಗೆ ನೀಡಲು ಮತ್ತು ಪ್ರಯೋಜನ ಪಡೆಯಲು ಇಚ್ಛಿಸುತ್ತಾರೆ ಎಂಬ ಮಾಹಿತಿಯನ್ನು (Provisional booking) ಮುಂಗಡ ಕಾಯ್ದಿರಿಸುವಿಕೆ ಮೇಲೆ ಅಂದಾಜು ಮಾಡಬೇಕು. Provisional booking ಮುಂಗಡ ಕಾಯ್ದಿರಿಸುವ ಮೊತ್ತ ಮಾಸಿಕ ಬಾಡಿಗೆ 1% ಅಥವಾ ವಾರ್ಷಿಕ ಬಾಡಿಗೆಯ 10% ಮೊತ್ತವಾಗಿದ್ದು ಸಮೀಕ್ಷೆಯಲ್ಲಿ ಯೋಜನೆ ಆರ್ಥಿಕವಾಗಿ ಲಾಭದಾಯಕವಲ್ಲವೆಂದು ಕಂಡುಬಂದರೆ ಸದರಿ ಮೊತ್ತವನ್ನು ಬಡ್ಡಿರಹಿತವಾಗಿ 6 ತಿಂಗಳ ಅವಧಿಯಲ್ಲಿ ಹಿಂದಿರುಗಿಸಲು ವ್ಯವಸ್ಥೆ ಮಾಡಿಕೊಂಡಿರಬೇಕು.

ಸಮೀಕ್ಷೆಯ ಪ್ರಕಾರ ಮತ್ತು ಉದ್ದೇಶಿತ ಮಾಡೆಲ್ ಪ್ರಕಾರ ಈ ಮಾರುಕಟ್ಟೆ ನಿರ್ಮಾಣಕ್ಕೆ ತೊಡಗಿಸುವ ಸಾಲದ ಮೊತ್ತ ಅಂದರೆ ಅಂದಾಜು ಮೊತ್ತದ 30% ಅಥವಾ 35% ಹಣವನ್ನು 8% ಬಡ್ಡಿಸಹಿತವಾಗಿ ನಿರ್ವಹಣೆ ವೆಚ್ಚ ಸಹಿತವಾಗಿ 6–7 ವರುಷಗಳ ಅವಧಿಯಲ್ಲಿ ಮರುಪಾವತಿ ಮಾಡಲು ಸಾಧ್ಯವಿದೆ ಎಂದಲ್ಲಿ ಈ ಯೋಜನೆ ಆರ್ಥಿಕವಾಗಿ ಬದುಕಬಲ್ಲ (sustainable scheme) ಯೋಜನೆ ಎಂದು ಪರಿಗಣಿಸಿ ಮುಂದಿನ ಕ್ರಮ ಜರುಗಿಸಬೇಕು.

ಮಾರುಕಟ್ಟೆಯ ಅಂದಿನ ಭೂಮಿಯ ಬೆಲೆಯನ್ನು ಸದರಿ ಯೋಜನೆಗೆ ಸ್ಥಳೀಯ ಸಂಸ್ಥೆಯ ಬಂಡವಾಳವೆಂದು ಪರಿಗಣಿಸಬೇಕು. ಅದೇ ಸಮಯಕ್ಕೆ ಒಟ್ಟು ಅಂದಾಜು ವೆಚ್ಚದ 50% ಮೊತ್ತವನ್ನು ಭೂಮಿ ಸೇರಿದಂತೆ ನಗರಸಭೆ ತನ್ನ ಬಂಡವಾಳವಾಗಿ ನೀಡಬೇಕು.

ವಿಶೇಷವಾಗಿ ಸ್ಥಳೀಯ ಸಾರ್ವಜನಿಕರು ಸದರಿ ಮಾರುಕಟ್ಟೆಯಲ್ಲಿ ವ್ಯಾಪಾರ ಮಾಡಲು ಇಚ್ಛಿಸುವ ವರ್ತಕರು 15% – 20% ಮೊತ್ತವನ್ನು ನಗದಾಗಿ ಬಂಡವಾಳವೆಂದು ನೀಡಬಹುದು. ಸದರಿ ಬಂಡವಾಳ ಮೊತ್ತವನ್ನು ಅವರು ವೈಯಕ್ತಿಕ ಸಾಲವಾಗಿಯೂ ವೈಯಕ್ತಿಕ ಜವಾಬ್ದಾರಿ ಮೇಲೆ ಪಡೆಯಬಹುದು. ಈ ಹಂತದಲ್ಲಿ ಮಾರುಕಟ್ಟೆ ಅಭಿವೃದ್ಧಿಗಾಗಿ ಪ್ರತ್ಯೇಕ ಸಂಘವನ್ನು ಸಹಕಾರ ಕಾನೂನು ಅಥವಾ ಕಂಪನಿ ಕಾನೂನಿನಡಿಯಲ್ಲಿ ನೊಂದಾಯಿಸಬೇಕು. ಅದಕ್ಕಾಗಿ ಸ್ಥಳೀಯ ಷೇರುದಾರರು ಹಾಗೂ ಸ್ಥಳೀಯ ಸರ್ಕಾರಗಳು ಪರಸ್ಪರ ಒಪ್ಪಂದ ಮಾಡಿಕೊಳ್ಳಬೇಕು. ಈ ಬಗ್ಗೆ ಠರಾವ್‌ಗಳನ್ನು ಮಾಡಿಕೊಳ್ಳಬೇಕು. ಈ ಹಂತದಲ್ಲಿ ಮಾರುಕಟ್ಟೆಯ ನಿರ್ಮಿಸಲು ಉದ್ದೇಶಿಸಲಾದ ಭೂಮಿ ಸಹಕಾರಿ ಸಂಘ ಅಥವಾ ಕಂಪನಿಯ ಆಸ್ತಿಯಾಗುತ್ತದೆ. ಈ ಕಂಪನಿಯಲ್ಲಿ 50% ಮುನಿಸಿಪಲ್ ಬಂಡವಾಳ 15–20% ಸ್ಥಳೀಯ ಜನರ ಬಂಡವಾಳವಿರುತ್ತದೆ. ಮುನಿಸಿಪಲ್ ಅಧ್ಯಕ್ಷರು/ಮಹಾಪೌರರು ಮಾರುಕಟ್ಟೆ ಕಂಪನಿಯ ಅಧ್ಯಕ್ಷರಾಗಿರುತ್ತಾರೆ.

ಈ ಕಂಪನಿಯಲ್ಲಿ ಮುನಿಸಿಪಲ್‌ನಿಂದ ಇಬ್ಬರು ನಿರ್ದೇಶಕರು ಮತ್ತು ಖಾಸಗಿ ಬಂಡವಾಳ ತೊಡಗಿಸಿದವರ ಪರವಾಗಿ ಇಬ್ಬರು ಚುನಾಯಿತ ನಿರ್ದೇಶಕರು ಆಯ್ಕೆ ಮಾಡಿಕೊಳ್ಳಬೇಕು. ಈ ನಾಲ್ಕು ಜನ ನಿರ್ದೇಶಕರು ಒಟ್ಟಿಗೆ ಸೇರಿ ತಮಗೆ ಒಪ್ಪಿಗೆ ಆಗುವ ಮಾರುಕಟ್ಟೆಯಲ್ಲಿ ಬಂಡವಾಳ ತೊಡಗಿಸದ ಸರ್ವಸಮ್ಮತ ವ್ಯಕ್ತಿಯನ್ನು ಹೆಚ್ಚುವರಿ ನಿರ್ದೇಶಕರು ಎಂದು ಆಯ್ಕೆ ಮಾಡಬೇಕು. ಈ ಐದು ಜನರು ಸೇರಿ ಮಾರುಕಟ್ಟೆ ಆಡಳಿತ ಮಂಡಳಿ ರಚನೆಯಾಗುತ್ತದೆ. ಮಾರುಕಟ್ಟೆಯ ಎಲ್ಲಾ ಆರ್ಥಿಕ ವ್ಯವಹಾರಗಳಿಗೆ ಈ ಮಂಡಳಿಯು ಜವಾಬ್ದಾರಿಯಾಗಿರುತ್ತದೆ. ಮಾರುಕಟ್ಟೆ ನಿರ್ಮಾಣಕ್ಕೆ ನಿರ್ವಹಣೆಗೆ ಬೇಕಾಗುವ ಎಲ್ಲಾ ಕಾರ್ಯಗಳನ್ನು ಈ ಮಂಡಳಿ ಸ್ವತಂತ್ರವಾಗಿ ನಿರ್ವಹಿಸುತ್ತದೆ. ಈ ಮಂಡಳಿಯು ತನ್ನ ಸಿಬ್ಬಂದಿಗಳನ್ನು ತಾನೆ ನೇಮಿಸಿಕೊಳ್ಳುತ್ತದೆ. ಇದು ಕಾನೂನಿನಲ್ಲಿ ಸ್ಥಳೀಯ ಸರ್ಕಾರದಿಂದ ಸ್ವತಂತ್ರವಾದ ಕಂಪನಿಯಾಗಿರುತ್ತದೆ.

ಬಾಕಿ ಉಳಿದ ಬಂಡವಾಳವನ್ನು ಸದರಿ ಕಂಪನಿಯ ಆಸ್ತಿ ಮತ್ತು ಸಾರ್ವಜನಿಕರ ಬಂಡವಾಳದ ಆಧಾರದಲ್ಲಿ ಅಂದರೆ ಮುನಿಸಿಪಲ್ 50% ಮತ್ತು ಸ್ಥಳೀಯ ಖಾಸಗಿ 20% ಒಟ್ಟು 70%. ಬಂಡವಾಳದ ಮೇಲೆ ಪುನ: 30% ರಿಂದ 35% ಸಾಲವನ್ನು ಬ್ಯಾಂಕುಗಳಿಂದ ಪಡೆಯಬೇಕು. ಈಗ 100% ಯೋಜನಾ ಬಂಡವಾಳ ಲಭ್ಯವಾಗಿದ್ದು ಮಾರುಕಟ್ಟೆ ಆದಾಯವು ನಿರ್ವಹಣಾ ವೆಚ್ಚವನ್ನು ಕಳೆದ ತರುವಾಯ 35% ಸಾಲವನ್ನು ಮುಂದಿನ 7–8 ವರುಷಗಳಲ್ಲಿ 8% ಬಡ್ಡಿ ಸಹಿತವಾಗಿ ಮರುಪಾವತಿ ಮಾಡಲು ಸಾಕಾಗುವಷ್ಟು ಮಾಸಿಕ/ವಾರ್ಷಿಕ ಬಾಡಿಗೆಯನ್ನು ಪಡೆಯಲು ಸಮರ್ಥರಾಗಿರಬೇಕು.

ಹೀಗೆ ಬಾಡಿಗೆ ಆದಾಯದಿಂದ 7–8 ವರುಷದಲ್ಲಿ ಸಾಲದ ಮೊತ್ತ ಪೂರ್ಣ ಪ್ರಮಾಣದಲ್ಲಿ ಪಾವತಿ ಆದ ತರುವಾಯ ಬರುವ ಬಾಡಿಗೆ ಆದಾಯದಲ್ಲಿ ಸ್ಥಳೀಯ ಸರ್ಕಾರ 50% ಮತ್ತು 15–20% ಬಂಡವಾಳ ತೊಡಗಿಸಿದ ವ್ಯಾಪಾರಿ ನಾಗರೀಕರು 50% ಲಾಭಾಂಶ ಅವರ ಅವರ ಬಂಡವಾಳಕ್ಕೆ ಅನುಗುಣವಾಗಿ ಪಡೆದುಕೊಳ್ಳಬಹುದು. ಹೀಗೆ ಸ್ಥಳೀಯ ವ್ಯಾಪಾರಸ್ತರು 20% ಬಂಡವಾಳ ತೊಡಗಿಸಿ 50% ಲಾಭಾಂಶ ಪಡೆದುಕೊಳ್ಳುವುದರಿಂದ ಇದು ಅತೀ ಆಕರ್ಷಕ ಯೋಜನೆಯಾಗಿರುತ್ತದೆ. ಈ ಮಾರುಕಟ್ಟೆ ಸ್ಥಳೀಯ ಖಾಸಗಿ ಸಹಭಾಗಿತ್ವದ ಮಾರುಕಟ್ಟೆಯಾಗಿದ್ದು, ಈ ಮಾರುಕಟ್ಟೆಯ ಎಲ್ಲಾ ಚಟುವಟಿಕೆಗಳು ರಾಜ್ಯ ಸರ್ಕಾರದ ಕಾನೂನಿನ ಅಡಿಯಲ್ಲಿ ನಡೆಯದೆ ಕಂಪನಿ ಕಾನೂನಿನಲ್ಲಿ ನಡೆಯುವ ನಿಜವಾಗಿಯೂ ಜನಪರ ಪಿ.ಪಿ.ಪಿ ಯೋಜನೆ ಆಗಿ ರೂಪಗೊಳ್ಳುತ್ತದೆ. ಸ್ಥಳೀಯ ಜನರು ಹೆಚ್ಚಿಗೆ ಬಾಡಿಗೆ ನೀಡಿದಲ್ಲಿ ಹೆಚ್ಚಿನ ಲಾಭ ಪಡೆಯುತ್ತಾರೆ. ಹೆಚ್ಚಿನ ಲಾಭ ಸ್ಥಳೀಯ ಸರ್ಕಾರಕ್ಕೂ ನೀಡುತ್ತಾರೆ.

ಇಲ್ಲಿ ಖಾಸಗಿ ಬಂಡವಾಳ ಹೂಡುವವರು ಹೆಚ್ಚಿನ ಬಂಡವಾಳ ಹೂಡಿದಲ್ಲಿ ಅಥವಾ ಬಾಡಿಗೆ ನೀಡಿದಲ್ಲಿ ಕೂಡಲೇ ಸಾಲ ತೀರಿಸಿ, ಸದರಿ ಸಾಲಕ್ಕೆ ಆದಾಯವನ್ನು ಪ್ರಾರಂಭದಲ್ಲಿಯೆ ತಮ್ಮ ಸ್ವಂತಕ್ಕೆ ಬಳಸಿಕೊಳ್ಳಲು ಸಹ ಸಾಧ್ಯವಿರುತ್ತದೆ. ಇದು ಸ್ವಯಂ ನಿಯಂತ್ರಿತ ವ್ಯವಸ್ಥೆಯಾಗಿರುತ್ತದೆ. ಈ ವ್ಯವಸ್ಥೆ 30 ವರುಷಗಳ ಅವಧಿಗೆ ಸಿಮಿತವಾಗಿದ್ದು ನಂತರ ಮುಂದುವರೆಸಬಹುದು. ಇಲ್ಲವೆ ರದ್ದು ಮಾಡಿ ಕಂಪನಿಯ ಎಲ್ಲಾ ಆಸ್ತಿಯನ್ನು ಸ್ಥಳೀಯ ಸರ್ಕಾರಗಳಿಗೆ ಬಿಟ್ಟುಕೊಡುವ ಬಗ್ಗೆಯೂ ನಿರ್ಧರಿಸಬಹುದೆ.

**32.ನಿರಂತರ ನೀರು ಸರಬರಾಜು ಬಂಡವಾಳ ಹೂಡಿಕೆ ನೀತಿ:–**

ನೀರು ಸರಬರಾಜು:

ಮಾರುಕಟ್ಟೆ ನಿರ್ಮಾಣ ಹೇಗೆ ರಾಜಕೀಯೇತರ ವ್ಯವಸ್ಥೆ ಮಾಡಲು ಸಾದ್ಯವೋ ಅದೇ ಮಾದರಿಯಲ್ಲಿ. ನಿರಂತರ ನೀರು ಸರಬರಾಜು ವ್ಯವಸ್ಥೆಯನ್ನು ವಿದೇಶಗಳಲ್ಲಿ ರಾಜಕೀಯೇತರ ವ್ಯವಸ್ಥೆಯಾಗಿ ರೂಪಿಸಲಾಗಿದೆ ಅದರ ಸಂಕ್ಷಿಪ್ತ ವಿವರ ಈ ಪ್ರಕಾರವಿದೆ.

ಒಟ್ಟು ಯೋಜನಾ ವೆಚ್ಚದ 50% ಸ್ಥಳೀಯ ಸರ್ಕಾರ ನೀಡುತ್ತದೆ . ಈ ಅಂಗವಾಗಿ ಸದ್ಯಕ್ಕೆ ಮುನ್ಸಿಪಲ್ ವಶದಲ್ಲಿ ಇರುವ ಆಸ್ಥಿಗಳಿಗೆ ಬೆಲೆ ನಿಗದಿ ಮಾಡಿ ಅದನ್ನು ಯೋಜನಾ ವೆಚ್ಚದ 50% ಅಥವಾ ಕಡಿಮೆ ಆದಲ್ಲಿ ಮುನ್ಸಿಪಲ್ ನಿಧಿಯನ್ನು ಹೆಚ್ಚುವರಿಯಾಗಿ ನೀಡಲಾಗುತ್ತದೆ.

ನೀರಿನ ಬಳಕೆದಾರರು ಬಳಕೆಗೆ ಅನುಗುಣವಾಗಿ ತಮ್ಮ ಪಾಲಿನ ಕನಿಷ್ಟ ಶೇರನ್ನು ಖರೀದಿ ಮಾಡುತ್ತಾರೆ. ಕೆಲವರು ಇಲ್ಲಿ ಹೆಚ್ಚುವರಿ ಶೇರನ್ನು ಖರೀದಿಸಲು ಅವಕಾಶವಿರುತ್ತದೆ. ಕಂಪನಿ ಕಾಯ್ದೆ ಪ್ರಕಾರ ನೀರು ಸರಬರಾಜು ಕಂಪನಿ ನೋಂದಣಿ ಮಾಡಲಾಗುತ್ತದೆ.

ಮುನ್ಸಿಪಾಲ್ಟಿಯಿಂದ ಇಬ್ಬರು ಪ್ರತಿನಿದಿಗಳನ್ನು, ಬಳಕೆದಾರರು ಹಾಗೂ ಬಂಡವಾಳದಾರರಿಂದ ಇಬ್ಬರು ಪ್ರತಿನಿಧಿಗಳನ್ನು ಆಯ್ಕೆ ಮಡಲಾಗುತ್ತದೆ. ಈ ನಾಲ್ಕು ಜನರು ಸೇರಿ ಎಲ್ಲರಿಗೂ ಒಪ್ಪಿಗೆ ಆಗುವ ಇನ್ನೊಬ್ಬ ವ್ಯಕ್ತಿಯನ್ನು ಆಯ್ಕೆ ಮಾಡುತ್ತಾರೆ. ಈ ಐದು ಜನರನ್ನು ಬೋರ್ಡ್ ಆಫ್ ಡೈರೆಕ್ಟರ್ಸ್ ಅಥವಾ "ಮಂಡಳಿ" ಎಂದು ಕರೆಯಲಾಗುತ್ತದೆ.ಮಂಡಳಿಯ ಮೇಲೆ ಆಯಾ ಊರಿನ ಚುನಾಯಿತ ಅದ್ಯಕ್ಷ/ಮೇಯರ್ ಚೇರ್ಮೆನ್ ಆಗಿರುತ್ತಾರೆ. ಆದರೆ ಕಂಪನಿಯ ಎಲ್ಲಾ ತೀರ್ಮಾನಗಳನ್ನು ಈ ಮಂಡಳಿಯೇ ಬಹುಮತದಿಂದ ನಿರ್ಧರಿಸುತ್ತದೆ.

ಈ ಮಂಡಳಿಯು ಒಬ್ಬ ಎಂ.ಡಿ / ಮ್ಯಾನೇಜರನ್ನು ನೇಮಿಸುತ್ತದೆ. ಅವರು ಕಂಪನಿಯ ಕಾರ್ಯದರ್ಶಿಯಾಗಿದ್ದು, ಕಂಪನಿಯ ನಿತ್ಯ ವ್ಯವಹಾರ ನೋಡಿಕೊಳ್ಳುತ್ತಾರೆ. ಅವರ ಆಧೀನದಲ್ಲಿ ನೀರು ಸರಬರಾಜು ಸಿಬ್ಬಂದಿ ಕೆಲಸ ಮಾಡುತ್ತಾರೆ.ಈ ಸಿಬ್ಬಂದಿ ಕಂಪನಿ ಸಿಬ್ಬಂದಿಯಾಗಿರುತ್ತಾರೆ ಹೊರತು ಸರ್ಕಾರದ/ ಸ್ಥಳೀಯ ಸರ್ಕಾರದ ಸಿಬ್ಬಂದಿಯಾಗಿರುವುದಿಲ್ಲ.ಈ ಕಂಪನಿಗೆ ಎಲ್ಲಾ ಬಗೆಯ ತೆರಿಗೆಗಳಿಂದ ವಿನಾಯಿತಿ ಇರುತ್ತದೆ. ಕಂಪನಿಯಲ್ಲಿ ಒಂದು ಸಂಶೋಧನಾ ವಿಭಾಗ, ಯೋಜನಾ ವಿಭಾಗ, ಹಾಗೂ ನಿತ್ಯ, ನಿರ್ವಾಹಣಾ ವಿಭಾಗ, ಇರುತ್ತದೆ.ಸಂಶೋಧನಾ ವಿಭಾಗ ನೀರಿನ ಗುಣ ಮಟ್ಟ, ನೀರು ಸೊರುವಿಕೆ ತಡೆಗಟ್ಟುವುದು, ವಿದ್ಯುತ್ ಉಳಿತಾಯ, ಯಂತ್ರಗಳು ದಕ್ಷತೆ ಬಗ್ಗೆ ಸ್ಥಳೀಯ ವಿಶ್ವವಿಧ್ಯಾಲಯಗಳ ಸಹಯೋಗದೊಂದಿಗೆ ನಿರಂತರ ಸಂಶೋಧನೆ ಮಾಡುತ್ತದೆ.ಯೋಜನಾ ವಿಭಾಗ ಮುಂದಿನ 10 ವರ್ಷಕ್ಕೆ ನೀರಿನ ಅವಶ್ಯಕತೆ ಲೇಕ್ಕ ಹಾಕಿ ನೀರು ಪೂರೈಕೆ ಯೋಜನೆ ಸಿದ್ದಪಡಿಸಿ ಅನುಷ್ಠಾವನ್ನು ಮುಂಗಡವಾಗಿಯೆ ಕೈಗೊಳ್ಳುತ್ತದೆ.

ಒಂದು ಮುನ್ಸಿಪಲ್ ನೀರಿನ ದರ ಇನ್ನೊಂದು ಮುನ್ಸಿಪಲ್ ನೀರಿನ ದರ ಅಲ್ಲಿಯ ಖರ್ಚು ವೆಚ್ಚಗಳಿಗೆ ಅನುಗುಣವಾಗಿ ಬೇರೆ ಬೇರೆ ಯಾಗಿರುತ್ತದೆ. ನೀರಿನ ದರಗಳನ್ನು ಒಂದು ವರ್ಷ ಮುಂಚಿತವಾಗಿ ಮಂಡಳಿ ನಿರ್ಧರಿಸಿ ಘೋಷಿಸುತ್ತಾರೆ.ಕಡಿಮೆ ನೀರು, ಕನಿಷ್ಠ ನೀರು ಬಳಸುವ ಬಡವರಿಗೆ ರಿಯಾಯ್ತಿದರದಲ್ಲಿ ನೀರು ಪೂರೈಸಲಾಗುತ್ತದೆ ನೀರಿನ ಬಳಕೆ ಹೆಚ್ಚಿದಂತೆ ದರವೂ ಹೆಚ್ಚು ಮಾಡಲಾಗುತ್ತದೆ.

ಸಾಮಾನ್ಯವಾಗಿ ಈ ಯೋಜನೆಯಲ್ಲಿ ತೊಡಗಿಸಿದ ಬಂಡವಾಳಕ್ಕೆ 8% ರಿಂದ 12% ರವರೆಗೆ ಡಿವಿಡೆಂಡ್ ನೀಡಲಾಗುತ್ತದೆ. ನೀರಿನ ಗ್ರಾಹಕರು ನೀರಿಗೆ ಹೆಚ್ಚಿಗೆ ದರ ನೀಡಿದರೆ ವೆಚ್ಚ ಕಳೆದ ನಂತರ ಉಳಿದ ಲಾಭ ಪುನಃ ನೀರಿನ ಗ್ರಾಹಕರಿಗೆ ದೊರಕುತ್ತದೆ. ಈ ಪಿಪಿಪಿ (Public Private Participation) ಮಾದರಿಯಲ್ಲಿ ನೀರು ಸರಬರಾಜು ಗ್ರಾಹಕರ ಸ್ವಯಂ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ. ನೀರು ಸರಬರಾಜು ಸ್ವಯಂ ನಿಯಂತ್ರಣ ವ್ಯವಸ್ಥೆಯಾಗಿದ್ದು, ಸರ್ಕಾರಕ್ಕೂ ನೀರಿನ ಸರಬರಾಜಿಗೂ ಯಾವುದೇ ಸಂಬಂಧ ಇರುವುದಿಲ್ಲ. ಬದಲಾಗಿ ಜನರೇ ತಮ್ಮ ನೀರಿನ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಸರ್ಕಾರ ಬೆಂಬಲ ನೀಡುತ್ತದೆ. ಇದು ಸ್ವತಂತ್ರ ದೇಶದ ಸ್ವತಂತ್ರ ಕಾರ್ಯವಾಗಿದೆ. ಎಲ್ಲಾ ಸ್ಥಳೀಯ ಸರ್ಕಾರಗಳು ಈ ವಿಚಾರವನ್ನು ಅನುಷ್ಠಾನಗೊಳಿಸಿ ಜವಾಬ್ದಾರಿಯುತ ನಾಗರೀಕರ ಸೃಷ್ಟಿ ಮಾಡಬೇಕು ಎಂದು ಸಂಘ ಆಗ್ರಹಿಸುತ್ತದೆ.

ಇದೇ ಮಾದರಿಯಲ್ಲಿ ವಿದ್ಯುತ್ ಸರಬರಾಜು, ಸ್ಥಳೀಯ ಸಾರಿಗೆ ವ್ಯವಸ್ಥೆಗಳನ್ನು ಸ್ಥಳೀಯ ಸರ್ಕಾರಗಳು ರೂಪಿಸಬೇಕಾಗಿದೆ. ವಿದೇಶದಲ್ಲಿ ವಿಮಾನ ನಿಲ್ದಾಣಗಳನ್ನು ಸಹ ಸ್ಥಳೀಯ ಸರ್ಕಾರಗಳೆ ನಿರ್ಮಿಸಿ ನಿರ್ವಹಿಸುತ್ತವೆ. ಹಿಗಾಗಿ ಸ್ಥಳೀಯ ಜನರು ಆಡಳಿತದ ವಿವಿಧ ಹಂತಗಳಲ್ಲಿ ಆರ್ಥಿಕವಾಗಿ ಭಾಗವಹಿಸಲು ಪೂರಕವಾದ ನೀತಿಯನ್ನು ಸರ್ಕಾರವು ಅಳವಡಿಸಿಕೊಳ್ಳಲು ಸಂಘ ಒತ್ತಾಯಿಸುತ್ತದೆ.

33. **<u>ಸಮಯಕ್ಕೆ ಸರಿಯಾಗಿ ಕಾಮಗಾರಿಗಳ ಅನುಷ್ಠಾನ:</u>**

ಪ್ರಶ್ನೆ: ಭಾರತ ದೇಶವನ್ನು ಹೊರತುಪಡಿಸಿ, ಯುರೋಪ್, ಅಮೇರಿಕ ಹಾಗೂ ಜಪಾನ್, ಚೈನಾಗಳಲ್ಲಿ ಯೋಜನೆಗಳು ಸಮಯಕ್ಕೆ ಸರಿಯಾಗಿ ಪೂರ್ಣಗೊಳ್ಳುತ್ತವೆ ಭಾರತದಲ್ಲಿ ಮಾತ್ರ ಯಾವುದೇ ಯೋಜನೆಗಳು ಸಮಯಕ್ಕೆ ಸರಿಯಗಿ ಪೂರ್ತಿಗೊಳ್ಳುವುದಿಲ್ಲ ಏಕೆ?

ಉತ್ತರ:– ಭಾರತವು ಅವಿಶ್ವಾಸಿಗಳ ದೇಶ, ಜನರಿಗೆ ಸರ್ಕಾರದಲ್ಲಿ ನಂಬಿಕೆ ಇರುವುದಿಲ್ಲ ಅಧಿಕಾರಿಗಳಿಗೆ ಜನರ ಬಗ್ಗೆ ಗೌರವ ಇರುವುದಿಲ್ಲ ಎಂಬುದೇ ಕಾರಣವಾಗಿದೆ. ವಿದೇಶಗಳಲ್ಲಿ ಯೋಜನೆಗಳ ನಿರ್ವಹಣೆ ವ್ಯವಸ್ಥೆ ಈ ಪ್ರಕಾರವಾಗಿದ್ದು, ಸರ್ಕಾರ ಇಚ್ಛಿಸಿದಲ್ಲಿ ಅದನ್ನು ಗಂಭೀರವಾಗಿ ಪರಿಗಣಿಸಿ, ಕರ್ನಾಟಕ ರಾಜ್ಯದಲ್ಲಿ ಅನುಷ್ಠನಗೊಳಿಸುವ ಐತಿಹಾಸಿಕ ಸಾಧನೆಯನ್ನುಮಾಡಲು ಸಾಧ್ಯವಿದೆ.

ಸಮಯಕ್ಕೆ ಸರಿಯಾಗಿ ಯೋಜನೆಗಳು ಮುಕ್ತಾಯಗೊಳ್ಳಬೇಕಾದರೇ 3 ಹಂತಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

**ಮೊದಲ ಹಂತ ಸಮಯಕ್ಕೆ ಸರಿಯಾದ ನಿರ್ಣಯಕ್ಕೆ "ರಾಜಿ ಸಂಧಾನ" ಸಮಿತಿ ರಚನೆ:**

1. ಯಾವುದೇ ಗುತ್ತಿಗೆ ಕಾಮಗಾರಿಯ ಒಪ್ಪಂದಕ್ಕೆ ಸಹಿ ಹಾಕುವ ಸಮಯದಲ್ಲಿ ಗುತ್ತಿಗೆದಾರನು ತನಗೆ ನೇರವಾಗಿ ಸಂಭಂದವಿಲ್ಲದ ಸ್ವತಂತ್ರ ವ್ಯಕ್ತಿಯನ್ನು ತನ್ನ ಸಂಧಾನಕಾರರು ಎಂದು ನಾಮ ನಿರ್ದೇಶನ ಮಾಡಬೇಕು.

2. ಅದೇ ಮಾದರಿಯಲ್ಲಿ ಸರ್ಕಾರವು ತನ್ನ ನಿಯಂತ್ರಣಕ್ಕೆ ಒಳಪಡದ ಒಬ್ಬ ಸಂಧಾನಕಾರನ ಹೆಸರು ಸೂಚಿಸಬೇಕು.

3. ಈ ಇಬ್ಬರು ಸೇರಿ ತಮಗೆ ಒಪ್ಪಿಗೆಯಾಗುವ ಸ್ವತಂತ್ರವಾದ ಮೂರನೆ ಸಂಧಾನಕಾರರನ್ನು ಆಯ್ಕೆ ಮಾಡಿಕೊಡಬೇಕು. ಈ ಮೂವರು ಸೇರಿದ ಸಮಿತಿಯನ್ನು ಆ ಗುತ್ತಿಗೆಗೆ ಸಂಬಂದಿಸಿದಂತೆ "ಸಂದಾನ ಸಮಿತಿ" ಎಂದು ಕರೆಯಬೇಕು. ಈ ಸಮಿತಿಯು ಗುತ್ತಿಗೆಗೆ ಸಂಭಂದಿಸಿದಂತೆ ತಾಂತ್ರಿಕ, ಆರ್ಥಿಕ, ಕಾನೂನು, ಸಮಾಜಿಕ, ಇತರೆ ಯಾವುದೇ ಸಮಸ್ಯೆಗೆ ಸಂಬಂದಿಸಿದಂತೆ ಕೈಗೊಳ್ಳುವ ತಿರ್ಮಾನವನ್ನು ಅಂತಿಮ ತೀರ್ಮಾನವಾಗಿದ್ದು ಸರ್ಕಾರ ಹಾಗೂ ಗುತ್ತಿಗೆದಾರನಿಗೆ ಬಂಧನಕಾರಿಯಾಗಿರಬೇಕು. ಸರ್ಕಾರ/ಗುತ್ತಿಗೆದಾರರು ಕೇಳುವ ಯಾವುದೇ ಪ್ರಶ್ನೆಗಳಿಗೆ 3 ದಿನದಲ್ಲಿ ಉತ್ತರ ನೀಡಲು ಈ ಸಮಿತಿ ಸಮರ್ಥವಾಗಿರಬೇಕು. ಪ್ರತಿ ಕಾಮಗಾರಿಗೆ ಸಂಬಂಧಿಸಿದಂತೆ ಒಂದು ಸಂದಾನ ಸಮಿತಿ ಇರಬೇಕು.

**ಎರಡನೆ ಹಂತ ಸಮಯಕ್ಕೆ ಸರಿಯಾಗಿ ಗುತ್ತಿಗೆದಾರನಿಗೆ ಹಣ ಪಾವತಿ:**

1. ಗುತ್ತಿಗೆದಾರನ ಬಿಲ್ಲು ತಯಾರಾದ ಮೇಲೆ ಸರ್ಕಾರದ ಇಂಜೀನೀಯರ್ ಅದನ್ನು ಒಪ್ಪಿ ಪಾವತಿಗೆ ಸಲ್ಲಿಸಿದಾಗ ಲೆಕ್ಕಪತ್ರ ಶಾಖೆ ಸದರಿ ಬಿಲ್ಲನ್ನು ಪರಿಶೀಲಿಸಿ/ಪರಿಶೀಲಿಸದೆ ಮೊದಲನೆ ಬಿಲ್ಲಿನ ಮೊತ್ತವನ್ನು 7 ದಿನಗಳ ಒಳಗಾಗಿ ಗುತ್ತಿಗೆದಾರನ ಖಾತೆಗೆ ಜಮಾ ಮಾಡಬೇಕು. ಕಾರಣಾಂತರದಿಂದ ನಿಗಧಿತ ಅವಧಿಯಲ್ಲಿ ಹಣ ಪಾವತಿಸಲು ಸಾಧ್ಯವಾಗದಿದ್ದಲ್ಲಿ ಸರ್ಕಾರ ಸದರಿ ಮೊತ್ತಕ್ಕೆ ಬ್ಯಾಂಕಿನ ಬಡ್ಡಿ ದರವನ್ನು ಅಂದಾಜು 18% ಹಣ ಹೆಚ್ಚುವರಿಯಾಗಿ ವಿಳಂಬದ ಅವಧಿಗೆ ನೀಡಬೇಕು.
2. ಹೀಗೆ ಮೊದಲನೆ ಬಿಲ್ಲಿನ ಹಣ ಪಾವತಿಸಿದ ತರುವಾಯ ಹಿಡಿದುಕೊಳ್ಳಬಹುದಾದ ಮೊತ್ತಗಳನ್ನು ಲೆಕ್ಕಹಾಕಿ ಇಟ್ಟುಕೊಳ್ಳಬೇಕು. ಎರಡನೆ ಬಿಲ್ಲು ಸ್ವೀಕರಿಸಿದಾಗ ಮೊದಲನೇ ಬಿಲ್ಲಿನ ಕಡಿತಗಳನ್ನು ಎರಡನೇ ಬಿಲ್ಲಿನಲ್ಲಿ ಕಡಿತ ಮಾಡಿ 7 ದಿನಗಳೊಳಗಾಗಿ ಗುತ್ತಿಗೆದಾರನ ಲೆಕ್ಕಕ್ಕೆ ಎರಡನೇ ಬಿಲ್ಲಿನ ಹಣ ಜಮಾ ಮಾಡಬೇಕು. ಇದೇ ಪ್ರಕಾರ ನಂತರದ ಬಿಲ್ಲುಗಳಿಗಾಗಿ ಶಿಸ್ತು ಪಾಲಿಸಬೇಕು. ಪ್ರತಿಭಾರಿ ಹಣ ಪಾವತಿ ವಿಳಂಬವಾದಲ್ಲಿ ವಿಳಂಬದ ಅವಧಿಗೆ ಹೆಚ್ಚುವರಿ ಬಡ್ಡಿ ಮೊತ್ತ ನೀಡಬೇಕು. ಅಂತಿಮ ಬಿಲ್ಲು ನೀಡುವಾಗ ಪೂರ್ಣ ಹೊಂದಾಣಿಕೆ ಮಾಡಿಕೊಳ್ಳಬೇಕು.

**ಮೂರನೆ ಹಂತ ಗುತ್ತಿಗೆದಾರನಿಗೆ ಆರ್ಥಿಕ ಜಾಮೀನು ಒದಗಿಸುವುದು:**

ಸಮಯಕ್ಕೆ ಸರಿಯಾಗಿ ತೀರ್ಮಾನಗಳನ್ನು ಕೈಗೊಂಡರೂ ಹಾಗೂ ಸಮಯಕ್ಕೆ ಸರಿಯಾಗಿ ಹಣ ಪಾವತಿಸಿದರೂ ಕೆಲವುಸಲ ನಿಯಂತ್ರಣಕ್ಕೆ ಮೀರಿದ ಕಾರಣಗಳಿಗಾಗಿ ಗುತ್ತಿಗೆದಾರನು ಆರ್ಥಿಕವಾಗಿ ತೊಂದರೆ/ದಿವಾಳಿಯಾಗುವ ಸಾಧ್ಯತೆ ಇರುತ್ತದೆ. ಈ ಹಂತದಲ್ಲಿ ಗುತ್ತಿಗೆದಾರನಿಂದ ಬ್ಯಾಂಕ್ ಗ್ಯಾರಂಟಿ ಪತ್ರ ಪಡೆದು ಸದರಿ ಯೋಜನೆ/ಗುತ್ತಿಗೆಗೆ ಸಂಬಂಧಿಸಿದಂತೆ ಸಾಮಗ್ರಿ ಪೂರೈಕೆದಾರರಿಗೆ ಮತ್ತು ಕಾರ್ಮಿಕರಿಗೆ ನೇರವಾಗಿ ಸರ್ಕಾರ ಹಣ ಪಾವತಿಸಿ ಯೊಜನೆ ಪೂರ್ಣಗೊಳಿಸಿಕೊಳ್ಳಬೇಕು, ಮತ್ತು ಮುಂಬರುವ ಬಿಲ್ಲಿನಲ್ಲಿ ಹಣ ಹೊಂದಾಣಿಕೆ ಮಾಡಿಕೊಳ್ಳಬೇಕು, ಹೊಂದಾಣಿಕೆ ಆಗದಿದ್ದಲ್ಲಿ ಬ್ಯಾಂಕ್ ಗ್ಯಾರಂಟಿ ಇಂದ ಹಣ ಪಡೆದುಕೊಳ್ಳಬೇಕು. ಹೀಗೆ ಮಾಡುವುದರಿಂದ ಯೋಜನೆಗಳು ಸಮಯಕ್ಕೆ ಸರಿಯಾಗಿ ಮುಕ್ತಾಯವಾಗುತ್ತವೆ ಎಂಬುದರಲ್ಲಿ ಸಂಶಯವೇ ಇಲ್ಲ.

(1) ಇಲ್ಲಿ ಸರ್ಕಾರ ಬಡ್ಡಿ ಇಲ್ಲದೇ ಹೆಚ್ಚುವರಿ ಹಣ ನೀಡುತ್ತದೆ.

(2) ಇಲ್ಲಿ ಗುತ್ತಿಗೆದಾರನ ಆರ್ಥಿಕ ಸಂಕಷ್ಟ ಪರಿಹಾರವಾಗುತ್ತದೆ.

(3) ಒಂದು ಪಕ್ಷ ಗುತ್ತಿಗೆ ರದ್ದಾದಲ್ಲಿ ಬೆಲೆ ಏರಿಕೆಯಿಂದ ಸರ್ಕಾರಕ್ಕೆ ಆಗಬಹುದಾದ ಹೆಚ್ಚುವರಿ ಆರ್ಥಿಕ ಭಾರವನ್ನು ಸಹ ತಪ್ಪಿಸಿದಂತಾಗುತ್ತದೆ.

34.**ಎಲ್ಲಾ ನೌಕರರಿಗೆ ಮನೆ:**

ಸರ್ಕಾರವು ಎಲ್ಲರಿಗೂ ಮನೆ ಎಂಬ ನೀತಿಯೊಂದಿಗೆ ಎಲ್ಲರಿಗೂ ಮನೆ ನೀಡುವ ಮೊದಲು ಎಲ್ಲರಿಗೂ ಸೇವೆ ಸಲ್ಲಿಸುವ ಮುನ್ಸಿಪಲ್ ಸಿಬ್ಬಂದಿಗಳಿಗೆ ಸೂಕ್ತ ಹಾಗೂ ಉಚಿತ ಮನೆ ನೀಡುವದು ಆಡಳಿತ ದಕ್ಷತೆ ದೃಷ್ಟಿಯಿಂದ ಅತೀ ಅವಶ್ಯಕವೆಂದು ಸಂಘ ಅಭಿಪ್ರಾಯಪಡುತ್ತದೆ. ಮುನ್ಸಿಪಲ್ ಸಿಬ್ಬಂದಿ ಸಾಧ್ಯವಾದಷ್ಟು ತಮ್ಮ ತಮ್ಮ ಕಾರ್ಯ ಕ್ಷೇತ್ರದ ಸಮೀಪದಲ್ಲಿ ಇದ್ದರೆ ವಾಹನ ವ್ಯವಸ್ಥೆ ಇಲ್ಲದಿದ್ದರೂ ಅವರು ಸಮಯಕ್ಕೆ ಸರಿಯಾಗಿ ಕೆಲಸಕ್ಕೆ ಹಾಜರಾಗಲು ಹಾಗೂ ಅವಧಿ ಮೀರಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಈ ಹಂತದಲ್ಲಿ ನಗರೋತ್ಥಾನ ಅಭಿವೃದ್ಧಿಗಾಗಿ ಕಾಯ್ದಿರಿಸಿದ ನಿಧಿಯಲ್ಲಿ ಕನಿಷ್ಠ 30% ನಿಧಿಯನ್ನು ಸಿಬ್ಬಂದಿ ವಸತಿ ಗೃಹ ನಿರ್ಮಿಸಲು ಸರ್ಕಾರ ಅನುಮೋದಿಸಬೇಕು ಎಂದು ಸಂಘ ಕೋರುತ್ತದೆ. ವಿಶೇಷವಾಗಿ ಕೆಳ ಹಂತದ ಸಿಬ್ಬಂದಿಗೆ ಸ್ಟಾಫ್ ಕ್ವಾಟರ್ಸ್ ಸೌಲಭ್ಯ ಅತ್ಯಾವಶ್ಯಕವಾಗಿರುತ್ತದೆ.

**35..ನಗರದ ಬಡವರಿಗೆ ಮನೆ:**

ನಗರದ ಬಡವರಿಗೆ ಆಶ್ರಯ ಇತ್ಯಾದಿ ಯೋಜನೆಗಳಲ್ಲಿ ಮನೆ ನೀಡಲಾಗಿದೆ ಹೀಗೆ ನೀಡಿದಾಗ

1)ಕೆಲವರು ಅನಧಿಕೃತವಾಗಿ ಪರಭಾರೆ ಮಾಡಿರುತ್ತಾರೆ.

2).ಕೆಲವರು ಹೆಚ್ಚುವರಿ ಮನೆಗಳನ್ನು ಕಟ್ಟಿ ಪುನಃ ಅದನ್ನು ಕೊಳಚೆ ಪ್ರದೇಶವಾಗಿ ಪರಿವರ್ತಿಸುತ್ತಾರೆ

3).ಇನ್ನು ಕೆಲವರು 2–3 ಪ್ಲಾಟ್‌ಗಳನ್ನು ಸೇರಿಸಿ ದೊಡ್ಡಮನೆ ಮಾಡಿಕೊಂಡಿರುತ್ತಾರೆ.

4).ಕೆಲವು ಸಲ ಬೇನಾಮಿ ವ್ಯಕ್ತಿ ಹೆಸರಿನಲ್ಲಿ ಮನೆ ಮಂಜೂರು ಮಾಡಿಕೊಂಡು ಬಾಡಿಗೆ ನೀಡಿ ಆದಾಯ ಪಡೆದುಕೊಳ್ಳುತ್ತಿದ್ದಾರೆ.

ಈ ಎಲ್ಲಾ ಕಾರಣಗಳಿಂದ ನಗರದಲ್ಲಿ ಮನೆಗಳಿಗಾಗಿ ಜನರು ಅರ್ಜಿ ಸಲ್ಲಿಸುತ್ತಲೇ ಇದ್ದಾರೆ. ಆದರೆ ಸರ್ಕಾರ ಜನರ ಬೇಡಿಕೆಗೆ ಸ್ಪಂದಿಸಲು ಅತೀಯಾದ ಕಷ್ಟ ಪಡಬೇಕಾಗಿರುತ್ತದೆ. ಈ ಸಮಸ್ಯೆ ನಿವಾರಣೆಗಾಗಿ ಇನ್ನು ಮುಂದೆ ಜನತಾ ಮನೆಗಳನ್ನು ಅಥವಾ ಎಲ್ಲರಿಗೂ ಮನೆ ಯೋಜನೆ ಅಡಿಯಲ್ಲಿ ಬಡಜನರಿಗೆ ಅಲ್ಲಿ ವಾಸವಾಗಿರಲು ಮಾತ್ರ ಅವಕಾಶ ನೀಡಬೇಕು ಹೊರತು ಯಾವುದೇ ಕಾರಣಕ್ಕೂ ಎಷ್ಟೇ ವರ್ಷಗಳ ತರುವಾಯವೂ ಮರುಮಾರಾಟ ಮಾಡಲು ಅಥವಾ ಮಾಲಿಕತ್ವ ನೀಡಲೇಬಾರದು. ಆದರೆ ಅಲ್ಲಿ ವಾಸವಾಗಿರಲಿಕ್ಕೆ ಮಾತ್ರ ಅನುಮತಿಯನ್ನು ಪ್ರತಿ ಹತ್ತು ವರ್ಷಕ್ಕೆ ಒಮ್ಮೆ ನೀಡಬೇಕು. ಪ್ರತಿ ಹತ್ತು ವರ್ಷದ ತರುವಾಯ ಬಾಡಿಗೆದಾರರ ಆರ್ಥಿಕ ಸ್ಥಿತಿಗತಿ ಸುಧಾರಿಸಿದರೆ ಅವರು ತಮಗಾಗಿ ಸ್ವಂತ ಮನೆಯನ್ನು ಖರೀದಿಸಿ ಕೊಳ್ಳಬಹುದು ಮತ್ತು ಸರ್ಕಾರದ ಮನೆ ತೆರೆವು ಮಾಡಬೇಕು. ಅಗ ಪುನಃ ಅದೇ ಮನೆಯನ್ನು ಇನ್ನೊಬ್ಬ ಬಡವನಿಗೆ ಮುನ್ಸಿಪಾಲಿಟಿ ನೀಡಲು ಸಾದ್ಯವಾಗುತ್ತದೆ. ಆಗ ನಿಜವಾಗಿಯೂ ಬಡವರ ಹಿತರಕ್ಷಣೆ ಆಗುತ್ತದೆ. ಒಂದು ಪಕ್ಷ ಬಾಡಿಗೆದಾರನು ತನ್ನ ಆರ್ಥಿಕ ಸ್ಥಿತಿಗತಿ ನಿಜವಾಗಿಯೂ ಸುಧಾರಿಸಿಲ್ಲವೆಂದು ಅವರು ಭಾವಿಸಿದರೆ ಅದೇ ಮನೆಯಲ್ಲಿ ಪುನಃ 10 ವರ್ಷ ಮುಂದುವರಿಯಬಹುದು. ಆದರೆ ಆ ಮನೆಗೆ ಹೆಚ್ಚುವರಿ ಕಟ್ಟಡ ಕಾಮಗಾರಿ ಮಾಡಿಕೊಳ್ಳಬಾರದು.

ಹೀಗೆ ವಾಸವಾಗಿರುವವರು/ ಮುಂದುವರೆಯುವವರು ಸದರಿ ಮನೆಯ ದುರಸ್ತಿ ವೆಚ್ಚವನ್ನು ಅವರೆ ಭರಿಸಬೇಕು. ಆ ಪ್ರದೇಶದಲ್ಲಿ ವಾಸವಾಗಿರುವ ಎಲ್ಲಾ ಬಾಡಿಗೆದಾರರು ಮುನ್ಸಿಪಲ್ ಅಧಿಕಾರಿಯ ಮೇಲ್ವಿಚಾರಣೆಯಲ್ಲಿ ಒಂದು ಸಮಿತಿಯನ್ನು ರಚಿಸಿಗೊಳ್ಳಬೇಕು. ಈ ಸಮಿತಿಯು ಸದರಿ ಪ್ರದೇಶದಲ್ಲಿ ನೀರು ಸರಬರಾಜು, ಬೀದಿ ದೀಪ, ಸ್ವಚ್ಚತೆ ಇತ್ಯಾದಿಗಳ ನಿರ್ವಹಣೆಗೆ ಎಷ್ಟು ವೆಚ್ಚ ತಗಲುವುದು ಎಂಬುದನ್ನು ಲೆಕ್ಕಹಾಕಿ. ಸದರಿ ವೆಚ್ಚವನ್ನು ಎಲ್ಲರೂ ಸಮನಾಗಿ ವಂತಿಕೆರೂಪದಲ್ಲಿ ನೀಡಬೇಕು. ಈ ಕಾಲೋನಿ ನಿತ್ಯ ನಿರ್ವಹಣೆಗಾಗಿ ನೇಮಕವಾಗುವ ಸಿಬ್ಬಂದಿಗಳು ಸದರಿ ಸಮಿತಿ ಸಿಬ್ಬಂದಿಗಳಾಗಿರುತ್ತಾರೆ. ಸ್ಥಳೀಯ ಸರ್ಕಾರದ ಸಿಬ್ಬಂದಿಗಳಲ್ಲ. ಆ ಸಿಬ್ಬಂದಿಗಳ ವೇತನ ಅವರೆ ನಿರ್ಧರಿಸಬೇಕು.ಅವರು ನಗರದ ಬಡವರಾದರೂ ತಮ್ಮ ಕಾಲೋನಿಯ ಮುನ್ಸಿಪಲ್ ಕಾರ್ಯ ಅವರೆ ನಿರ್ಧರಿಸಿ ನಿರ್ದೇಶಿಸಬೇಕು.ಇಲ್ಲಿ ಉಸ್ತುವಾರಿಗೆ ಎಷ್ಟು ವೆಚ್ಚ ತಗಲುವುದೊ ಅಷ್ಟೆ ಮೊತ್ತವನ್ನು ಮುನ್ಸಿಪಾಲ್ಟಿಗೆ/ ಗೌರವಧನವಾಗಿ ನೀಡಬೇಕು.

ಇಂತಃ ಮುನ್ಸಿಪಲ್ ಕಾಲೋನಿಯಲ್ಲಿ ವಾಸಿಸುವ ಬಡವರು/ ಬಾಡಿಗೆದಾರರು ಉಸ್ತುವಾರಿ ವೆಚ್ಚ ಇತ್ಯಾದಿಗಳನ್ನು ಪಾವತಿಸಲು ಆರ್ಥಿಕವಾಗಿ ಅಸಮರ್ಥರಾಗಿದ್ದಾರೆ. ಅಂದರೆ ಅವರು ಈ ಜನತಾ ಮನೆ/ಕಾಲೋನಿಯಲ್ಲಿ ವಾಸವಾಗಿರಲು ಅರ್ಹರಾಗಿಲ್ಲ ಅವರು ನೈಟ್ ಶೆಲ್ಟರ್‌ನಲ್ಲಿ (ಧರ್ಮ ಛತ್ರದಲ್ಲಿ) ದಿನ ನಿತ್ಯ ಅಲ್ಲಿ ಅಲ್ಪ ಪ್ರಮಾಣದಲ್ಲಿ ಶುಲ್ಕ ನೀಡಿ ವಾಸ ಮಾಡಲು ಅವಕಾಶ ನೀಡಬೇಕು. ನೈಟ್ ಶೆಲ್ಟರ್‌ದಲ್ಲಿಯು ಶುಲ್ಕ ನೀಡಲು ಅವರು ಅಶಕ್ತರಾಗಿದ್ದಲ್ಲಿ ಅವರನ್ನು ಭಿಕ್ಷುಕ ಪರಿಹಾರ ಕೇಂದ್ರ / ನಿರ್ಗತಿಕ ಪರಿಹಾರ ಕೇಂದ್ರ ಇತ್ಯಾದಿಗಳಲ್ಲಿ ಉಚಿತವಾಗಿ ನೆಲೆ ಊರಲು ಅವಕಾಶ ನೀಡಬೇಕು ಅವರನ್ನು ಮುನ್ಸಿಪಲ್ ಮಕ್ಕಳೆಂದು ಭಾವಿಸಿ ಅವರಿಗೆ ಸೂಕ್ತ ತರಬೇತಿ ನೀಡಿ ಸೂಕ್ತ ಉದ್ಯೋಗದಲ್ಲಿ ತೊಡಗಿಸಿ ಸ್ವಂತ ಆದಾಯ ಪಡೆಯಲು ಅವರನ್ನು ಅರ್ಹರನ್ನಾಗಿ ಮಾಡಲು ಮುನ್ಸಿಪಾಲಿಟಿ ಕ್ರಮ ವಹಿಸಬೇಕು. ಆಯಾ ವ್ಯಕ್ತಿಗಳ ಕ್ರಿಯಾ ಶಕ್ತಿಗೆ

ಅನುಗುಣವಾಗಿ ಬಡತನ ನಿವಾರಣಾ ಯೋಜನೆ ರೂಪಿಸಬೇಕು. ಹೊರತು ಸರ್ಕಾರ ನೀಡುವ ಮನೆಯನ್ನು ಮಾರಿಕೊಂಡು ಹೋಗುವವರು. ಇನ್ನೊಬ್ಬರಿಗೆ ಬಾಡಿಗೆಗೆ ನೀಡುವವರು. ಅಕ್ಕಪಕ್ಕದವರಿಗೆ ಕಣ್ಣು ಕುಕ್ಕುವಹಾಗೆ ಅಭಿವೃದ್ಧಿಪಡಿಸಿ ಸಾಮಾಜಿಕ ಕ್ಷೋಬೆ ಮಾಡುವರಿಗೆ, ಮುನ್ಸಿಪಲ್ ಮನೆಗಳನ್ನು /ಜನತಾ ಮನೆಗಳನ್ನು ನೀಡಬಾರದು. ಈ ನೀತಿಯನ್ನು ಸರ್ಕಾರ ಅಳವಡಿಸಿಕೊಳ್ಳಲು ವಿನಂತಿ.

ನಗರ ವಸತಿ ಅವಶ್ಯಕವಾಗಿ ಮುನ್ಸಿಪಲ್ ನಿಯಂತ್ರಣದಲ್ಲಿ ಇರಲೇಬೇಕು. ಸರ್ಕಾರದ ಮಟ್ಟದಲ್ಲಿ ವಸತಿಗಾಗಿ ಪ್ರತ್ಯೇಕ ಕಾರ್ಯದರ್ಶಿ ಮಟ್ಟದ ಇಲಾಖೆ ರಚಿಸುವ ಬದಲು ಒಬ್ಬ ಹೆಚ್ಚುವರಿ ಕಾರ್ಯದರ್ಶಿಯನ್ನು ನಗರಾಭಿವೃದ್ಧಿ ಇಲಾಖೆಯಲ್ಲಿ ನೇಮಿಸಿ ಅವರಿಗೆ ನಗರ ವಸತಿ ಕಾರ್ಯನಿರ್ವಹಣೆಯನ್ನು ನೀಡುವುದು ಸೂಕ್ತವೆಂದು ಅಭಿಪ್ರಾಯ ಪಡಲಾಗಿದೆ.

## 36. ವೈಜ್ಞಾನಿಕ ಕಛೇರಿ ಕಾರ್ಯದ ಅವಧಿ

ಎಲ್ಲಾ ಸರ್ಕಾರಿ ಕಛೇರಿಗಳು 10.00ಕ್ಕೆ ಪ್ರಾರಂಭಿಸಿ 5.30ಕ್ಕೆ ಮುಕ್ತಾಯಗೊಳಿಸುವುದು ಅವೈಜ್ಞಾನಿಕ ವಿಧಾನವಾಗಿದೆ. ಇದರಿಂದ ಬೃಹತ್ ನಗರಗಳಲ್ಲಿ ರಸ್ತೆ ದಟ್ಟಣೆ ಉಂಟಾಗಲು ಕಾರಣ ವಾಗಿರುತ್ತದೆ ಮತ್ತು ಸೇವಾ ದಕ್ಷತೆಗೆ ಭಂಗ ಉಂಟಾಗಿರುತ್ತದೆ. ಮುನ್ಸಿಪಲ್ ಸ್ವಚ್ಚತೆ ಕಾರ್ಯ ಬೆಳಿಗ್ಗೆ 5–00 ರಿಂದ 9–00 ಒಳಗೆ ಮುಕ್ತಾಯವಾಬೇಕು ಬೀದಿ ದೀಪದ ವ್ಯವಸ್ಥೆ ಸಾಯಂಕಾಲ 5.30ರಿಂದ 6.30 ರೊಳಗೆ ಕಾರ್ಯ ಪ್ರವೃತ್ತರಾಗಬೇಕು. ಈ ಸಮಯದಲ್ಲಿ ತೊಂದರೆ ಉಂಟಾದಾಗ ಅದನ್ನು ಸರಿಪಡಿಸಲು ಸಮರ್ಥ ಅಧಿಕಾರಿ ಲಭ್ಯವಿರಬೇಕು. ಆದರೆ ಇಂದು ಬೆಳಗಿನ ಜಾವ ಪೌರಕಾರ್ಮಿಕರು ಕಾರ್ಯ ಮುಗಿಸಿ ಮನೆಗೆ ತೆರಳಿದಾಗ ಅಧಿಕಾರಿ ಕಚೇರಿಗೆ ಆಗಮಿಸಿರುತ್ತಾರೆ. ಸಾಯಂಕಾಲ ಕಾರ್ಯ ಪ್ರಾರಂಭವಾಗುವಾಗ ಅಧಿಕಾರಿ ಕಚೇರಿ ಬಿಟ್ಟಿರುತ್ತಾರೆ ಹೀಗಾಗಿ ಕಾರ್ಯದಲ್ಲಿ ಸಮನ್ವಯವಾಗುತ್ತಿಲ್ಲ. ಕಾರಣ ಮುನ್ಸಿಪಲ್ ಕಚೇರಿಗಳು ಬೆಳಗ್ಗೆ 7.00 ರಿಂದ 12ರವರೆಗೆ ಸಾಯಂಕಾಲ 5.00ರಿಂದ 7ರವರೆಗೆ ಕಾರ್ಯ ನಿರ್ವಹಿಸಬೇಕು. ಅಧಿಕಾರಿಗಳು ಹಾಗೂ ಎಲ್ಲಾ ಸಿಬ್ಬಂದಿಗಳು ಅವರ ಅವರ ಕಾರ್ಯಕ್ಷೇತ್ರದಲ್ಲಿಯೇ ಇರಬೇಕು. ಅದಕ್ಕಾಗಿ ಮುನ್ಸಿಪಲ್ ಸಿಬ್ಬಂದಿಗೆ ಕಡ್ಡಾಯವಾಗಿ ವಸತಿ ಸೌಲಭ್ಯಗಳನ್ನು ಒದಗಿಸಬೇಕಾಗುತ್ತದೆ.

## 37.ಪರಂಪರೆ ಹಾಗೂ ಇತಿಹಾಸ ಕೋಶಗಳ ರಚನೆ:

ಸ್ಥಳೀಯ ಜಿಲ್ಲಾವಾರು/ ರಾಜ್ಯವಾರು/ ರಾಷ್ಟ್ರಮಟ್ಟದ/ ಐತಿಹಾಸಿಕ ಪ್ರಜ್ಞೆ ಪ್ರತಿ ಒಬ್ಬರು ಹೊಂದಿರಬೇಕು,

ಇಂದು ಭಾರತದ ಇತಿಹಾಸವನ್ನು ವಿದೇಶಿಯರೆ ಅಧಿಕವಾಗಿ ಪ್ರಕಟಿಸಿರುತ್ತಾರೆ ಹೊರತು ಸ್ಥಳೀಯವಾಗಿ ಅಧಿಕೃತ ಇತಿಹಾಸವನ್ನು ದಾಖಲಿಸಿರುವುದು ಅಪರೂಪ. ಐತಿಹಾಸಿಕ, ಹಾಗೂ ಪರಂಪರಿಕ ಅಂಶಗಳ ಪ್ರಜ್ಞೆ ಇಲ್ಲದ ವ್ಯಕ್ತಿಯಿಂದ ನಿಜವಾದ ರಾಷ್ಟ್ರೀಯತೆ ಬೆಳೆಯಲು ಸಾಧ್ಯವಾಗಲಾರದು. ಕಾರಣ ಪ್ರತಿ ಮುನ್ಸಿಪಾಲಿಟಿಗಳಲ್ಲಿ ಒಂದು ಇತಿಹಾಸ ಮತ್ತು ಪರಂಪರೆ ಕೋಶವು ಇರಬೇಕು ಅವುಗಳನ್ನು ಸ್ಥಳೀಯ ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥರು ನಿರ್ವಹಿಸಬೇಕು ಅದಕ್ಕೆ ಸೂಕ್ತ ಧನ ಸಹಾಯವನ್ನು ಸ್ಥಳೀಯ ಸರ್ಕಾರ ನೀಡಬೇಕು.

## 38.ಕೃಷಿ ಮತ್ತು ಶಿಕ್ಷಣ ವಲಯಗಳ ಸಮನ್ವಯ:–

ನಾಗರಿಕ ಸಮಾಜದಲ್ಲಿ ಶಿಕ್ಷಣ ಮತ್ತು ಕೃಷಿ ಅತೀ ಮುಖ್ಯ ಕಾರ್ಯಗಳಾಗಿರುತ್ತೇವೆ ಇಂದು ಜೂನ ತಿಂಗಳಲ್ಲಿ ಕೃಷಿ ಚಟುವಟಿಕೆ ಪ್ರಾರಂಭವಾಗುವಾಗ ಶಾಲೆಗಳು ಪ್ರಾರಂಭವಾಗುತ್ತವೆ. ಹೀಗಾಗಿ ಸಹಜವಾಗಿ ಶಿಕ್ಷಣಪಡೆಯುವುದು ಎಂದರೆ ಕೃಷಿ ಮಾಡದೇ ಇರುವದು ಎಂಬ ನಿರ್ಧಾರಕ್ಕೆ ಶ್ರೀಸಾಮಾನ್ಯರು ಬಂದಿರುತ್ತಾರೆ ಹೀಗೆ ಅವರು ತಪ್ಪು ವಿಚಾರ ಮಾಡಲು ಸರ್ಕಾರ ನೀತಿಯಲ್ಲಿ ತಪ್ಪಾಗಿರುವದರಿಂದಲೇ ಎಂದು ಸಂಘ ಭಾವಿಸುತ್ತದೆ.

ಇದನ್ನು ಸರಿ ಪಡಿಸಬೇಕೆಂದರೆ ಶಾಲೆಗಳುಬೇಸಿಗೆ ರಜೆ ನೀಡಿ, ಬೇಸಿಗೆ ಸಮಯದಲ್ಲಿ ಯೋಗ ಚಿತ್ರಕಲೆ, ಸಂಗೀತ ಇತ್ಯಾದಿಗಳಿಗಾಗಿ ಹೆಚ್ಚುವರಿ ತರಗತಿ ನಡೆಸುವ ಬದಲು ಶಾಲೆಗಳನ್ನು ಮೇ 15ರವರೆಗೆ ನಡೆಸಬೇಕು. ಮೇ15 ರಿಂದ ಜುಲೈ ಅಂತ್ಯದವರೆಗೆ ಶಾಲೆಗೆ ಮಳೆಗಾಲದ ರಜೆ ನೀಡಬೇಕು. ಆ ಸಮಯದಲ್ಲಿ ಕೃಷಿ ಕುಟುಂಬದ ಮಕ್ಕಳು ಕೃಷಿ ಚಟುವಟಿಕೆಯಲ್ಲಿ ಭಾಗವಹಿಬೇಕು. ಪುನಃ ದೀಪಾವಳಿ ಸಮಯಕ್ಕೆ ಧಾನ್ಯದ ವಕ್ಕಲು ಮಾಡುವಾಗ ಪುನಃ 15 ದಿನ ರಜೆ ನೀಡಬೇಕು. ಆಗ ಶಾಲೆಗೆ ರಜೆ ಅಂದರೆ ಹೊಲದಲ್ಲಿ ಕೆಲಸ ಎಂಬ ಮನೋಭಾವನೆ ಜನರಲ್ಲಿ ಬರಬೇಕು ಹೊರತು ಶಾಲೆಗೆ ರಜೆ ಅಂದರೆ ಸಂಗೀತ, ಯೋಗ, ಸಾಹಿತ್ಯ, ಕಲೆ, ವಿದ್ವತ್‌ಚರ್ಚೆ ಎಂಬ ಭಾವನೆ ಶ್ರೀಸಾಮಾನ್ಯರಲ್ಲಿ ಬರಬಾರದು.

ರಜೆ ಅಂದರೆ ಮಜಾ ಮಾಡುವದಲ್ಲ (ಖಾನಾ ಪಿನಾ ಮೊಜ ಉಡಾನಾ ಎಂದಾಗದೆ) ಬದಲಾಗಿ ರಜೆ ಎಂದರೆ ಜೀವನಕ್ಕೆ ಅವಶ್ಯಕ ವಿರುವ ಆಹಾರ ಸಾಮಗ್ರಿಗಳನ್ನು ಉತ್ಪಾದಿಸುವದು (ಖಾನಾ ಬನಾನೇಕೆಲಿಯೆ ಕಾಮ ಕರನಾ) ಎಂದಾಗಬೇಕು. ಆಗ ಕೃಷಿ ವಲಯದಲ್ಲಿ ಕಾರ್ಯ ನಿರ್ವಹಿಸಲು ಈಗಿನ ಯುವ ಜನರಲ್ಲಿ ಇರುವ ಅಹಸ್ಯಕರ ಭಾವನೆ ತೊಡೆದು ಹಾಕಲು ಸಾಧ್ಯವಾಗುವದು.

ಪ್ರಾರಂಭದಲ್ಲಿ ಗ್ರಾಮೀಣ ಪ್ರದೇಶ ಶಾಲೆಗಳು ಎಂಟನೇ ತರಗತಿಯಿಂದ ಪಿಯುಸಿ ವರೆಗಿನ ವಿದ್ಯಾರ್ಥಿಗಳನ್ನು ರಜೆ ಅವಧಿಯಲ್ಲಿ ಸಮೀಪದ ಕೃಷಿ ಚಟುವಟಿಕೆಯಲ್ಲಿ ಕಡ್ಡಾಯವಾಗಿ ಶಿಕ್ಷಣ ಭಾಗವಾಗಿ ಭಾಗವಹಿಸುವಂತೆ ಮಾಡಬೇಕು ಹೀಗೆ ಭಾಗವಹಿಸಿದಾಗ "ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ" ಅಡಿಯಲ್ಲಿ ವಿದ್ಯಾರ್ಥಿಗಳಿಗೆ ಹಣಪಾವತಿಸಬೇಕು. ಆಗ ಬಡ ಮಕ್ಕಳು ಆ ಹಣದಿಂದ ತಮ್ಮ ವಿಧ್ಯಾಭ್ಯಾಸಕ್ಕೆ ಬೇಕಾಗುವ ಸಾಮಗ್ರಿ ಖರೀದಿ ಮಾಡಬೇಕು. ಆಗ ಯುವಕರಲ್ಲಿ ಸೃಜನಾತ್ಮಕ ಬದಲಾವಣೆ ತರಬಹುದು ಕೃಷಿ ಸಮಸ್ಯೆ ಪರಿಹರಿಸಬಹುದು.

**39. ರೈತರ ಆತ್ಮಹತ್ಯೆ ಕುರಿತು**

ಇಂದು ರೈತನು ಬಿಸಿಲು ಕುದುರೆ ಎರಿರುತ್ತಾನೆ ಮತ್ತು ಅದರಿಂದ ಪ್ರತಿಸಲ ಘಾಸಿಗೊಳ್ಳುತ್ತಿದ್ದಾನೆ.

ಎಲ್ಲರೂ ಎಲ್ಲ ಕೆಲಸಗಳನ್ನು ಮಾಡಬಹುದು. ಆದರೆ ಕೆಲವರು ಕೆಲವು ಕೆಲಸಗಳನ್ನು ಮಾತ್ರ ಅಚ್ಚುಕಟ್ಟಾಗಿ ಮಾಡುತ್ತಾರೆ.

ಕಷ್ಟಪಟ್ಟರೆ ಎಲ್ಲಾ ಗಿಡಗಳನ್ನು ಎಲ್ಲಾ ಸ್ಥಳಗಳಲ್ಲಿ ಬೆಳಸ ಬಹುದು ಆದರೆ ಕೆಲವು ಗಿಡಗಳು ಕೆಲವು ಸ್ಥಳದಲ್ಲಿ, ಕೆಲವು ಸಮಯದಲ್ಲಿ ಯಾವದೇ ಶ್ರಮ ವಿಲ್ಲದೇ ಸಹಜವಾಗಿ ಬೆಳೆಯುತ್ತದೆ.

ಅಂತಹ ಬೆಳೆಗಳನ್ನು ,ಅಂತಹ ಪ್ರದೇಶಗಳನ್ನು ಮತ್ತು ಅಂತಹ ಸಮಯವನ್ನು ಗುರುತಿಸಿ, ಅಂತಹ ಬೆಳೆಗಳನ್ನು ಅಂತಹ ಪ್ರದೇಶ ಮತ್ತು ಅಂತಹ ಸಮಯದಲ್ಲಿ ಬೆಳೆದರೆ, ರೈತನ ಶ್ರಮವೂ ಅತೀ ಕಡಿಮೆ. ಮತ್ತು ಲಾಭವು ಸಾಮಾನ್ಯವಾಗಿ ಉತ್ತಮವಾಗಿರುತ್ತದೆ. ಆದರೇ ಬಿಸಿಲು ಕುದುರೆ ಎರಿದ ರೈತನು ಇಂದು ಒಬ್ಬನು ''ವೇನಿಲ್ಲಾ'' ಬೆಳೆದು ಹಣ ಮಾಡಿದರೆ ಎಲ್ಲರೂ ಅದನ್ನೇ ಬೆಳೆಯಲು, ಎಲ್ಲಾ ಸ್ಥಳದಲ್ಲಿ ಅದನ್ನು ಬೆಳೆಯಲು ಎಲ್ಲಾ ಸಮಯದಲ್ಲಿ, ಅದನ್ನು ಬೆಳೆಯಲು ಪ್ರಯತ್ನ ಪಡುತ್ತಾರೆ. ಉತ್ಪಾದನೆ ಹೆಚ್ಚಾಗಿ ಬೇಡಿಕೆ ಕುಸಿದಾಗ ರೈತ ಘಾಸಿಗೊಳ್ಳುತ್ತಾನೆ. ಇದೆ ಉದಾಹರಣೆ ಎಲ್ಲಾ ಬಗೆಯ ವಾಣಿಜ್ಯ ಬೆಳೆಗಳಿಗೆ ಆಲೂಗಡ್ಡೆ, ಉಳ್ಳಾಗಡ್ಡೆ, ಮೆಣಸಿನಕಾಯಿ, ಕಬ್ಬು ಇತ್ಯಾದಿಗಳಿಗೆ ಅನ್ವಯಿಸುತ್ತದೆ .ಈ ಪ್ರಮಾದ ತಪ್ಪಿಸಲು ಸರ್ಕಾರ ಸಹಜ ಕೃಷಿಗೆ ಸಂಬಂಧಿಸಿದಂತೆ ಯಾವ ಯಾವ ಸ್ಥಳದಲ್ಲಿ, ಸಮಯದಲ್ಲಿ, ಯಾವ ಯಾವ ಬೆಳೆ, ಬೆಳೆಯ ಬೇಕು ಮತ್ತು ಅದರ ಬಳಕೆ ಪ್ರಮಾಣ, ಬೆಳೆಯ ಪ್ರದೇಶ ನಿಗದಿ ಪಡಿಸಬೇಕು. ಸರ್ಕಾರದ ಈ ಸಲಹೆಯನ್ನು ರೈತನು ಪಾಲಿಸಬೇಕು. ಈ ಸಲಹೆ ಅನುಷ್ಠಾನ ವಾಗುವಾಗಲೂ ಕೆಲವು ಕಾರಣಗಳಿಗಾಗಿ ಬೆಳೆಹಾನಿಯಾದಲ್ಲಿ ಸರ್ಕಾರ ಬೆಳೆ ವಿಮೆ ಸೌಲಭ್ಯದ ಅಡಿಯಲ್ಲಿ ಪರಿಹಾರ ನೀಡಬೇಕು.

ಈಗಾಗಲೇ ತಿಳಿಸಿದಂತೆ ಸಹಜ ಕೃಷಿ ಮಾಡಿದಾಗ ಒಂದು ಕೇಜಿ ಬೆಳೆಗೆ ರೂ.10=00 ಉತ್ಪಾದನ ವೆಚ್ಚ ಇದ್ದಲ್ಲಿ ಸರ್ಕಾರ ಅದಕ್ಕೆ ರೂ.12=00 ಬೆಂಬಲ ದರ ನಿಗದಿ ಪಡಿಸಬೇಕು. ಮಾರುಕಟ್ಟೆಯಲ್ಲಿ ಆ ಪದಾರ್ಥವು ರೂ

12=00 ಕ್ಕಿಂತ ಹೆಚಿನ ದರದಲ್ಲಿ ಮಾರಾಟವಾಗುತ್ತಿದ್ದರೆ, ರೈತ ನೇರವಾಗಿ ಮಾರಾಟ ಮಾಡಿಕೊಳ್ಳಬೇಕು. ಉತ್ಪಾದನೆ ಕಡಿಮೆಯಾಗಿ ಅದರ ಮಾರಾಟದ ದರ ರೂ.20=00ಕ್ಕೆ ದಾಟಿದಾಗ ಗ್ರಾಹಕರು ಅದನ್ನು ಖರೀದಿ ಮಾಡುವುದನ್ನು ನಿಲ್ಲಿಸಬೇಕು. ಆ ಪದಾರ್ಥವಿಲ್ಲದೇ ಉದಾಹರಣೆ : ಬೇಳೆ ಅಥವಾ ಟೊಮ್ಯಾಟೊ ಇಲ್ಲದೆ ಅಡುಗೆ ಮಾಡಬೇಕು. ಹೊಟೇಲ್‌ಗಳು ಅದನ್ನು ಉಪಯೋಗಿಸದೇ ಆಹಾರ ಸಿದ್ಧಪಡಿಸಬೇಕು. ಒಂದು ವೇಳೆ ಉತ್ಪಾದನೆ ಹೆಚ್ಚಾಗಿ ಅದರ ಮಾರಾಟ ಬೆಲೆ 12=00 ಅಥವಾ ಅದಕ್ಕಿಂತ ಕಡಿಮೆಯಾದಗ ಗ್ರಾಹಕರು ಅದನ್ನು ಹೆಚ್ಚಾಗಿ ಖರೀದಿಸಿ ಬಳಸಬೇಕು ಉದಾಹರಣೆಗೆ ಟೊಮ್ಯಾಟೊ ಸಾರು, ಟೊಮ್ಯಾಟೊ ಅನ್ನ, ಟೊಮ್ಯಾಟೊ ಚಟ್ನಿ, ಟೊಮ್ಯಾಟೊ ರೊಟ್ಟಿ ಮುಂತಾದಾಗಿ.

ಗ್ರಾಹಕರು ಡಿಸೆಂಬರ್ ತಿಂಗಳಲ್ಲಿ ಮಾವಿನ ಹಣ್ಣನ್ನು ತಿನ್ನಲು ಬಯಸಬಾರದು, ಅದರ ಸಹಜ ಸಮಯದಲ್ಲಿ ಅದನ್ನು ಬಳಿಸಿ ಕೊಳ್ಳಬೇಕು. ಈ ಸಂಸ್ಕೃತಿ ಬೆಳೆಯಲು ಸಂಶೋಧನೆ ಮಾಡಲು ಸರ್ಕಾರ ಬೆಂಬಲ ನೀಡ ಬೇಕು.

ಇಲ್ಲಿ ಬಳಕೆಗೆ ತಕ್ಕಂತೆ ಉತ್ಪಾದನೆ ಯಾಗುತ್ತದೆ, ಉತ್ಪಾದನೆಗೆ ತಕ್ಕಂತೆ ಬಳಕೆ ಯಾಗುತ್ತದೆ. ಸಹಜ ಪ್ರದೇಶ, ಸಹಜ ಸಮಯದಲ್ಲಿ ಬೆಳೆಯುವದರಿಂದ ರೈತರಿಗೆ ಉತ್ಪಾದನೆಯಲ್ಲಿ ಅಧಿಕ ಲಾಭವಾಗಿರುವುದು.

ಕಾರಣ ರೈತ, ಸರ್ಕಾರ, ಮತ್ತು ಗ್ರಾಹಕರ ಪರಸ್ಪರ ಶಿಸ್ತಿನ ಸಂಯಮವನ್ನು ಬೆಳಸಿ ಕೊಂಡಲ್ಲಿ. ರೈತರ ಆತ್ಮಹತ್ಯೆ ಪ್ರಸಂಗಳು ಉದ್ಭವಿಸಲಾರವು.

**40. ಬರ ವರವೋ ಶಾಪವೋ**

ಇಂದಿನ ದಿನಗಳಲ್ಲಿ ಬರಗಳಿಂದ ರೈತ ಕಂಗಾಲಾಗಿದ್ದಾನೆ. ಸರ್ಕಾರವು ಚಿಂತಿತವಾಗಿದೆ. ಸಧ್ಯದ ಬರವನ್ನು ಹಿಂದಿನ ಐತಿಹಾಸಿಕ ಬರಕ್ಕೆ ಹೋಲಿಸಿದಲ್ಲಿ ಇಂದಿನ ಬರಗಾಲವನ್ನು ಗಂಭೀರ ಬರಗಾಲ ಎಂದು ಪರಿಗಣಿಸಲು ಬರುವುದಿಲ್ಲ. ಕಾರಣ ಸರ್ಕಾರದಲ್ಲಿ 2–3 ವರ್ಷಗಳಿಗೆ ಆಗುವಷ್ಟು ಧಾನ್ಯ ಸಂಗ್ರಹ ವಿದೆ, ಇಂದು ವಾಹನಗಳ ಮೂಲಕ ತುರ್ತಾಗಿ ನೀರು ಸರಬರಾಜು ಮಾಡಲು ಸಮರ್ಥವಾಗಿದ್ದೇವೆ. ಈ ಸನ್ನಿವೇಶದಲ್ಲಿ ಬರವನ್ನು ವರವನ್ನಾಗಿ ಪರಿವರ್ತಿಸಲು ಸಾಧ್ಯವಿದೆ. ಈ ಅವಧಿಯಲ್ಲಿ ಗ್ರಾಮೀಣ ಭಾಗದಲ್ಲಿ ಎಲ್ಲ ರೈತರು ವೇತನಕ್ಕಾಗಿ ಒತ್ತಾಯಿಸದೆ ಕನಿಷ್ಠ ಜೀವನ ಬೆಂಬಲದೊಂದಿಗೆ **"ಕೂಲಿಗಾಗಿ ಕಾಳು"** ಇತ್ಯಾದಿ ಯೋಜನೆ ಅಡಿಯಲ್ಲಿ ಕೆರೆ ಕಾಲುವೆ ನದಿಗಳಲ್ಲಿನ ಕಸ, ಹೂಳು ತೆಗೆಯಲು ಮುಂದಾಬೇಕು. ಕಾಲುವೆಗಳನ್ನು ದುರಸ್ತಿ ಮಾಡಲು ಸರ್ಕಾರ ಸಾಮಗ್ರಿ ಒದಗಿಸಬೇಕು. ಜನರು ಉಚಿತವಾಗಿ ಕಾಲುವೆ ದುರಸ್ತಿ ಕಾರ್ಯಕ್ಕೆ ಕೆಲಸಮಾಡಬೇಕು. ದೇವ ಮಂದಿರಗಳನ್ನು ಭಕ್ತಿಯಿಂದ ನಿರ್ಮಿಸುವಂತೆ ಕಾಲುವೆಗಳ ನಿರ್ಮಾಣ ಮತ್ತು ದುರಸ್ತಿ ಕಾರ್ಯದಲ್ಲಿ ತಲ್ಲಿನರಾಗಬೇಕು.

**41. ಸಾರ್ವಜನಿಕ ಉದ್ಯಾನವನ ನೀತಿ:**

ಭಾರತದಲ್ಲಿ ರಾಷ್ಟ್ರಪತಿ ಭವನದಲ್ಲಿರುವ ಮೊಘಲ್ ಗಾರ್ಡನ್ ಉದ್ಯಾನವನಗಳಲ್ಲಿ ಅತ್ಯುತಮ ಉದ್ಯಾನವನವಾಗಿರುತ್ತದೆ. ಅದೇ ಮಾದರಿಯಲ್ಲಿ ಎಲ್ಲಾ ಸ್ಥಳಗಳಲ್ಲಿ ಉದ್ಯಾನವನಗಳು ಇರಬೇಕೆಂದು ಇಚ್ಛಿಸುತ್ತೇವೆ ಮತ್ತು ಹಾಗೆ ಇಲ್ಲದಿದ್ದಲ್ಲಿ ಅದನ್ನು ಟೀಕಿಸುತ್ತೇವೆ.

ಒಂದು ಉದ್ಯಾನವನವಿದ್ದಂತೆ ಇನ್ನೊಂದು ಉದ್ಯಾನವನ ಇರಬೇಕು ಎಂಬ ವಿಚಾರಧಾರೆ ಹೊಂದಿರುವುದೇ ದೋಷಯುಕ್ತ ವಿಚಾರವಾಗಿದೆ. ಮರುಭೂಮಿಯಲ್ಲಿ ಖರ್ಜೂರ ಗಿಡಗಳು ಇರುವ ಪ್ರದೇಶವೇ ನಂದನವನವಾಗಿರುತ್ತದೆ. ಬಹುಪಾಲು ಮುನ್ಸಿಪಾಲಿಟಿಗಳು ಸಾರ್ವಜನಿಕ ಉದ್ಯಾನ ಮಾಡಲು ಪ್ರಯತ್ನಿಸಿ ವಿಫಲವಾಗಿರುತ್ತದೆ. ಈ ವಿಫಲತೆ ಉಂಟಾಗಬಾರದು ಎಂದರೆ ಆಯಾ ಪ್ರದೇಶಗಳಲ್ಲಿ ಸ್ಥಳೀಯವಾಗಿ ಲಭ್ಯವಿರುವ ಮತ್ತು ಅಲ್ಲಿನ ವಾತಾವರಣದಲ್ಲಿ ಸಹಜವಾಗಿ ಬೆಳೆಯುವ ಗಿಡ, ಮರ,ಸಸ್ಯಗಳನ್ನೇ ಬಳಸಿ ಉದ್ಯಾನವನ ನಿರ್ಮಿಸಿವುದು ಸೂಕ್ತವಾಗಿರುತ್ತದೆ. ಯಾವ ಯಾವ ಪ್ರದೇಶದಲ್ಲಿ ಯಾವ ಯಾವ ಗಿಡ ಮರಗಳನ್ನು ಸಾರ್ವಜಿನಿಕ ಉದ್ಯಾನದಲ್ಲಿ ಸಹಜವಾಗಿ ಬೆಳೆಯುತ್ತವೆ ಎಂಬ ವಿವರವನ್ನು ಸರ್ಕಾರ ಸಿದ್ಧಪಡಿಸಿ ಪ್ರಕಟಿಸಲಿ ಎಂದು ಸಂಘ ಕೋರುತ್ತದೆ.

## ಅನುಭಂದ–1

### ಹೆಚ್ಚಿನ ವಿದ್ಯಾರ್ಹತೆ ಹೊಂದಿದ ಸಿಬ್ಬಂದಿಗಳಿಂದ ಆಡಳಿತದಲ್ಲಿ ಆಗುವ ಅಡಚಣೆಗಳು

ಗ್ರೂಪ್ "ಡಿ" ಹುದ್ದೆಯ ನೇಮಕಾತಿಯ ಸಮಯದಲ್ಲಿ ಹೆಚ್ಚು ಕಲಿತವರಿಗೆ ಅಧ್ಯತೆ ನೀಡಬೇಕೆ ಅಥಾವ ಹೆಚ್ಚು ಕಲಿಯದವರಿಗ ಆಧ್ಯತೆ ನೀಡಬೇಕೆ? ಎಂಬ ಪ್ರಶ್ನೆಗೆ ಸಂಬಂಧಿಸಿದಂತೆ ಹೆಚ್ಚು ಕಲಿತವರನ್ನು ಆಯ್ಕೆಮಾಡಿದಲ್ಲಿ ಸಾಮಾನ್ಯವಾಗಿ ದಕ್ಷತೆ ಹೆಚ್ಚಿಸುವ ಬದಲು ಸರಿಪಡಿಸಲಾಗದ ಅದಕ್ಷತೆ ಮನೋವ್ಯಥೆ ಉಂಟಾಗಲು ಕಾರಣವಾಗುತ್ತದೆ.

ಉದಾಹರಣೆಗಾಗಿ ಒಬ್ಬ ಪದವಿದರನ್ನು ಸಿಪಾಯಿಯಾಗಿ ನೇಮಕಮಾಡಿ ಕೊಂಡಲ್ಲಿ ಅವನ ಸಾಮಾನ್ಯವಾಗಿ ಯಾವಾಗಲು ಹತಾಶೆ ಭಾವನೆ ಹೊಂದಿರುತ್ತಾನೆ. ಸೇವೆಗೆ ಸೆರುವಾಗ ಕೆಲವು ದಿನಗಳ ಮಟ್ಟಿಗೆ ಮಾನಸಿಕ ಕಷ್ಟ ಸಹಿಸಲು ಮನಸ್ಸು ಮಾಡಿದರೂ ನಂತರದ ದಿನಗಳಲ್ಲಿ ನನ್ನ ಸಹಪಾಠಿಗಳು ಬೇರೆ ಬೇರೆ ಸ್ಥಳದಲ್ಲಿ ಉನ್ನತ ಸ್ಥಾನದಲ್ಲಿ ಇರುತ್ತಾರೆ ನಾನು ಮಾತ್ರ ಈ ಕೆಳ ದರ್ಜೆಯ ಸ್ಥಳದಲ್ಲಿ ಕಾರ್ಯ ನಿರ್ವಹಿಸುತ್ತಿರುವೆನಲ್ಲಾ ಎಂದು ಸದಾ ಕೊರಗುತ್ತಾನೆ. ತನ್ನ ಬುದ್ದಿ ಶಕ್ತಿಯಿಂದ ಇತರರಿಗೆ ಒಳ್ಳೆಯದನ್ನು ಮಾಡದೆ ತನಗೆ ತಾನೆ ಅನ್ಯಾಯ ಮಾಡಿ ಕೊಳ್ಳುತ್ತಾನೆ. ಇದು ಒಂದು ಸರಿ ಪಡಿಸಲಾಗದ ರೋಗವಾಗಿರುತ್ತದೆ. ಅವನ ಮನಸ್ಸು ವಿಕೃತ ಹೊಂದಿದಾಗ ತನಗೆ ಜೀವನದಲ್ಲಿ ಅನ್ಯಾಯವಾಗಿದೆ ಎಂದು ಭಾವಿಸುತ್ತಾನೆ. ಆನೆಕ ಸಲ ದುರಹಂಕಾರಿಯಾಗುತ್ತಾನೆ. ಅವನು ಮಾಡುವ ಸಿಹಿ ಊಟವು ಅವನಿಗೆ ಕಹಿಯಾಗಿರುತ್ತದೆ. ಇತಂಹ ಮನೊಭಾವನೆ ಹೊಂದಿದ ವ್ಯೆಕ್ತಿಗಳಿಂದ ದಕ್ಷತೆ ಪಡೆಯುವುದು ಕಷ್ಟ.ಕೆಲವು ಸಲ ಸಾದ್ಯವಿದ್ದರೂ ಅವರ ಆಂತರಿಕ ಕೊರಗಿನಿಂದ ವಾತಾವರಣವು ಉಲ್ಲಾಸಕರವಾಗಿರುವುದಿಲ್ಲ ಅಲ್ಲದೆ, ಕಛೇರಿಯಲ್ಲಿ ಇವರಿಗಿಂತ ಕಡಿಮೆ ವಿದ್ಯಾರ್ಹತೆಯುಳ್ಳವರನ್ನು ಕಂಡು ಮಾನಸಿಕ ಕ್ಷೋಬೆಗೆ ಒಳಗಾಗುತ್ತಾನೆ. ಕಛೇರಿಯಲ್ಲಿ ಶಿಸ್ತು ಪರಿಪಾಲನೆಗಾಗಿ ತಿಳುವಳಿಕೆ ಪತ್ರ. ನೋಟಿಸು ನೀಡಿದಲ್ಲಿ ಪ್ರತಿಕಾರ ಮನೋಭಾವನೆ ತಾಳಿ ಉತ್ತರ ನೀಡುತ್ತಾನೆ. ಕಾನೂನು ಜ್ಞಾನ ತಿಳಿದುಕೊಳ್ಳಲು ಸಮರ್ಥನಾಗಿರುವುದರಿಂದ ತನ್ನ ಸಹೋದ್ಯೋಗಿಗಳಿಗೆ ಪ್ರಚೋದನೆ ನೀಡಿ ಕಛೇರಿಯಲ್ಲಿ ಗುಂಪುಗಾರಿಕೆ ಮಾಡುತ್ತಾನೆ. ಇದರಿಂದ ಆಡಳಿತ ಯಂತ್ರ ಕುಂಠಿತಗೊಳ್ಳುತ್ತದೆ.

ಕಡಿಮೆ ಕಲಿತವನು ನಂತರ ತನ್ನ ಬುದ್ದಿ ಶಕ್ತಿಯಿಂದ ಉನ್ನತ ಉನ್ನತ ಹುದ್ದೆ ಅಲಂಕರಿಸಿದಾಗ ನಾನು ಇಷ್ಟೊಂದು ಅಲ್ಪನು ಇಂತಹ ಉನ್ನತ ಹುದ್ದೆಗೆ ಬಂದಿರುವುದು ತನ್ನ ಅದೃಷ್ಟವೆಂದು ಇದು ತನ್ನ ಪರಿಶ್ರಮಕ್ಕೆ ಸಭ್ಯತೆಗೆ, ನ್ಯಾಯ ನೀತಿಗೆ ದೊರೆತೆ ಪುರಸ್ಕಾರವೆಂದು ಸಂತೋಷಹೊಂದುತ್ತಾನೆ. ಅಪಮಾನ/ ಅವಮಾನದ ಸ್ಥಿತಿಗಳು ಬಂದಾಗ ಅದನ್ನು ಸಹಿಸಿಕೊಳ್ಳತ್ತಾನೆ. ಮೂಲದಲ್ಲಿ ತನು ಸಣ್ಣವನು ಅಲ್ಲವೇ ತನ್ನಿಂದಲೂ ತಪ್ಪು ಆಗಿರ ಬಹುದು ಎಂದು ರಾಜಿಸ್ವಭಾವ ಹೊಂದಿರುತ್ತಾನೆ. ಅಲ್ಲದೇ ಇನ್ನು ಹೆಚ್ಚು ಹೆಚ್ಚು ಕೆಲಸವನ್ನು ಕೃತಜ್ಞತೆ ಭಾವದಿಂದ ನಿರ್ವಹಿಸುತ್ತಾನೆ. ಕಾರಣ ಗ್ರೂಪ್ 'ಡಿ" ನೇಮಕಾತಿ ಮಾಡುವಾಗ ಎಸ್.ಎಸ್.ಎಲ್.ಸಿ.ಪಾಸಾದವರನ್ನು ನೆಮಕಾತಿ ಮಾಡಿಕೊಳ್ಳಬಾರದು. ಪದವೀಧರನ್ನು ಎಂದಿಗೂ ನೇಮಕ ಮಾಡಿಕೊಳ್ಳಲೇಬಾರದು

ಇನ್ನು "ಸಿ'' ಮತ್ತು "ಬಿ" ಹುದ್ದೆಗಳಿಗೆ ಸಂಬಂಧಿಸಿದಂತೆ "ಸಿ" ಹುದ್ದೆಯ ನೆಮಾಕಾತಿ ಸಂದರ್ಭದಲ್ಲಿ 10–15 ರಿಯಾಯ್ತಿ ನೀಡಬಹುದು ಮತ್ತು "ಬಿ" ಹುದ್ದೆಯ ನೆರ ನೇಮಕಾತಿ ಸಮಯದಲ್ಲಿ 50% ರಿಯಾಯತಿ ತೊರಬುದುದು. ಅಂದರೆ "ಸಿ" ಗ್ರೂಪ್ ಹುದ್ದೆಯ ನೆಮಕಾತಿಯಲ್ಲಿ ಕೆಲವು ಪದವೀಧರನ್ನು ನೇಮಿಸಬಹುದು ಆದರೆ ಮೋದಲ ದರ್ಜೆಯಲ್ಲಿ ಪಾಸದ ಪದವೀಧರರನ್ನು ನೇಮಿಸಬಾರದು ಅದೇ ಪ್ರಕಾರ "ಬಿ" ಹುದ್ದೆಯ ನೆಮಕಾತಿಯಲ್ಲಿ ಪಿಎಚ್‌ಡಿ ಮಾಡಿದವರನ್ನು ಎಂದಿಗೂ ನೆಮಕಾತಿ ಮಾಡಿಕೊಳ್ಳಬಾರದು. ಅಗ ಅಡಳಿತದಲ್ಲಿ ಅಂತರಿಕ ಕೊರಗು ನಿಯಂತ್ರಿಸಬಹುದು. ಇದರ ಉದ್ದೇಶ ವಿದ್ಯಾರ್ಹತೆಗೆ ಸರಿಸಮಾನವಾದ ಸ್ಥಾನಮಾನ ಕಲ್ಪಿಸುವುದಾಗಿರುತ್ತದೆ. ಈ ಪ್ರಕ್ರಿಯೆಯನ್ನು ಅಳವಡಿಸಿದಲ್ಲಿ ಸ್ವಲ್ಪಮಟ್ಟಿಗಾದರು ನೀರುದ್ಯೋಗವನ್ನು ಹೊಗಲಾಡಿಸಲು ಸಾಧ್ಯವಾಗಬಲ್ಲದು

ಅದಕಾರಣ ಸರ್ಕಾರದಲ್ಲಿ ನೆಮಕಾತಿಗಳನ್ನು ಮಾಡಿಕೊಳ್ಳುವಾಗ ಕೆಳಕಾಣಿಸಿದಂತೆ ವರ್ಗಿಕರಣ ಮಾಡುವುದು ಸೂಕ್ತವೆನಿಸುತ್ತದೆ.

| ಕ್ರ.ಸ | ಮುನ್ಸಿಪಲ್ ಹುದ್ದೆ | ನಿಗದಿಪಡಿಸಬೇಕಾದ ವಿದ್ಯಾರ್ಹತೆ | |
|---|---|---|---|
| | | ಕನಿಷ್ಟ | ಗರಿಷ್ಟ |
| 1 | ಪೌರಕಾರ್ಮಿಕ/ಗ್ರೂಪ್ "ಡಿ" | 8 ನೇ ತರಗತಿ ಫೇಲಾಗಿರಬೇಕು | ಎಸ್.ಎಸ್. ಎಲ್.ಸಿ ಅನುತ್ತೀರ್ಣ ಎಸ್.ಎಸ್.ಎಲ್.ಸಿ 50ಕ್ಕಿಂತ ಕಡಿಮೆ ಅಂಕಗಳು |
| 2 | ಕಿರಿಯ ಸಹಾಯಕರು /ದ್ವಿ.ದ.ಸ | ಎಸ್.ಎಸ್.ಎಲ್.ಸಿ ಪಾಸಾಗಿರ ಬೇಕು | ಪದವಿ ಪರಿಕ್ಷೆಯಲ್ಲಿ ಅನುತ್ತೀರ್ಣ |
| 3 | ಪ್ರ.ದ.ಸ/ ಸಹಾಯಕರು | ಸಾಮಾನ್ಯ ಪಧವೀಧರರು | ಪದವಿ ಪರೀಕ್ಷೇಯಲ್ಲಿ 65% ಕಿಂತ ಕಡಿಮೆ ಅಂಕಗಳು |
| 4 | ಗ್ರೂಪ್ "ಬಿ" | ಸಾಮಾನ್ಯ ಪಧವೀಧರರು | ದ್ವಿತೀಯ ದರ್ಜೆಯಲ್ಲಿ ಸ್ನಾತಕೋತ್ತರ ಪದವೀಧರರು |
| 5 | ಗ್ರೂಪ್ "ಎ" | ಸಾಮಾನ್ಯ ಪಧವೀಧರರು | ಮಿತಿ ಇರುವುದಿಲ್ಲ |

ಉದಾಹರಣಾರ್ಥವಾಗಿ ವಿದ್ಯತ್ ತಂತಿಯನ್ನು ಪ್ಲಾಸ್ಟಿಕ್‌ನಿಂದ ಮುಚ್ಚಿರುತ್ತಾರೆ. ವಿದ್ಯುತ್ ಪ್ರವಾಹ ಹರಿಯುವ ತಾಮ್ರದ ತಂತಿ ಪ್ಲಾಸ್ಟಕ್‌ನಿಂದ ಮುಚ್ಚದಿದ್ದರೆ ಶಕ್ ತಗಲಿ ಆಘಾತವಾಗುವುದಲ್ಲದೆ ಅದರ ಸದುಪಯೋಗ ಪಡೆದುಕೊಳ್ಳಲು ಸಾಧ್ಯ ಆಗಲಾರದು. ತಾಮ್ರದ ತಂತಿಗೆ ಪ್ಲಾಸ್ಟಿಕ್‌ನಿಂದ ಮುಚ್ಚಿರುವುದರಿಂದಲೇ ನಿರ್ಭಯವಾಗಿ ಅದರ ಉಪಯೊಗ ಮಾಡಿಕೊಳ್ಳಬಹುದು. ಅದೇ ಪ್ರಕಾರ ಆಧಿಕಾರಿಗಳು ಸರ್ಮರ್ಥವಾಗಿ ಕೆಲಸ ನಿರ್ವಹಿಸಬೇಕಾದರೆ ಐಕ್ಯೂ ಕಡಿಮೆ ಇರುವ ಜವಾನರ ಅವಶ್ಯಕತೆಬೇಕಾಗುತ್ತದೆ. ಒಂದು ಪಕ್ಷ ಜವಾನರು ಹೆಚ್ಚಿನ ಐಕ್ಯೂ ಹೊಂದಿದ್ದರೆ ಅದು ಪ್ಲಾಸ್ಟಿಕ್ ಇಲ್ಲದ ವಿದ್ಯುತ್ ತಂತಿಯಂತೆ ಶಾರ್ಟ್ ಸರ್ಕ್ಯೂಟ್ ಆಗುತ್ತದೆ. ಗೌಪ್ಯತೆ ಉಳಿಯಲಾರದು ಅಲ್ಲಿ ವಿದ್ಯುತ್ ಪೋಲಾಗುತ್ತದೆ. ಹೆಚ್ಚು ಕಲಿತ ಜವಾನರಿಂದ ಅನುಕೂಲಕ್ಕಿಂತ ಅನಾನೂಕೂಲತೆಯೇ ಹೆಚ್ಚು.

ಸರ್ವರಿಗೂ ಸಮಾನ ಹಕ್ಕು ಎಂದು ನಮ್ಮ ಸಂವಿಧಾನ ಹೆಳುತ್ತದೆ. ಅದನ್ನು ಆಕ್ಷರಶಃ ಒಪ್ಪಿಕೊಳ್ಳ ಬೇಕಾದ ಮಾತೇ ಅಗಿದೆ. ಹೆಚ್ಚಿನ ಶಿಕ್ಷಣ ಕಲಿತು ಮೇಲಿನ ಹುದ್ದೆಯಲ್ಲಿ ಇರುವವರಿಗೆ ಉನ್ನತ ಮಟ್ಟದಸ್ಥಾನ ಮಾನ, ನೀಡುವುದು ಸರಿ ಅದೇ ಪ್ರಕಾರ ಕಡಿಮೆ ಶಿಕ್ಷಣ ಪಡೆದವರಿಗೆ ಅವರ ಬುದ್ಧಿಗೆ ತಕ್ಕಂತೆ ಕೆಲಸ ಕಾರ್ಯಗಳನ್ನು ಒದಗಿಸುವ ವ್ಯವಸ್ಥೆಯನ್ನು ನಾವು ರೂಪಿಸಬೇಕಾಗಿದೆ. ಅದರ ಬದಲು ಹೆಚ್ಚಿನ ಶಿಕ್ಷಣ ಪಡೆದವರು ಕೆಳಗಿನ ಹುದ್ದೆಯನ್ನು ಅಲಂಕರಿಸಿದಲ್ಲಿ ಅದು ಸ್ವಯಂಕೃತ ಅಪರಾಧ ಆಗುತ್ತದೆ. ಮತ್ತು ಅವನಲ್ಲಿ ಮನೋರೋಗವು ಬೆಳೆಯಲು ಅವಕಾಶ ನಿಡಿದಂತಾಗುತ್ತದೆ. ಅದೇ ಸಮಯ ಕಡಿಮೆ ಕಲಿತವರಿಗೆ ನ್ಯಾಯೋಚಿತವಾಗಿ ಸಿಗಬೆಕಾದ ಅವಕಾಶಗಳಿಂದ ಅವರು ವಂಚಿತರಾಗುತ್ತಾರೆ. ಇದು ದುರ್ಬಲರ ಮೇಲೆ ಮಾಡುವ ಅನ್ಯಾಯವಾಗಿದೆ. ಇದು ಕೊನೆಗೆ ಸಮಾಜದಲ್ಲಿ ದುಷ್ಕೃತ್ಯಗಳಿಗೆ ನಾಂದಿ ಆಗುತ್ತದೆ. ಈ ದುರಂತವನ್ನು ತಪ್ಪಸಬೇಕಾದರೆ ಕಡಿಮೆ ಬುದ್ಧಿಶಕ್ತಿಯನ್ನು ಹೊಂದಿದವರ ಹಕ್ಕನ್ನು ರಕ್ಷಿಸುವುದು ಕೂಡಾ ಸರ್ಕಾರದ ಕರ್ತವ್ಯವಾಗಿದೆ. ಇದನ್ನು ಪಾಲಿಸಿದಾಗಲೇ ಸಾಮಾಜಿಕ ನ್ಯಾಯ ದೊರಕಿಸಿ ಕೊಟ್ಟಂತೆ ಆಗುತ್ತದೆ. ಆಡಳಿತದಲ್ಲಿ ದಕ್ಷತೆ ಸಹಜವಾಗಿ ಉಂಟಾಗುತ್ತದೆ.